ಸೋಮವಾರ, ಮೇ 12, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಾಗರಿಕರಿಗೆ ಆಶ್ರಯ

ಭಾರತ–ಪಾಕಿಸ್ತಾನ ಸಂಘರ್ಷದಿಂದಾಗಿ ಜನರನ್ನು ಸುರಕ್ಷಿತ ಜಾಗಗಳಿಗೆ ಸ್ಥಳಾಂತರಿಸಲಾಗಿದ್ದು, ಕಾಶ್ಮೀರದ ಉರಿ ಪಟ್ಟಣ ಸಮೀಪದ ಶಾಲೆಯೊಂದರಲ್ಲಿ ಆಶ್ರಯ ನೀಡಲಾಗಿದೆ





ಡೊನಾಲ್ಡ್ ಟ್ರಂಪ್ ಮಧ್ಯಸ್ಥಿಕೆ; ಹೊಸ ಚರ್ಚೆಗೆ ನಾಂದಿ

• ಝುಲ್ಫೀಕರ್ ಮಜೀದ್

ಶ್ರೀನಗರ: ಅಮೆರಿಕದ ಮಧ್ಯಸ್ಥಿಕೆಯಲ್ಲಿ ಭಾರತ ಹಾಗೂ ಪಾಕಿಸ್ತಾನದ ನಡುವೆ ಕದನ ವಿರಾಮ ಏರ್ಪಟ್ಟ ಬೆನ್ನಲ್ಲೇ, 'ಕಾಶ್ಮೀರ ವಿಚಾರ'ಕ್ಕೆ ಸೂಕ್ತ 'ಪರಿಹಾರ' ಹುಡುಕಲು ನೆರವಾಗುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೆರವಿನ ಹಸ್ತ ಚಾಚಿದ್ದಾರೆ. ಆದರೆ, ದೀರ್ಘಕಾಲದಿಂದ ಬಾಕಿ ಉಳಿದಿರುವ 'ಕಾಶ್ಮೀರ ವಿಚಾರ'ವನ್ನು ಮತ್ತೆ ಅಂತರ-ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುತ್ತಿರುವ ಕುರಿತು ಕಣಿವೆ ಭಾಗದ ಜನರಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಅಣ್ವಸ್ತ್ರ ಹೊಂದಿರುವ ಎರಡು ರಾಷ್ಟ್ರಗಳು ಟ್ರಂಪ್ ಮಧ್ಯಸ್ಥಿಕೆಯಲ್ಲಿ ಗಡಿನಿಯಂತ್ರಣ ರೇಖೆ (ಎಲ್‌ಒಸಿ) ಹಾಗೂ ಅಂತರರಾಷ್ಟ್ರೀಯ ಗಡಿ ಭಾಗದಲ್ಲಿ ಕದನ ವಿರಾಮ ಘೋಷಿಸಲು ಶನಿವಾರ ಒಪ್ಪಿಕೊಂಡಿದ್ದವು. ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ ಬೆನ್ನಲ್ಲೇ, ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಭಯೋತ್ಪಾದಕರ ನೆಲೆಗಳ ಮೇಲೆ ಭಾರತವು ದಾಳಿ ನಡೆಸಿ ಧ್ವಂಸಗೈದಿತ್ತು. ಇದರ ಬೆನ್ನಲ್ಲೇ, ಭಾರತದ ಸೇನಾ ನೆಲೆಗಳನ್ನು ಗುರಿಯಾಗಿರಿಸಿ, ಪಾಕಿಸ್ತಾನವು ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳನ್ನು ನಡೆಸಿತ್ತು.

ಈಗ ಕಣಿವೆಯಲ್ಲಿ ಬಂದೂಕಿನಿಂದ ಗುಂಡಿನ ಮೊರೆತ ಕೊನೆಯಾಗಿದೆ. ಆದರೆ, ಕಾಶ್ಮೀರ ವಿಚಾರದಲ್ಲಿ ಟ್ರಂಪ್ ನೀಡಿರುವ ಆಹ್ವಾನವು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಟ್ರಂಪ್ ಅವರ ಈ ನಡೆಯು, ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ಬಳಿಕ ಭಾರತದ ಪ್ರಾಬಲ್ಯವನ್ನು ಕುಗ್ಗಿಸುವ ಯತ್ನವೇ ಎಂಬ ಅನುಮಾನಕ್ಕೆ ಕಾರಣವಾಗಿದೆ.

'ಆಡಳಿತಾತ್ಮಕವಾಗಿ ಯಾವುದೇ ವ್ಯಾಖ್ಯಾನ ನೀಡಿದರೂ, ಕಾಶ್ಮೀರ ಒಗ್ಗಟ್ಟಾಗಿಯೇ ಉಳಿಯಬೇಕು ಎಂಬುದು ಅವರ ಆಶಯವಾಗಿತ್ತು. ಹೀಗಾಗಿಯೇ ಸ್ನೇಹಿತ ಟ್ರಂಪ್ ಅವರು ಎರಡು ರಾಷ್ಟ್ರಗಳ ನಡುವೆ ಮಧ್ಯಸ್ಥಿಕೆ ವಹಿಸಿ ಸಮಸ್ಯೆ ಬಗೆಹರಿಸಲು ಯತ್ನಿಸಿದರು' ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ಸಚಿವ ಹಾಗೂ ಪಿಡಿಪಿಯ ಹಿರಿಯ ನಾಯಕ ನಯೀಂ ಅಖ್ತರ್ ಅವರು ಫೇಸ್‌ಬುಕ್‌ನಲ್ಲಿ ಬರೆದು-ಕೊಂಡಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಂಗ್ರಹ ಚಿತ್ರ —ಎಎಫ್‌ಪಿ ಚಿತ್ರ

ಕಣಿವೆ ರಾಜ್ಯಕ್ಕೆ ನೀಡಿದ ವಿಶೇಷ ಸ್ಥಾನಮಾನ ಹಿಂಪಡೆದಿರುವುದೇ 'ಅಂತಿಮ ಪರಿಹಾರ' ಎಂದು ಬಿಜೆಪಿ ನೇತೃತ್ವದ ಸರ್ಕಾರವು ಬಿಂಬಿಸಿತ್ತು. ಆದರೆ, ಇದೇ ಅಂತಿಮ ಪರಿಹಾರವಲ್ಲ ಎಂಬುದು ಕಣಿವೆಯಲ್ಲಿ ವ್ಯಕ್ತವಾಗುತ್ತಿರುವ ಅಭಿಪ್ರಾಯವನ್ನೇ ಟ್ರಂಪ್ ಕೂಡ ಅನುಮೋದಿಸಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ಗಡಿಯಾಚೆಗಿನ ಭಯೋತ್ಪಾದನೆ ಬೆಂಬಲಿ-ಸುವುದನ್ನು ನಿಲ್ಲಿಸುವ ತನಕ ಪಾಕಿಸ್ತಾನ ಜೊತೆಗೆ ಯಾವುದೇ ಮಾತುಕತೆ ನಡೆಸಲು ಭಾರತವು ಸ್ಪಷ್ಟವಾಗಿ ನಿರಾಕರಿಸಿತ್ತು. ಆದರೆ, ಕದನ ವಿರಾಮದ ವಿಚಾರದಲ್ಲಿ ಅಮೆರಿಕ ಮಧ್ಯಸ್ಥಿಕೆ ವಹಿಸಿದೆ ಎನ್ನಲಾಗುತ್ತಿದೆ. ಇದು, ಅಮೆರಿಕದ ರಾಜತಾಂತ್ರಿಕ ಭಾಗವಾಗಿ ನಡೆದ ಪ್ರಯತ್ನ ಎನ್ನಲಾಗುತ್ತಿದೆ. ಹೀಗಾಗಿ, ಅಮೆರಿಕದ ಈ ನಡೆಯು ಭಾರತದ ನಿಲುವಿಗೇ ಸಡ್ಡು ಹೊಡೆದಂತಾಗಿದೆ.

ಅಖ್ತರ್ ಅವರ ಫೇಸ್‌ಬುಕ್ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಜಮ್ಮುವಿನ ಸಿಟಿಜನ್ ಕೋ–ಆಪರೇಟಿವ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಅನಿಲ್ ಸೇಥಿ, 'ಇದು ಆಂತರಕವೂ ಅಲ್ಲ, ದ್ವಿಪಕ್ಷೀಯವೂ ಅಲ್ಲ, ಅಂತರ ರಾಷ್ಟ್ರೀಯ ಎಂಬುದು ಸಾಬೀತಾಯಿತು' ಎಂದಿದ್ದಾರೆ.

ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿರುವ ಕಾಶ್ಮೀರದ ಆರ್ಷೀದ್ ಅಜೀಜ್, 'ಇದು ಭಾರತಕ್ಕೆ ಹಿನ್ನಡೆ ತಂದಿದೆಯೇ? ವಿಶೇಷ ಸ್ಥಾನಮಾನ ಹಿಂಪಡೆದ ಬಳಿಕ ಭಾರತವು ಕಾಶ್ಮೀರ ವಿಚಾರ ಮೊದಲಿನಂತಿರುವುದಿಲ್ಲ, ಸಮಸ್ಯೆ ಶಾಶ್ವತವಾಗಿ ಬಗೆಹರಿಸ-ಲಾಗಿದೆ ಎಂದೇ ಭಾವಿಸಿತ್ತು. ಈಗ ಕಾಶ್ಮೀರ ವಿಚಾರ ಮತ್ತೆ ಸುದ್ದಿಯಾಗುತ್ತಿದ್ದು, ಜಾಗತಿಕ ಮಟ್ಟದಲ್ಲಿಯೂ ಚರ್ಚೆಯಾಗುತ್ತಿದೆ' ಎಂದು ವಿವರಿಸಿದ್ದಾರೆ.

ಆದರೆ, ಈ ವಾದವನ್ನು ಎಲ್ಲರೂ ಒಪ್ಪುತ್ತಿಲ್ಲ. 'ಕಾಶ್ಮೀರ ವಿಚಾರವು ಮತ್ತೆ ಅಂತರರಾಷ್ಟ್ರೀಯ ವಿಚಾರವಾಗಿಲ್ಲ. ಉಗ್ರರ ದಾಳಿಗೆ ಪ್ರತ್ಯುತ್ತರ ನೀಡುವ ಮೂಲಕ ಭಾರತವು ತನ್ನ ಅಧಿಕೃತ ನಿಲುವು ಪ್ರಕಟಿಸಿದೆ' ಎಂದು ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಇಲಾಖೆಯ ಮಾಜಿ ಮಹಾ ನಿರ್ದೇಶಕ ಶೇಷ ಪಾಲ ವೈದ್ ತಿಳಿಸಿದ್ದಾರೆ.

ಕಾಶ್ಮೀರ ವಿಚಾರದಲ್ಲಿ ಮೂರನೇ ವ್ಯಕ್ತಿಯ ಹಸ್ತಕ್ಷೇಪ ಒಪ್ಪಲು ಸಾಧ್ಯವಿಲ್ಲ. ಶಿಮ್ಲಾ ಒಪ್ಪಂದದಂತೆ, ಈ ವಿವಾದವು ಎರಡು ರಾಷ್ಟ್ರಗಳಿಗೆ ಸಂಬಂಧಿಸಿದ್ದಾಗಿದ್ದು, ಒಟ್ಟಿಗೆ ಕೂತು ಬಗೆಹರಿಸಿಕೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.



ದಾಳಿ–ಹಾನಿ ಜಮ್ಮು ಪ್ರದೇಶದಲ್ಲಿ ಕೋಟಮೈರಾ ಗ್ರಾಮದ ನಿವಾಸಿಯೊಬ್ಬರು ಪಾಕಿಸ್ತಾನ ಶನಿವಾರ ನಡೆಸಿದ ಫಿರಂಗಿ ದಾಳಿಯಲ್ಲಿ ಹಾನಿಗೆ ಒಳಗಾದ ತಮ್ಮ ಮನೆಯಲ್ಲಿ ನಿಂತಿದ್ದರು —ಎಎಫ್‌ಪಿ ಚಿತ್ರ

ಯಾವ ಪರಿಸ್ಥಿತಿಯಲ್ಲಿ 'ಕದನ ವಿರಾಮ' ಘೋಷಣೆ: ವಿಶೇಷ ಅಧಿವೇಶನಕ್ಕೆ ಒತ್ತಾಯ

ಸರ್ವ ಪಕ್ಷ ಸಭೆಗೆ ಕಾಂಗ್ರೆಸ್ ಆಗ್ರಹ

ಪಿಟಿಐ, ಪ್ರಜಾವಾಣಿ ವಾರ್ತೆ



ಸಚಿನ್ ಪೈಲಟ್

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ನಡುವಣ ಪ್ರಸ್ತುತ ಬಿಕ್ಕಟ್ಟು ಕುರಿತು ಚರ್ಚಿಸಲು ಕೇಂದ್ರ ಸರ್ಕಾರ ಸರ್ವ ಪಕ್ಷಗಳ ಮತ್ತೊಂದು ಸಭೆ ಕರೆಯಬೇಕು. ಅದರ ಅಧ್ಯಕ್ಷತೆ-ಯನ್ನು ಪ್ರಧಾನಿ ನರೇಂದ್ರ ಮೋದಿ ಅವರೇ ವಹಿಸಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಚಿನ್ ಪೈಲಟ್ ಭಾನುವಾರ ಆಗ್ರಹಿಸಿದರು

ಅಲ್ಲದೆ ಸದ್ಯದ ಪರಿಸ್ಥಿತಿಗಳ ಬಗ್ಗೆ ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನವನ್ನೂ ಕರೆಯಬೇಕು ಎಂದು ಅವರು ಒತ್ತಾಯಿಸಿದರು.

ರಾಹುಲ್, ಖರ್ಗೆ ಪತ್ರ: ಪಹಲ್ಗಾಮ್ ಭಯೋತ್ಪಾದಕ ದಾಳಿ, ಆಪರೇಷನ್ ಸಿಂಧೂರ, ಗಡಿಯಾಚೆಗಿನ ಗುಂಡಿನ ದಾಳಿ, 'ಕದನ ವಿರಾಮ' ಸೇರಿದಂತೆ ಹಲವು ವಿಷಯಗಳನ್ನು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನವನ್ನು ತಕ್ಷಣ ಕರೆಯಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಸಹ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ. ಭಯೋತ್ಪಾದನೆ ವಿರುದ್ಧ ಸಾಮೂಹಿಕ ಸಂಕಲ್ಪ ಪ್ರದರ್ಶಿಸಲು ಸಂಸತ್ತಿನ ಉಭಯ ಸದನಗಳ ವಿಶೇಷ ಅಧಿವೇಶನ ಕರೆಯುವುದು ಅಗತ್ಯವಾಗಿದೆ ಎಂದು ಪ್ರತಿಪಾದಿಸಿದ್ದಾರೆ.

ಸರ್ಕಾರಕ್ಕೆ ಕಾಂಗ್ರೆಸ್ ಕೇಳಿದ ಪ್ರಶ್ನೆಗಳು

- ಯಾವ ಪರಿಸ್ಥಿತಿಯಲ್ಲಿ 'ಕದನ ವಿರಾಮ' ಘೋಷಣೆಯಾಗಿದೆ. ಕೆಲ ಕ್ಷಣಗಳಲ್ಲೇ ಅದರ ಉಲ್ಲಂಘನೆಯೂ ಆಗಿದೆ. ಹೀಗಿರುವಾಗ ಮತ್ತೆ ಉಲ್ಲಂಘನೆ ಆಗುವುದಿಲ್ಲ ಎಂಬುದಕ್ಕೆ ಖಾತರಿ ಏನು?
- ಕಾಶ್ಮೀರದ್ದು ದ್ವಿಪಕ್ಷೀಯ ಸಮಸ್ಯೆ. ಅದನ್ನು ಅಂತರ ರಾಷ್ಟ್ರೀಕರಣಗೊಳಿಸುವುದು ಸರಿಯಲ್ಲ. ಆದರೆ ಕಾಶ್ಮೀರದ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ಈ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು.
- ಪಾಕಿಸ್ತಾನ ಆಕ್ರಮಿತ ಕಾಶ್ಮೀರವನ್ನು (ಪಿಒಕೆ) ಮರಳಿ ಪಡೆಯಬೇಕು ಎಂದು 1994ರಲ್ಲಿ ಸಂಸತ್ತು ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿತ್ತು. ಈ ಕುರಿತ ದ್ವಿಪಕ್ಷೀಯ ವಿಷಯದಲ್ಲಿ ಮೂರನೆಯವರ ಹಸ್ತ-ಕ್ಷೇಪಕ್ಕೆ ಅವಕಾಶವಿಲ್ಲ ಎಂದೂ ಹೇಳಲಾಗಿತ್ತು. ಈಗ ಈ ನಿರ್ಣಯವನ್ನು ಪುನರಾವರ್ತಿಸುವ ಸಮಯ ಬಂದಿದೆ. ಒಂದು ವೇಳೆ ನಿಲುವಿನಲ್ಲಿ ಬದಲಾವಣೆಯಾದರೆ, ಮೊದಲು ಅದನ್ನು ಚರ್ಚಿಸಬೇಕು. ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ ಈ ನಿರ್ಣಯವನ್ನು ಅಂಗೀಕರಿಸಲಾಗಿತ್ತು. ನಾವು ಅದಕ್ಕೆ ಈಗಲೂ ಬದ್ಧರಿದ್ದೇವೆ.
- ಭಾರತ– ಪಾಕಿಸ್ತಾನ ಸೇನಾ ಸಂಘರ್ಷದ ಆರಂಭದಲ್ಲಿ 'ಇದು ನಮಗೆ ಸಂಬಂಧಿಸಿದ್ದಲ್ಲ' ಎಂದು ಹೇಳಿದ್ದ ಅಮೆರಿಕ, ಎರಡೇ ದಿನಗಳಲ್ಲಿ ಅದು ಹೇಗೆ 'ಕದನ ವಿರಾಮ' ಘೋಷಿಸಿತು.
- ಭಾರತ ಮತ್ತು ಪಾಕಿಸ್ತಾನದ ನಡುವೆ ಸಾವಿರ ವರ್ಷಗಳಿಂದ ಸಮಸ್ಯೆಯಿದೆ ಎಂದು ಟ್ರಂಪ್ ಹೇಳಿದ್ದಾರೆ. ಆದರೆ, ಇವು ಅಕ್ಕ–ಪಕ್ಕದ ರಾಷ್ಟ್ರಗಳಾಗಿ 78 ವರ್ಷಗಳಷ್ಟೇ ಆಗಿವೆ.



ಸರ್ವ ಪಕ್ಷ ಸಭೆಯಲ್ಲಿ ಪ್ರಧಾನಿ ಭಾಗವಹಿಸುತ್ತಾರೆ ಎಂಬ ಭರವಸೆ ದೊರೆತರೆ ಮಾತ್ರ ಸಭೆಗೆ ಹಾಜರಾಗುವಂತೆ ವಿರೋಧ ಪಕ್ಷಗಳಲ್ಲಿ ಮನವಿ ಮಾಡುತ್ತೇನೆ
ಕಪಿಲ್ ಸಿಬಲ್, ರಾಜ್ಯಸಭಾ ಸದಸ್ಯ



ಇಸ್ರೇಲ್–ಗಾಜಾ ಯುದ್ಧವನ್ನು ಇಲ್ಲಿಯವರೆಗೂ ನಿಲ್ಲಿಸದ ಟ್ರಂಪ್, ಪಾಕ್ ವಿರುದ್ಧ ಸಂಘರ್ಷ ನಿಲ್ಲಿಸುವಂತೆ ಭಾರತದ ಮೇಲೆ ಒತ್ತಾಯ ಹೇರಿದ್ದಾರೆ. ಇದು ಭಾರತದ ಸಾರ್ವಭೌಮತೆ ಮೇಲಿನ ದಾಳಿ
ಸಂಜಯ್ ರಾವುತ್, ವಕ್ತಾರ, ಶಿವಸೇನಾ (ಯುಬಿಟಿ)

ಡ್ರೋನ್‌ನ ಅವಶೇಷ ಅಪ್ಪಳಿಸಿ ಯೋಧ ಹುತಾತ್ಮ

ಜಮ್ಮು/ಜೈಪುರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಉಧಮ್‌ಪುರ ಜಿಲ್ಲೆಯಲ್ಲಿನ ವಾಯುನೆಲೆಯಲ್ಲಿ ಭಾರತೀಯ ವಾಯುಪಡೆ ಶನಿವಾರ ಹೊಡೆದುರುಳಿಸಿದ ಪಾಕಿಸ್ತಾನ ಡ್ರೋನ್‌ನ ಅವಶೇಷ ಅಪ್ಪಳಿಸಿದ ಪರಿಣಾಮ ಯೋಧರೊಬ್ಬರು ಮೃತಪಟ್ಟಿದ್ದಾರೆ.

ಪಾಕಿಸ್ತಾನದ ಡ್ರೋನ್ ಅನ್ನು ಯಶಸ್ವಿಯಾಗಿ ಹೊಡೆದು ರುಳಿಸಲಾಗಿದೆ. ಆದರೆ ಅದರ ಅವಶೇಷವೊಂದು ವಾಯುನೆಲೆಯಲ್ಲಿ ಕರ್ತವ್ಯದಲ್ಲಿದ್ದ ಯೋಧರೊಬ್ಬರ ಮೇಲೆ ಬಿದ್ದಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜಸ್ಥಾನದ ಸುರೇಂದ್ರ ಸಿಂಗ್ ಮೊಗ ಜೀ ಅವರು ಭಾರತೀಯ ವಾಯು ಪಡೆಯಲ್ಲಿ 'ಅಸಿಸ್ಟೆಂಟ್ ಮೆಡಿಕಲ್ ಸರ್ಜೆಂಟ್' ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

ಪಾಕ್ ದುಸ್ಸಾಹಸ ಮುಂದುವರಿಸಿದರೆ ತಕ್ಕ ಪಾಠ: ಡಿಜಿಎಂಒ

100ಕ್ಕೂ ಅಧಿಕ ಉಗ್ರರು ಹತ

ನವದೆಹಲಿ (ಪಿಟಿಐ): 'ಮೇ 7ರಂದು ಭಾರತೀಯ ಸೇನೆಯು ಪಾಕಿಸ್ತಾನದ ಮುಖ್ಯ ತಾಣಗಳ ಮೇಲೆ ನಡೆಸಿದ 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ಯೂಸುಫ್ ಅಜರ್, ಅಬ್ದುಲ್ ಮಲಿಕ್ ರೌಫ್, ಮುದಸೀರ್ ಅಹಮದ್ ಸೇರಿದಂತೆ 100ಕ್ಕೂ ಅಧಿಕ ಭಯೋತ್ಪಾದಕರು ಹತರಾಗಿದ್ದಾರೆ' ಎಂದು ಭಾರತೀಯ ಸೇನೆ ಭಾನುವಾರ ತಿಳಿಸಿದೆ.

'ಒಂಬತ್ತು ಉಗ್ರರ ನೆಲೆಗಳನ್ನು ಗುರಿಯಾಗಿರಿಸಿಕೊಂಡು, ಎಚ್ಚರಿಕೆಯಿಂದ ನಿಖರವಾದ ದಾಳಿ ನಡೆಸಲಾಗಿತ್ತು' ಎಂದು ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕ (ಡಿಜಿಎಂಒ) ಲೆಫ್ಟಿನೆಂಟ್ ಜನರಲ್ ರಾಜೀವ್ ಘಯಿ ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಮೇ 7ರಿಂದ 10ರವರೆಗೆ ಭಾರತದ ಪಡೆಗಳು ನಡೆಸಿದ ದಾಳಿಯಲ್ಲಿ ಪಾಕಿಸ್ತಾನ ಸೇನೆಯ 35ರಿಂದ 40 ಮಂದಿ ಯೋಧರು ಮೃತಪಟ್ಟಿದ್ದಾರೆ. ಭಾರತವು ತನ್ನ ನಿರ್ದಿಷ್ಟ ಗುರಿಯನ್ನು ಸಾಧಿಸಿದೆ. ಮತ್ತೆ ಇಂತಹ ದುಸ್ಸಾಹಸ ಮುಂದುವರಿಸಿದರೆ, ಪಾಕಿಸ್ತಾನವು ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಭಾರತದ ಯುದ್ಧ ವಿಮಾನಗಳನ್ನು ಪಾಕ್ ಪಡೆಗಳು ಹೊಡೆದುರುಳಿಸಿವೆ ಎಂಬ ವಿದೇಶಿ ಮಾಧ್ಯಮಗಳ ವರದಿಗೆ ಪ್ರತಿಕ್ರಿಯಿಸಿದ ಅವರು, 'ನಾವು ಯುದ್ಧದ ಸ್ಥಿತಿಯಲ್ಲಿದ್ದೇವೆ. ನಷ್ಟಗಳು ಯುದ್ಧದ ಭಾಗವಾಗಿದೆ' ಎಂದು ಏರ್‌ಮಾರ್ಷಲ್ ಎ.ಕೆ. ಭಾರ್ತಿ ತಿಳಿಸಿದರು.

ಡಿಜಿಎಂಒ ರಾಜೀವ್ ಘಯಿ ಹೇಳಿದ್ದೇನು?:

- ಕಾರ್ಯಾಚರಣೆಯಲ್ಲಿ ಸಶಸ್ತ್ರ ಪಡೆಗಳ ಐವರು ಯೋಧರನ್ನು ಕಳೆದುಕೊಂಡಿದ್ದೇವೆ. ಅವರ ತ್ಯಾಗವನ್ನು ಸದಾ ನೆನಪಿನಲ್ಲಿಡಲಾಗುತ್ತದೆ.
- ಕದನ ವಿರಾಮ ನಡೆಸುವಂತೆ ಶನಿವಾರ ಮಧ್ಯಾಹ್ನ ಪಾಕಿಸ್ತಾನದ ಡಿಜಿಎಂಒ ಕರೆಮಾಡಿದ್ದರು. ಸಂಜೆ 5 ಗಂಟೆಯಿಂದಲೇ ಅನ್ವಯವಾಗುವಂತೆ ಭೂ, ನೌಕಾ, ವಾಯುದಾಳಿ ನಿಲ್ಲಿಸಲು ಎರಡು ಕಡೆಗಳಿಂದಲೂ ಒಪ್ಪಿಗೆ
- ಮಾತುಕತೆಗೆ ಒಪ್ಪಿದ ಬಳಿಕ ಪಾಕಿಸ್ತಾನದಿಂದ ಕದನ ವಿರಾಮ ಉಲ್ಲಂಘನೆ; ಅಲ್ಲಿನ ಸೇನಾ ನೆಲೆಗಳಾದ ರಫೀಖಿ, ಚಾಕ್ಲಾಲ್, ಮುರಿದ್, ರಹೀಮ್ ಯಾರ್ ಖಾನ್, ಸುಕ್ಕೂರ್, ಚುನಿಯಾನ್ ಕೇಂದ್ರಗಳ ಮೇಲೆ ಭಾರತದಿಂದ ಪ್ರತಿದಾಳಿ
- ಮೇ 9–10ರ ರಾತ್ರಿ ವೇಳೆ ಭಾರತದ ಪ್ರಮುಖ ಸೇನಾ ನೆಲೆ ಗುರಿಯಾಗಿರಿಸಿಕೊಂಡು, ಪಾಕಿಸ್ತಾನದಿಂದ ದಾಳಿ



ನವದೆಹಲಿಯಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಕುರಿತು ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕ (ಡಿಜಿಎಂಒ) ಲೆಫ್ಟಿನೆಂಟ್ ಜನರಲ್ ರಾಜೀವ್ ಘಯಿ (ಮಧ್ಯದಲ್ಲಿರುವವರು) ಮಾಹಿತಿ ನೀಡಿದರು. ಏರ್‌ಮಾರ್ಷಲ್ ಎ.ಕೆ. ಭಾರ್ತಿ, ವೈಸ್ ಆಡ್ಮಿರಲ್ ಎ.ಎನ್. ಪ್ರಮೋದ್ ಹಾಜರಿದ್ದರು — ಪಿಟಿಐ ಚಿತ್ರ

'ಪಾಕ್ ವಿಮಾನ ಹೊಡೆದುರುಳಿಸಿದ್ದೇವೆ'

'ಪಾಕಿಸ್ತಾನದ ವಿಮಾನಗಳು ಭಾರತರ ವಾಯುಪ್ರದೇಶ ಪ್ರವೇಶಿಸುವುದನ್ನು ತಡೆದಿದ್ದೇವೆ. ನಮ್ಮಲ್ಲಿ ಅವರ ಯುದ್ಧವಿಮಾನಗಳ ಅವಶೇಷಗಳಿಲ್ಲ. ಆದರೂ ಅವರ ಕೆಲವು ವಿಮಾನಗಳನ್ನು ಹೊಡೆದುರುಳಿಸಿದ್ದೇವೆ' ಎಂದು ಏರ್‌ಮಾರ್ಷಲ್ ಎ.ಕೆ. ಭಾರ್ತಿ ತಿಳಿಸಿದ್ದಾರೆ

'ನಾವು ನಿಗದಿಪಡಿಸಿದ ಗುರಿ ಸಾಧಿಸಿದ್ದೇವೆ. ನಮ್ಮ ಎಲ್ಲ ಪೈಲಟ್‌ಗಳು ಮರಳಿ ಮನೆಗೆ ಬಂದಿದ್ದಾರೆ' ಎಂದು ಹೇಳಿದ್ದಾರೆ.

ಸೇನಾ ಪಡೆ ಮುಖ್ಯಸ್ಥರ ಜೊತೆ ಮೋದಿ ಸಭೆ


ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಇಲ್ಲಿನ ಲೋಕ ಕಲ್ಯಾಣ ಮಾರ್ಗದಲ್ಲಿರುವ ತಮ್ಮ ನಿವಾಸದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿದೇಶಾಂಗ ಸಚಿವ ಎಸ್. ಜೈಶಂಕರ್ ಹಾಗೂ ಸೇನೆಯ ಮೂರು ಪಡೆಗಳ ಮುಖ್ಯಸ್ಥರ ಜೊತೆ ಸಭೆ ನಡೆಸಿದರು.

ಈ ವೇಳೆ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಮೂರು ಸಶಸ್ತ್ರ ಪಡೆಗಳ ಮುಖ್ಯಸ್ಥರಾದ ಅನಿಲ್ ಚೌಹಾಣ್ ಭಾಗಿಯಾಗಿದ್ದರು.

ಗಡಿ ಭಾಗದಲ್ಲಿ ಆತಂಕಕಾರಿ ಪರಿಸ್ಥಿತಿಯ ನಡುವೆಯೂ ಪಾಕಿಸ್ತಾನದಿಂದ ಹೊಸತಾಗಿ ಕದನ ವಿರಾಮ ಉಲ್ಲಂಘನೆಗಳು ನಡೆದಿಲ್ಲ. ಆದರೂ, ಈಗಿನ ಸ್ಥಿತಿಗತಿ ಕುರಿತಂತೆ ಪ್ರಧಾನಿ ಅವರು ಪರಾಮರ್ಶೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಕದನ ವಿರಾಮ ಒಳ್ಳೆಯದು; ಖರ್ಗೆ

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಖರ್ಗೆ

ಕಲಬುರಗಿ: 'ಭಾರತ ಮತ್ತು ಪಾಕಿಸ್ತಾನ ಕದನ ವಿರಾಮ ಮಾಡಿದ್ದು ಒಳ್ಳೆಯದು. ಜನರಿಗೆ ಬಹಳ ಸಮಾಧಾನವಾಗಿದೆ. ಇದರಿಂದ ಸಂತೋಷವಾಗಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಇಲ್ಲಿ ಭಾನುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ಕದನ ವಿರಾಮವನ್ನು ಡೊನಾಲ್ಡ್ ಟ್ರಂಪ್ ಮಾಡಿದರು, ಬೇರೆಯವರು ಮಾಡಿದರು ಎಂದು ಕ್ರೆಡಿಟ್ ತೆಗೆದುಕೊಳ್ಳುವ ಬಗ್ಗೆ ಮಾತನಾಡಬಾರದು. ದೇಶದ ಸುರಕ್ಷತೆಯಲ್ಲಿ ನಾವು ಮೊದಲೇ ಹೇಳಿದಂತೆ ಸರ್ಕಾರಕ್ಕೆ ಬೆಂಬಲ ನೀಡುತ್ತೇವೆ. ಉಳಿದ ವಿಷಯವನ್ನು ಅವಕಾಶ ಸಿಕ್ಕಾಗ ಮಾತನಾಡುತ್ತೇವೆ' ಎಂದರು.

'ವಿಶೇಷ ಅಧಿವೇಶನವನ್ನು ಕರೆಯುವಂತೆ ನಾವು ಮೊದಲಿನಿಂದಲೂ ಬೇಡಿಕೆ ಇರಿಸುತ್ತಿದ್ದೇವೆ. ಅಧಿವೇಶನ ಕರೆದರೆ ಎಲ್ಲರೂ ಚರ್ಚೆ ಮಾಡಿ, ಈಗಿನ ಸ್ಥಿತಿ ಏನಿದೆ? ಮುಂದೆ ನಾವು ಏನು ಮಾಡಬೇಕು ಎಂಬುದರ ಬಗ್ಗೆ ಪ್ರಧಾನಿ ಮಾತನಾಡಿದರೆ ಇಡೀ ದೇಶಕ್ಕೆ ಗೊತ್ತಾಗುತ್ತದೆ' ಎಂದು ಹೇಳಿದರು.

ಅನಿವಾರ್ಯ ಕ್ರಮ



ಪ್ರಲ್ಹಾದ ಜೋಶಿ


ಹುಬ್ಬಳ್ಳಿ: 'ವಿಶ್ವಮಟ್ಟದ ರಾಜತಾಂತ್ರಿಕ ವ್ಯವಸ್ಥೆಯಡಿ ಅನಿವಾರ್ಯವಾಗಿ ಕೆಲವು ಕ್ರಮಗಳನ್ನು ಕೈಗೊಳ್ಳ-ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನದ ವಿರುದ್ಧ ನಡೆಯುತ್ತಿರುವ ಕದನಕ್ಕೆ ವಿರಾಮ ಘೋಷಿಸಬೇಕಾಯಿತು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕದನ ವಿರಾಮ ಘೋಷಣೆ ನಂತರ ಕೆಲವರು ಸಂಭ್ರಮಪಟ್ಟಿದ್ದಾರೆ. ಇದು ದೇಶದ ಭದ್ರತೆ ವಿಚಾರವಾಗಿದ್ದು ಖುಷಿ ಪಡುವ ಅಗತ್ಯವಿಲ್ಲ. ಕೆಲವು ಆಂತರಿಕ ವಿಷಯ ಕುರಿತು ಆಡಳಿತಾತ್ಮಕವಾಗಿ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಈ ಕುರಿತು ವಿದೇಶಾಂಗ ಸಚಿವರು ಹೆಚ್ಚಿನ ಮಾಹಿತಿ ನೀಡುತ್ತಾರೆ' ಎಂದರು.

'ಪಾಕಿಸ್ತಾನದ್ದು ಯಾವಾಗಲೂ ಇಬ್ಬಗೆಯ ನೀತಿ. ಅಲ್ಲಿಯ ಮಿಲಿಟರಿ ಪಡೆ ಚುನಾಯಿತ ಸರ್ಕಾರದ ಮಾತು ಎಂದಿಗೂ ಕೇಳುವುದಿಲ್ಲ. ಅಲ್ಲಿಯ ಸರ್ಕಾರವೇ ಭಯೋ-ತ್ಪಾದನೆಯನ್ನು ಪೋಷಿಸುತ್ತ ಬಂದಿದೆ. ಇದು ಸರಿಯಲ್ಲ. ಕದನ ವಿರಾಮ ಘೋಷಿಸಿದ ನಂತರವೂ ಪಾಕಿಸ್ತಾನ ಗಡಿಯಲ್ಲಿ ಗುಂಡಿನ ಚಕಮಕಿ ನಡೆಸಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಎರಡು-ಮೂರು ದಿನಗಳಿಂದ ಗಡಿಯಲ್ಲಿ ನಡೆದ ಸಂಘರ್ಷದಲ್ಲಿ ನಮ್ಮ ಸೈನಿಕರು, ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡಿದ್ದಾರೆ. ನಮ್ಮ ಮಿಲಿಟರಿ ಪಡೆಗೆ ಎಲ್ಲ ಸ್ವಾತಂತ್ರ್ಯ ಕೊಡಲಾಗಿತ್ತು. ಸಂಘರ್ಷದಲ್ಲಿ ಸಾಕಷ್ಟು ಸಾವು-ನೋವು ಸಂಭವಿಸಿವೆ' ಎಂದು ಹೇಳಿದರು.

'ಟ್ರಂಪ್ ಮಾತು ಕೇಳಿದ್ದು ತಪ್ಪು'



ಬಸವರಾಜ ಹೊರಟ್ಟಿ

ಹುಕ್ಕೇರಿ (ಬೆಳಗಾವಿ ಜಿಲ್ಲೆ): 'ಭಾರತ ಮತ್ತು ಪಾಕಿಸ್ತಾನ ನಡುವೆ ನಡೆಯುತ್ತಿದ್ದ ಸೇನಾ ಕಾರ್ಯಾಚರಣೆ ನಿಲ್ಲಿಸಿದ ಕ್ರಮ ಸರಿಯಲ್ಲ. ಪ್ರಧಾನಿ ಮೋದಿಯವರು ಯುದ್ಧದ ವಿಚಾರದಲ್ಲಿ ಗಟ್ಟಿ ಮತ್ತು ಕಠಿಣ ನಿರ್ಧಾರ ಕೈಗೊಳ್ಳಬೇಕಿತ್ತು. ಯಾರ ಮಾತನ್ನೂ ಕೇಳದೆ ದಾಳಿ ಮುಂದುವರಿಸಿ ಪಾಕಿಸ್ತಾನವನ್ನು ನಾಶ ಮಾಡಬೇಕಿತ್ತು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಪಟ್ಟಣದಲ್ಲಿ ಭಾನುವಾರ ಮಾಧ್ಯಮಿಕ ಶಾಲಾ ಶಿಕ್ಷಕರ ಪತ್ತಿನ ಸಂಘದ ಬೆಳ್ಳಿಮಹೋತ್ಸವದಲ್ಲಿ ಪಾಲ್ಗೊಳ್ಳುವ ಮುನ್ನ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಪಾಕಿಸ್ತಾನ ನಂಬಿಕೆಗೆ ಅರ್ಹವಾದ ದೇಶವಲ್ಲ. ಕದನ ವಿರಾಮದ ನಂತರವೂ ಮತ್ತೆ ದಾಳಿ ಮಾಡಿದ್ದಾರೆ. ಅವರು ನಮ್ಮ ದೇಶದ ವೈರಿಗಳು. ಅವರಿಂದ ದೇಶಕ್ಕೆ ಎಂದೂ ಒಳ್ಳೆಯದಾಗುವುದಿಲ್ಲ. ಬೇರೆಯವರ ಮಾತು ಕೇಳಿ ಕಾರ್ಯಾಚರಣೆ ನಿಲ್ಲಿಸಬಾರದಿತ್ತು' ಎಂದು ಅಸಮಾಧಾನ ಹೊರಹಾಕಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಪಾಕಿಸ್ತಾನ ಮತ್ತು ಭಾರತದ ನಡುವೆ ನಡೆದಿರುವ ಸಂಘರ್ಷದ ಸಂಧಾನಕ್ಕೆ ಅಮೆರಿಕ ಅಧ್ಯಕ್ಷ ಟ್ರಂಪ್ ಮಧ್ಯಸ್ಥಿಕೆ ವಹಿಸಲು ಅವರು ಯಾರು? ಅವರ ದೇಶದ ವಿಚಾರದಲ್ಲಿ ಮೋದಿಯವರು ಏನನ್ನಾದರು ಹೇಳಿದರೆ ಕೇಳ್ತಾರೇನು? ಟ್ರಂಪ್ ಮಾತು ಕೇಳಿದ್ದು ತಪ್ಪು' ಎಂದರು.

ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಶ್ರಮಿಸುವೆ: ಟ್ರಂಪ್

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ಕಾಶ್ಮೀರ ಸಮಸ್ಯೆಗೆ ಸಾವಿರ ವರ್ಷಗಳ ಬಳಿಕ ಪರಿಹಾರ ದೊರೆಯಬಹುದೇ ಎಂಬುದನ್ನು ನೋಡಲು ನಿಮ್ಮಿಬ್ಬರ ಜತೆಗೆ ನಾನು ಕೆಲಸ ಮಾಡುತ್ತೇನೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಸೇನಾ ಸಂಘರ್ಷ ಶಮನಗೊಳಿಸಿ 'ಕದನ ವಿರಾಮ'ಕ್ಕೆ ತಲುಪಿದ್ದಕ್ಕಾಗಿ ಭಾರತ ಮತ್ತು ಪಾಕಿಸ್ತಾನವನ್ನು ಶ್ಲಾಘಿಸುತ್ತೇನೆ ಎಂದಿರುವ ಅವರು, ಉಭಯ ದೇಶಗಳ ನಾಯಕರನ್ನು ದೇವರು ಆಶೀರ್ವದಿಸಲಿ ಎಂದು 'ಟ್ರೂತ್–ಸೋಷಿಯಲ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ವ್ಯಾಪಾರ ಹೆಚ್ಚಿಸುವೆ: 'ಈ ಎರಡೂ ಪ್ರಮುಖ ದೇಶಗಳ ಜತೆಗೆ ವ್ಯಾಪಾರವನ್ನು ಗಣನೀಯವಾಗಿ ಹೆಚ್ಚಿಸಲಿದ್ದೇನೆ' ಎಂದೂ ಅವರು ಹೇಳಿದ್ದಾರೆ.

'ಹಲವರ ಸಾವು, ನೋವು ಮತ್ತು ವಿನಾಶಕ್ಕೆ ಕಾರಣ ಆಗಬಹುದಾದ ಸೇನಾ ಸಂಘರ್ಷವನ್ನು ನಿಲ್ಲಿಸುವ ಅಗತ್ಯವನ್ನು ಅರಿತುಕೊಂಡ ಎರಡೂ ದೇಶಗಳ ಬಲಿಷ್ಠ ನಾಯಕತ್ವದ ಬಗ್ಗೆ ನನಗೆ ತುಂಬಾ ಹೆಮ್ಮೆಯಿದೆ' ಎಂದು ಅವರು ಹೇಳಿದ್ದಾರೆ.

ಟ್ರಂಪ್ ಕಾರ್ಯಕ್ಕೆ ಮೆಚ್ಚುಗೆ: ಭಾರತ–ಪಾಕ್ ಮಧ್ಯೆ ಸೇನಾ ಸಂಘರ್ಷ ಶಮಕ್ಕೆ ಟ್ರಂಪ್ ನಡೆಸಿದ ಯತ್ನವನ್ನು ಹಲವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

'ದೀರ್ಘ ಕಾಲದಿಂದ ಅಸ್ಥಿರವಾಗಿದ್ದ ಪ್ರದೇಶ ಈಗ ಸ್ಥಿರತೆಯತ್ತ ಸಾಗಿದೆ. ಇದು ಅಷ್ಟು ಸುಲಭದ ಕೆಲಸವಲ್ಲ. ಈ ಮೂಲಕ ಟ್ರಂಪ್ ಅವರು ಶಾಂತಿಯತ್ತ ತಮ್ಮ ಬದ್ಧತೆಯನ್ನು ಪ್ರದ-ರ್ಶಿಸಿದ್ದಾರೆ' ಎಂದು ಅಮೆರಿಕದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೈಕ್ ವಾಲ್ಟ್ಸ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಅಮೆರಿಕದ ವಿದೇಶಾಂಗ ವ್ಯವಹಾರಗಳ ಸದನ ಸಮಿತಿಯು ಟ್ರಂಪ್ ಅವರನ್ನು ಶಾಂತಿಯ ಅಧ್ಯಕ್ಷ ಎಂದು ಕರೆದಿದೆ. 'ಭಾರತ ಮತ್ತು ಪಾಕಿಸ್ತಾನದ ಸಂಘರ್ಷ ತಿಳಿಗೊಳಿಸಲು ಯತ್ನಿಸಿದ ಟ್ರಂಪ್ ಅವರು ನೊಬೆಲ್ ಶಾಂತಿ ಪ್ರಶಸ್ತಿಗೆ ಅರ್ಹರು' ಎಂದು ಬಲಪಂಥೀಯ ರಾಜಕೀಯ ಕಾರ್ಯಕ-ರ್ತರಾದ ಲಾರಾ ಲೂಮರ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಶ್ರೀನಗರದಲ್ಲಿ ಸಿಲುಕಿದ್ದ 13 ಮಂದಿಗೆ ಎಚ್‌ಡಿಕೆ ನೆರವು

ಕರ್ನಾಟಕದ ವಿದ್ಯಾರ್ಥಿಗಳು ವಾಪಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಶ್ರೀನಗರದ ಶೇರ್-ಇ-ಕಾಶ್ಮೀರ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ಕರ್ನಾಟಕದ 13 ವಿದ್ಯಾ-ರ್ಥಿಗಳನ್ನು ಸುರಕ್ಷಿತವಾಗಿ ವಾಪಸ್ ಕರೆತರಲಾಗಿದೆ.

ಪಾಕಿಸ್ತಾನದ ದಾಳಿ ನಡುವೆ ಉದ್ರಿಕ್ತ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದ ವಿದ್ಯಾರ್ಥಿಗಳನ್ನು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ನಿರ್ದೇಶನದ ಮೇರೆಗೆ ಕಾರ್ಯ ಪ್ರವೃತ್ತರಾದ ಅಧಿಕಾರಿಗಳು ಜಮ್ಮುವಿನಿಂದ ರಾಜ್ಯದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆ ತರುವಲ್ಲಿ ಯಶಸ್ವಿ-ಯಾಗಿದ್ದಾರೆ.

'ಪಾಕಿಸ್ತಾನವು ಅಧರ್ಮ ಮಾರ್ಗದಲ್ಲಿ ಭಾರತದ ಮೇಲೆ ದಾಳಿ ನಡೆಸುತ್ತಿದ್ದು, ಅದಕ್ಕೆ ಪ್ರತ್ಯುತ್ತರ ನೀಡಲಾಗುತ್ತಿದೆ. ಅಲ್ಲದೆ, ಕಣಿವೆ ರಾಜ್ಯದಲ್ಲಿನ ಎಲ್ಲರ ಜೀವ ರಕ್ಷಣೆ ಮಾಡುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸೂಚನೆಯಂತೆ ವಿದ್ಯಾರ್ಥಿಗಳ ನೆರವಿಗೆ ಸರ್ವ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಈ ಕಾರ್ಯಾಚರಣೆಗೆ ನೆರವಾದ ಎಲ್ಲವರಿಗೂ ಧನ್ಯವಾದ ಸಲ್ಲಿಸುತ್ತೇನೆ' ಎಂದು ಎಚ್.ಡಿ. ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

'ಎಲ್ಲಾ ವಿದ್ಯಾರ್ಥಿಗಳು ಈಗಾಗಲೇ ನವದೆಹಲಿ ತಲುಪಿದ್ದು, ಅವರನ್ನು ಸುರಕ್ಷಿತವಾಗಿ ಬೆಂಗಳೂರಿಗೆ ಕಳಿಸುವ ವ್ಯವಸ್ಥೆ ಮಾಡಲಾಗಿದೆ' ಎಂದು ಸಚಿವರು ಹೇಳಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ಚನ್ನಪಟ್ಟಣ ತಾಲ್ಲೂಕಿನ ತಗಚಗೆರೆ ಗ್ರಾಮದ ವಿದ್ಯಾರ್ಥಿ ಹರ್ಷಿತ್ ಅವರ ಪೋಷಕರು ಜಮ್ಮುವಿನಲ್ಲಿ ಸಿಲುಕಿರುವ ತಮ್ಮ ಪುತ್ರನನ್ನು ರಕ್ಷಣೆ ಮಾಡಬೇಕು ಎಂದು ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದ್ದರು. ಕೂಡಲೇ ಈ ವಿಷಯವನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಗಮನಕ್ಕೆ ತಂದು ವಿದ್ಯಾರ್ಥಿಗಳ ಸುರಕ್ಷಿತ ಸ್ಥಳಾಂತರಕ್ಕೆ ಮನವಿ ಮಾಡಿದ್ದರು.



ಶ್ರೀನಗರದಿಂದ ಕರ್ನಾಟಕಕ್ಕೆ ವಾಪಸಾಗಿರುವ ವಿದ್ಯಾರ್ಥಿಗಳು

ಶನಿವಾರ ಶ್ರೀನಗರದಿಂದ ಭದ್ರತೆಯ ನಡುವೆ ಬಸ್ ನಲ್ಲಿ ಜಮ್ಮುವಿಗೆ ಪ್ರಯಾಣಿಸಿದ್ದ ವಿದ್ಯಾರ್ಥಿಗಳು ಭಾನುವಾರ ಮಧ್ಯಾಹ್ನದ ಹೊತ್ತಿಗೆ ರೈಲಿನಲ್ಲಿ ದೆಹಲಿ ತಲುಪಿದರು.

'ವಿದ್ಯಾರ್ಥಿಗಳು ನವದೆಹಲಿಗೆ ತಲುಪಿದ ನಂತರ ಅವರ ಉಸ್ತುವಾರಿಯನ್ನು ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವಾಲಯದ ಅಧಿಕಾರಿಗಳೇ ಸಂಪೂರ್ಣವಾಗಿ ನೋಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಸುರಕ್ಷಿತವಾಗಿ ಅವರ ಮನೆಗಳನ್ನು ತಲುಪುವವರೆಗೂ ನಾವು ಎಚ್ಚರಿಕೆ ವಹಿಸುತ್ತೇವೆ' ಎಂದು ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

ಕೂಡಲೇ ಮನೆಗೆ ಹಿಂದಿರುಗದಿರಿ: ಗಡಿ ನಿವಾಸಿಗಳಿಗೆ ಸೂಚನೆ

ಶ್ರೀನಗರ (ಪಿಟಿಐ): ಪಾಕಿಸ್ತಾನದ ಶೆಲ್ ದಾಳಿ ಭೀತಿಯಿಂದ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಗೊಂಡಿದ್ದ ಗಡಿ ಪ್ರದೇಶಗಳ ಜನರು, ಸಂಘರ್ಷಕ್ಕೆ ವಿರಾಮ ಘೋಷಣೆಯಾಗಿದೆ ಎಂದು ಕೂಡಲೇ ತಮ್ಮ ಮನೆಗೆ ಹಿಂದಿರುಗದಿರಿ ಎಂದು ಜಮ್ಮು ಮತ್ತು ಕಾಶ್ಮೀರ ಅಧಿಕಾರಿಗಳು ಭಾನುವಾರ ಸೂಚನೆ ನೀಡಿದ್ದಾರೆ.

ಪ್ರದೇಶದಲ್ಲಿ ಶೆಲ್‌ಗಳು ಸ್ಫೋಟಗೊಳ್ಳದೇ ಬಿದ್ದಿರುವ ಸಾಧ್ಯತೆ ಇದೆ. ಬಾಂಬ್ ನಿಷ್ಕ್ರಿಯ ದಳ ಪರಿಶೀಲಿಸಿ ನಿಷ್ಕ್ರಿಯ ಮಾಡುವವರೆಗೆ ಮನೆಗಳಿಗೆ ಹಿಂದಿರುಗಬೇಡಿ ಎಂದು ಪೊಲೀಸರು ಮಾರ್ಗಸೂಚಿಯಲ್ಲಿ ತಿಳಿಸಿದ್ದಾರೆ.

2023ರಲ್ಲಿ ತಡವಾಗಿ ಸ್ಫೋಟಗೊಂಡ ಶೆಲ್ ದಾಳಿಯಿಂದಾಗಿ 41 ಮಂದಿ ಮೃತಪಟ್ಟಿದ್ದರು ಎಂದು ಹೇಳಿದ್ದಾರೆ.

ಪಾಕಿಸ್ತಾನದ ದಾಳಿ ಕಾರಣದಿಂದ ನೈಜ ನಿಯಂತ್ರಣ ರೇಖೆಗೆ ಸಮೀಪದ ಬಾರಾಮುಲ್ಲಾ, ಬಂಡಿಪೋರ, ಕುಪ್ವಾರಾ ಜಿಲ್ಲೆಗಳ 1.25 ಲಕ್ಷಕ್ಕೂ ಅಧಿಕ ನಿವಾಸಿಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿತ್ತು.

ರಾಜಸ್ಥಾನ ಗಡಿ ಪ್ರದೇಶಗಳಲ್ಲಿ ಬ್ಲ್ಯಾಕ್‌ಔಟ್

ಜೈಪುರ (ಪಿಟಿಐ): ರಾಜಸ್ಥಾನದ ಜೈಸಲ್ಮೇರ್, ಬಾಡ್ಮೇರ್ ಮತ್ತಿತರ ಗಡಿ ಪ್ರದೇಶಗಳಲ್ಲಿ ಭಾನುವಾರ ರಾತ್ರಿ ಮುನ್ನೆಚ್ಚರಿಕೆ ಕ್ರಮವಾಗಿ ಬ್ಲ್ಯಾಕ್‌ಔಟ್ ಮಾಡಲಾಯಿತು.

ಶನಿವಾರ ಭಾರತ–ಪಾಕಿಸ್ತಾನದ ನಡುವೆ ಸೇನಾ ಸಂಘರ್ಷ ಶಮನವಾದ ನಂತರವೂ ಪಾಕ್ ಒಪ್ಪಂದ ಉಲ್ಲಂಘಿಸಿ ದಾಳಿ ನಡೆಸಿತ್ತು. ಹೀಗಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಭಾನುವಾರ ರಾತ್ರಿ 7.30ರಿಂದ ಜೈಸಲ್ಮೇರ್‌ನಲ್ಲಿ ಹಾಗೂ ರಾತ್ರಿ 8ರಿಂದ ಬಾಡ್ಮೇರ್‌ನಲ್ಲಿ ಬ್ಲ್ಯಾಕ್‌ಔಟ್ ಮಾಡಲಾಯಿತು.

ಬ್ಲ್ಯಾಕ್‌ಔಟ್ ಮಾಡಿದ ನಂತರ ಬಾಡ್ಮೇರ್ ಪ್ರದೇಶದಲ್ಲಿ ಕೆಂಪು ಬಣ್ಣದ ವಸ್ತುವೊಂದು ಗೋಚರಿಸಿದ್ದು, ಅದು ಡ್ರೋನ್ ಇರಬಹುದು ಎಂದು ಶಂಕಿಸಲಾಗಿದೆ ಎಂದು ಪ್ರತ್ಯಕ್ಷದ-ರ್ಶಿಯೊಬ್ಬರು ಹೇಳಿದ್ದಾರೆ. ಆದರೆ, ಅದನ್ನು ಅಧಿಕೃತವಾಗಿ ಯಾರೂ ದೃಢಪಡಿಸಿಲ್ಲ. ಸೇನಾ ಸಿಬ್ಬಂದಿ ಕಟ್ಟೆಚ್ಚರದಿಂದ ಇದ್ದಾರೆ. ಭಾನುವಾರ ರಾಜಸ್ಥಾನದ ಬಹುತೇಕ ಸ್ಥಳಗಳಲ್ಲಿ ಮಾರುಕಟ್ಟೆ-ಗಳಲ್ಲಿ ಎಂದಿನಂತೆ ವ್ಯಾಪಾರ ನಡೆಯಿತು.



ಶುಕ್ರವಾರ ಜೈಸಲ್ಮೇರ್‌ನಲ್ಲಿ ಬ್ಲ್ಯಾಕ್‌ಔಟ್ ಮಾಡಿದ್ದಾಗಿನ ದೃಶ್ಯ —ಪಿಟಿಐ ಚಿತ್ರ

ಕೇಂದ್ರ ಸಚಿವ ಗಜೇಂದ್ರಸಿಂಗ್ ಶೆಖಾವತ್ ಅವರು ಸ್ಥಳೀಯ ಅಧಿಕಾರಿಗಳ ಜತೆ ಜೋಧಪುರದಲ್ಲಿ ಸಭೆ ನಡೆಸಿ, ಪರಿಸ್ಥಿತಿಯ ಕುರಿತು ಚರ್ಚೆ ನಡೆಸಿದರು.

ಸೋಮವಾರ, ಮೇ 12, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 131 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಮಂದಾನ ಶತಕ; ಭಾರತಕ್ಕೆ ಸರಣಿ

ಕೊಲಂಬೊದಲ್ಲಿ ಭಾನುವಾರ ನಡೆದ ಮಹಿಳೆಯರ ಏಕದಿನ ಕ್ರಿಕೆಟ್ ತ್ರಿಕೋನ ಸರಣಿಯ ಫೈನಲ್‌ನಲ್ಲಿ ಭಾರತದ ಸ್ಮೃತಿ ಮಂದಾನ ಶತಕ ದಾಖಲಿಸಿದರು. ಇದರಿಂದಾಗಿ ತಂಡವು ಶ್ರೀಲಂಕಾ ಎದುರು 97 ರನ್‌ಗಳಿಂದ ಜಯಿಸಿ ಪ್ರಶಸ್ತಿ ಗಳಿಸಿತು

ರನ್	ಎಸೆತ	ಬೌಂಡರಿ	ಸಿಕ್ಸರ್
116	101	15	2

ಆಳ-ಅಗಲ
ಮುಕ್ತ ವ್ಯಾಪಾರಕ್ಕೆ ನಿರ್ಣಾಯಕ ಹೆಜ್ಜೆ

ರಾಜ್ಯದ 22 ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ಬರೆದ 12,200 ಮಂದಿ
ಸಂಗೀತ, ನೃತ್ಯ ಪರೀಕ್ಷೆ ಯಶಸ್ವಿ 4

ಪಾಕಿಸ್ತಾನಕ್ಕೆ ಗಡಿಗೆ ಹೊಂದಿಕೊಂಡಿರುವ ಗ್ರಾಮಗಳ ಜನರಲ್ಲಿ ಇನ್ನೂ ಶಮನವಾಗದ ಆತಂಕ

ಸಂಘರ್ಷ ಶಮನ: ಗಡಿ ಶಾಂತ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ/ಚಂಡೀಗಢ: ಕದನ ವಿರಾಮ ಘೋಷಣೆಯಾದ ಬೆನ್ನಲ್ಲೇ, ಪಾಕಿಸ್ತಾನದ ಗಡಿಗೆ ಹೊಂದಿಕೊಂಡಿರುವ ಜಮ್ಮು–ಕಾಶ್ಮೀರ, ಗುಜರಾತ್, ಪಂಜಾಬ್‌ನ ಪ್ರದೇಶಗಳಲ್ಲಿ ಭಾನುವಾರ ಶಾಂತಿ ಮನೆ ಮಾಡಿದೆ. ನಿಯಂತ್ರಣ ರೇಖೆಗೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಗುಂಡಿನ ಮೊರೆತ, ಶೆಲ್ ದಾಳಿ ನಿಂತಿರುವುದು ಇದಕ್ಕೆ ಕಾರಣವಾದರೂ ಜನರಲ್ಲಿ ಇನ್ನೂ ಭಯ ಮನೆ ಮಾಡಿದೆ.

ಭಾರತ ಮತ್ತು ಪಾಕಿಸ್ತಾನ ಕದನ ವಿರಾಮಕ್ಕೆ ಶನಿವಾರ ಸಂಜೆ ಒಪ್ಪಿಗೆ ಸೂಚಿಸಿದವು. ಆದರೆ, ಪಾಕಿಸ್ತಾನ ಕಡೆಯಿಂದ ಶೆಲ್ ದಾಳಿಗೆ ಒಳಗಾಗಿರುವ ಪ್ರದೇಶಗಳ ಜನರು ಸರ್ಕಾರದ ಸೂಚನೆ ಮೇರೆಗೆ ತಮ್ಮ ಮನೆಗಳನ್ನು ತೊರೆದು, ಸುರಕ್ಷಿತ ಜಾಗಗಳಲ್ಲಿ ಆಶ್ರಯ ಪಡೆದಿದ್ದಾರೆ. ಆದರೆ, ಈ ಜನರಲ್ಲಿನ ಆತಂಕ ಇನ್ನೂ ದೂರವಾಗಿಲ್ಲ.

‘ಪಾಕಿಸ್ತಾನ ಮಾಡಿದ ದಾಳಿ ವೇಳೆ ವಿವಿಧ ಪ್ರದೇಶಗಳಲ್ಲಿ ಬಿದ್ದಿರುವ ಶೆಲ್‌ಗಳ ಪೈಕಿ ಕೆಲವು ಇನ್ನೂ ಸ್ಫೋಟವಾಗಿಲ್ಲ. ಜಮ್ಮು–ಕಾಶ್ಮೀರ ಪೊಲೀಸ್ ಇಲಾಖೆಯ ಬಾಂಬ್ ನಿಷ್ಕ್ರಿಯ ದಳ ಇಂತಹ ಶೆಲ್‌ಗಳನ್ನು ನಿಷ್ಕ್ರಿಯಗೊಳಿಸುವ ಕಾರ್ಯಾಚರಣೆ ನಡೆಸುತ್ತಿದೆ’ ಎಂದು ಬಾರಾಮುಲ್ಲಾ ಜಿಲ್ಲಾ ಪೊಲೀಸ್ ಹೊರಡಿಸಿರುವ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಸ್ಫೋಟಗೊಳ್ಳದೇ ಇರುವ ಶೆಲ್‌ಗಳನ್ನು ನಿಷ್ಕ್ರಿಯಗೊಳಿಸುವವರೆಗೆ ಯಾರೂ ಮನೆಗಳಿಗೆ ಹಿಂದಿರುಗಬಾರದು ಎಂದೂ ಅಧಿಕಾರಿಗಳು ಸೂಚಿಸಿದ್ದಾರೆ.

ನಿಯಂತ್ರಣ ರೇಖೆ ಉದ್ದಕ್ಕೂ ಇರುವ ಗ್ರಾಮಗಳಾದ ಪೂಂಛ್, ರಾಜೌರಿ, ಉರಿ, ಟಂಗಧರ್ ನಿವಾಸಿಗಳು ಕಳೆದ ಕೆಲ ದಿನಗಳಿಂದ ಶೆಲ್ ದಾಳಿಯಿಂದ ಕಂಗೆಟ್ಟಿದ್ದರು. ಶನಿವಾರ ರಾತ್ರಿಯಿಂದ ಈ ಗ್ರಾಮಗಳು ಶಾಂತವಾಗಿವೆ.

9ನೇ ಪುಟ ನೋಡಿ



ಕದನ ವಿರಾಮ ಘೋಷಣೆಯಾದ ಬೆನ್ನಲ್ಲೇ ಜಮ್ಮು–ಕಾಶ್ಮೀರ ಸಹಜಸ್ಥಿತಿಗೆ ಮರಳಿದ್ದು ಶ್ರೀನಗರದ ಮಾರುಕಟ್ಟೆ ಮತ್ತೆ ಜನರಿಂದ ತುಂಬಿರುವುದು ಭಾನುವಾರ ಕಂಡುಬಂತು —ಪಿಟಿಐ ಚಿತ್ರ

ಪ್ರಮುಖ ಬೆಳವಣಿಗೆಗಳು

- ಜಿಲ್ಲಾಡಳಿತ ನಿರ್ದೇಶನ ನೀಡದ ಹೊರತು ಯಾರೂ ತಮ್ಮ ಗ್ರಾಮಗಳಿಗೆ ಮರಳಬಾರದು ಎಂದು ಸೂಚಿಸಲಾಗಿದೆ
- ನಿಯಂತ್ರಣ ರೇಖೆ ಉದ್ದಕ್ಕೂ ಬಿದ್ದಿರುವ ಸ್ಫೋಟಗೊಳ್ಳದ ಶೆಲ್‌ಗಳಿಂದ ಅಪಾಯ ಹೆಚ್ಚು
- ಸಂಭಾವ್ಯ ಅಪಾಯ ತಪ್ಪಿಸಲು ಪೊಲೀಸ್ ಹಾಗೂ ಬಾಂಬ್ ನಿಷ್ಕ್ರಿಯ ದಳಗಳಿಂದ ಸಮನ್ವಯದ ಕಾರ್ಯಾಚರಣೆ
- ಜಮ್ಮು–ಕಾಶ್ಮೀರದಲ್ಲಿ ಮಂಗಳವಾರ ವರೆಗೆ ಶಾಲೆಗಳಿಗೆ ರಜೆ ಘೋಷಣೆ
- ಭಾರತ–ಪಾಕಿಸ್ತಾನದ ನಡುವೆ ಸಂಘರ್ಷ ವಿರಾಮ ಘೋಷಣೆಯಾದ ಬಳಿಕ ಗುಜರಾತ್‌ನ ಕಛ್, ಬನಾಸ್‌ಕಾಂತ ಹಾಗೂ ಪಠಾಣ್ ಜಿಲ್ಲೆಗಳಲ್ಲಿ ಸಹಜಸ್ಥಿತಿ ಮರಳಿದೆ

‘ಅಮೆರಿಕ ಮಧ್ಯಸ್ಥಿಕೆಗೆ ಸರ್ಕಾರ ಒಪ್ಪಿದೆಯೇ’

ನವದೆಹಲಿ (ಪಿಟಿಐ): ಕಾಶ್ಮೀರ ವಿಷಯದಲ್ಲಿ ಮೂರನೇ ದೇಶದ ಮಧ್ಯಸ್ಥಿಕೆಗೆ ಭಾರತ ಒಪ್ಪಿದೆಯೇ ಎಂಬುದನ್ನು ಕೇಂದ್ರ ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಭಾರತ ಮತ್ತು ಪಾಕಿಸ್ತಾನದ ಪರವಾಗಿ ಅಮೆರಿಕ ‘ಕದನ ವಿರಾಮ’ ಘೋಷಿಸಿರು ವುದನ್ನು ಪ್ರಸ್ತಾಪಿಸಿರುವ ಕಾಂಗ್ರೆಸ್, ಈ ವಿಷಯವನ್ನು ಅಂತರ-ರಾಷ್ಟ್ರೀಕರಣ ಗೊಳಿಸಲು ಯತ್ನಿಸಿದ್ದು ಸರಿಯಲ್ಲ ಎಂದೂ ವಾಗ್ದಾಳಿ ನಡೆಸಿದೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಚಿನ್ ಪೈಲಟ್, ‘ಕದನ ವಿರಾಮ’ ಘೋಷಣೆಯು ಎಲ್ಲರನ್ನೂ ಚಕಿತಗೊಳಿಸಿದೆ. ಇದೇ ಮೊದಲ ಬಾರಿಗೆ ಭಾರತ ಮತ್ತು ಪಾಕಿಸ್ತಾನದ ಪರವಾಗಿ ಮೂರನೇ ದೇಶವೊಂದು ಈ ರೀತಿಯ ಘೋಷಣೆ ಮಾಡಿದೆ ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

ಕಾಶ್ಮೀರ ವಿಷಯಕ್ಕೆ ಸಂಬಂಧಿಸಿದಂತೆ ತಟಸ್ಥ ಸ್ಥಳದಲ್ಲಿ ಮಾತುಕತೆ ನಡೆಯಲಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಹೇಳಿದ್ದಾರೆ. ಹಾಗಾದರೆ, ಅಮೆರಿಕದ ಮಧ್ಯಸ್ಥಿಕೆಯನ್ನು ಸರ್ಕಾರ ಒಪ್ಪಿಕೊಂಡಿದೆಯೇ? ಅದಕ್ಕೆ ಯಾವ ಪರಿಸ್ಥಿತಿ ಕಾರಣ ಎಂಬುದನ್ನು ಬಹಿರಂಗ ಪಡಿಸಬೇಕು. ಈ ವಿಷಯದಲ್ಲಿ ದೇಶ ಮತ್ತು ಸರ್ವ ಪಕ್ಷಗಳನ್ನು ಸರ್ಕಾರ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು’ ಎಂದು ಒತ್ತಾಯಿಸಿದೆ.

‘ಕಾಶ್ಮೀರ ವಿಷಯ: ಮಧ್ಯಸ್ಥಿಕೆ ಒಪ್ಪಲ್ಲ’



ನವದೆಹಲಿ (ಪಿಟಿಐ): ‘ಕಾಶ್ಮೀರದ ವಿಷಯದಲ್ಲಿ ಭಾರತ ಯಾರದ್ದೇ ಮಧ್ಯಸ್ಥಿಕೆಯನ್ನು ಒಪ್ಪುವುದಿಲ್ಲ ಮತ್ತು ಪಾಕಿಸ್ತಾನ ಕಾನೂನು ಬಾಹಿರವಾಗಿ ಆಕ್ರಮಿಸಿಕೊಂಡಿರುವ ಭಾಗವನ್ನು ಹಿಂದಕ್ಕೆ ಪಡೆಯುವ ಕುರಿತು ಮಾತ್ರ ಚರ್ಚೆ ನಡೆಯಬೇಕಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ ಎಂದು ಸರ್ಕಾರದ ಉನ್ನತ ಮೂಲಗಳು ಭಾನುವಾರ ತಿಳಿಸಿವೆ.

ಭಾರತದ ವಿರುದ್ಧ ಪಾಕಿಸ್ತಾನ ಎಲ್ಲಿಯವರೆಗೆ ಭಯೋತ್ಪಾದನೆಯನ್ನು ಪ್ರಾಯೋಜಿಸುತ್ತಿರುತ್ತದೆಯೋ ಅಲ್ಲಿಯವರೆಗೂ, ಸಿಂಧೂ ಜಲ ಒಪ್ಪಂದ ಅಮಾನತಿನಲ್ಲಿ ಇರುತ್ತದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ ಎಂದೂ ಮೂಲಗಳು ಹೇಳಿವೆ.

‘ಆಪರೇಷನ್ ಸಿಂಧೂರ’ ಮುಕ್ತಾಯಗೊಂಡಿಲ್ಲ ಎಂದು ಹೇಳಿರುವ ಪ್ರಧಾನಿ ಅವರು, ‘ಪಾಕ್ ಕಡೆಯಿಂದ ಬರುವ ಗುಂಡುಗಳಿಗೆ ಪ್ರತಿಯಾಗಿ ಫಿರಂಗಿ ಮೂಲಕ ಉತ್ತರ ನೀಡಬೇಕು. ಪಾಕ್‌ನ ಪ್ರತಿಯೊಂದು ಕ್ರಿಯೆಗೂ ಪೂರ್ಣ ಬಲದಿಂದ ಪ್ರತಿಕ್ರಿಯೆ ನೀಡಬೇಕು ಎಂದು ಸಶಸ್ತ್ರ ಪಡೆಗಳಿಗೆ ಸೂಚಿಸಿದ್ದಾರೆ’ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಪಾಕಿಸ್ತಾನವು ಭಯೋತ್ಪಾದನೆಯನ್ನು ಪೋಷಿಸಿಕೊಂಡು, ತನ್ನ ಆಯ್ಕೆಯ ಕ್ಷೇತ್ರದಲ್ಲಿ ಸಹಕಾರ ನಿರೀಕ್ಷಿಸಿದರೆ ಆಗುವುದಿಲ್ಲ ಎಂಬ ಸಂದೇಶವನ್ನು ಪ್ರಧಾನಿ ನೀಡಿದ್ದಾರೆ’ ಎಂದು ಅವರು ಹೇಳಿದ್ದಾರೆ. ಪಾಕಿಸ್ತಾನದ ಜತೆಗೆ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರ (ಡಿಜಿಎಂಒ) ಮೂಲಕ ಮಾತ್ರ ಮಾತುಕತೆ ನಡೆಯಲಿದೆ ಎಂದಿದ್ದಾರೆ.



ಬೈಕ್ ರ‍್ಯಾಲಿ ಮೈಸೂರಿನಲ್ಲಿ ‘ಟೀಂ ಮೈಸೂರು’ ಸದಸ್ಯರು ಭಾನುವಾರ ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯ ದೇವಸ್ಥಾನ ಬಳಿಯಿಂದ ನಾರಾಯಣಶಾಸ್ತ್ರಿ ರಸ್ತೆಯವರೆಗೆ ‘ಯೋಧರೊಂದಿಗೆ ನಾವಿದ್ದೇವೆ– ದೇಶಕ್ಕಾಗಿ ಬೈಕ್ ರ‍್ಯಾಲಿ’ ನಡೆಸಿದರು ಪ್ರಜಾವಾಣಿ ಚಿತ್ರ

ಸಮೀಕ್ಷೆ ಬಗ್ಗೆ ಮಾಹಿತಿ ಕೇಳಿದ ಕೇಂದ್ರ ಸಚಿವಾಲಯ

ಜನಗಣತಿಗೆ ‘ರಾಜ್ಯದ ಆ್ಯಪ್’?

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಇಡೀ ದೇಶದಲ್ಲಿ ಮೊದಲ ಬಾರಿಗೆ ಮೊಬೈಲ್ ಆ್ಯಪ್ ಬಳಸಿ ಪರಿಶಿಷ್ಟ ಜಾತಿಯ ಕುಟುಂಬಗಳ ದತ್ತಾಂಶ ಸಂಗ್ರಹಿಸುತ್ತಿದೆ. ಈ ಸಮೀಕ್ಷೆಗೆ ಸಂಬಂಧಿಸಿದ ಸಮಗ್ರ ಮಾಹಿತಿ ನೀಡುವಂತೆ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ.



ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಮುಂದಿನ ಜನಗಣತಿಯ ಜೊತೆಗೆ ಜಾತಿ ಜನಗಣತಿಯನ್ನೂ ನಡೆಸಲು ತೀರ್ಮಾನಿಸಿದೆ. ರಾಜ್ಯ ಸರ್ಕಾರ ಮೊಬೈಲ್ ಆ್ಯಪ್ ಬಳಸಿ ಪರಿಶಿಷ್ಟ ಜಾತಿಯ ಕುಟುಂಬಗಳ ದತ್ತಾಂಶ ಸಂಗ್ರಹಿಸುವುದನ್ನೇ ಕೇಂದ್ರ ಸರ್ಕಾರ ತಾನು ನಡೆಸುವ ಗಣತಿಗೂ ಮಾದರಿಯಾಗಿ ಅನುಸರಿಸಲು ಮುಂದಾಗಿದೆ.

ಮೊಬೈಲ್ ಆ್ಯಪ್ ಸಮೀಕ್ಷೆ ಕುರಿತಂತೆ ಮಾಹಿತಿ ಕೇಳಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಕಾರ್ಯದರ್ಶಿ ಮೇ 8ರಂದು ಪತ್ರ ಬರೆದಿದ್ದರು. ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಎಂಟು ಪುಟಗಳ ಪತ್ರದಲ್ಲಿ ಸಮಗ್ರ ಮಾಹಿತಿ ನೀಡಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

9ನೇ ಪುಟ ನೋಡಿ

ಅಂಕಿ ಅಂಶಗಳು

10,04,630 ಈವರೆಗೆ ಸಮೀಕ್ಷೆಗೆ ಒಳಪಟ್ಟ ಪರಿಶಿಷ್ಟ ಜಾತಿಯ ಮನೆಗಳು

67,77,358 ಪರಿಶಿಷ್ಟ ಜಾತಿಯೇತರ ಮನೆಗಳು

62,885 ನಿಯೋಜನೆಗೊಂಡಿರುವ ಗಣತಿದಾರರು

57,767 ಮೊಬೈಲ್ ಆ್ಯಪ್‌ಗೆ ಲಾಗ್ ಇನ್ ಆದ ಗಣತಿದಾರರು

ಒಳ ಮೀಸಲಾತಿಗಾಗಿ ಸಮೀಕ್ಷೆ (ಮೇ 10ರವರೆಗಿನ ಮಾಹಿತಿ)

ಕ್ಷಿಪಣಿ ತಯಾರಿಕೆ ಘಟಕ ಉದ್ಘಾಟನೆ



ಲಖನೌ (ಪಿಟಿಐ): ದೇಶದ ಸಶಸ್ತ್ರ ಪಡೆಗಳ ದಾಳಿ ಸಾಮರ್ಥ್ಯಕ್ಕೆ ಬಲ ತುಂಬುವ, ಶಕ್ತಿಶಾಲಿ ‘ಬ್ರಹ್ಮೋಸ್’ ಕ್ಷಿಪಣಿಗಳನ್ನು ತಯಾರಿಸುವ ಬೃಹತ್ ಘಟಕವನ್ನು ಭಾನುವಾರ ಉದ್ಘಾಟಿಸಲಾಗಿದೆ.

ಭಾರತ ಮತ್ತು ಪಾಕಿಸ್ತಾನ ನಡುವೆ ಸಂಘರ್ಷ ಕಂಡುಬಂದಿರುವ ಸಂದರ್ಭದಲ್ಲಿಯೇ, ಈ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳ ಉತ್ಪಾದನಾ ಘಟಕ ಉದ್ಘಾಟನೆಗೊಂಡಿರುವುದು ಗಮನಾರ್ಹ.

ಲಖನೌ ಬಳಿಯ ‘ಉತ್ತರ ಪ್ರದೇಶ ರಕ್ಷಣಾ ಕೈಗಾರಿಕೆ ಕಾರಿಡಾರ್’ನಲ್ಲಿ ಸ್ಥಾಪಿಸಲಾಗಿರುವ ಬ್ರಹ್ಮೋಸ್ ಏರೋಸ್ಪೇಸ್ ಇಂಟಿಗ್ರೇಶನ್ ಆ್ಯಂಡ್ ಟೆಸ್ಟಿಂಗ್ ಕೇಂದ್ರವನ್ನು (ಬಿಎಐಟಿಎಫ್) ರಕ್ಷಣಾ ಸಚಿವ ರಾಜನಾಥ್ ಸಿಂಗ್ ವರ್ಚುವಲ್ ಆಗಿ ಉದ್ಘಾಟಿಸಿದರು.

ಭಾರತ ಮತ್ತು ರಷ್ಯಾ ಸಹಭಾಗಿತ್ವದಲ್ಲಿ ಕ್ಷಿಪಣಿಗಳನ್ನು ತಯಾರಿಸುವ ಈ ಘಟಕವನ್ನು ₹300 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇವುಗಳನ್ನು ನೆಲ, ಸಮುದ್ರ ಹಾಗೂ ವಾಯು ಪ್ರದೇಶದಿಂದ ಉಡ್ಡಯನ ಮಾಡಬಹುದಾಗಿದೆ.

ಬ್ರಹ್ಮೋಸ್ ಕ್ಷಿಪಣಿಗಳು 290 ಕಿ.ಮೀ.ದಿಂದ 400 ಕಿ.ಮೀ. ದೂರದ ಗುರಿಗಳನ್ನು ನಾಶಪಡಿಸುವ ಸಾಮರ್ಥ್ಯ ಹೊಂದಿವೆ.

ಮೇ 16ರಿಂದ ಮತ್ತೆ ಐಪಿಎಲ್ ಆರಂಭ ಸಾಧ್ಯತೆ

ನವದೆಹಲಿ (ಪಿಟಿಐ): ಭಾರತ– ಪಾಕಿಸ್ತಾನ ಸೇನಾ ಸಂಘರ್ಷದ ಕಾರಣ ಸ್ಥಗಿತಗೊಂಡಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿ ಇದೇ 16 ಅಥವಾ 17ರಂದು ಆರಂಭಗೊಳ್ಳುವ ಸಾಧ್ಯತೆಯಿದೆ. ಫೈನಲ್ ಪಂದ್ಯವನ್ನು ಕೋಲ್ಕತ್ತದಿಂದ ಸ್ಥಳಾಂತರಿಸುವ ಸಂಭವವಿದೆ.

ಮೇ 9ರಂದು ಒಂದು ವಾರದ ಮಟ್ಟಿಗೆ ಲೀಗ್ ಸ್ಥಗಿತಗೊಳಿಸಲಾಗಿತ್ತು. ಆದರೆ ಶನಿವಾರ ಯುದ್ಧ ಸ್ವರೂಪದ ಸಂಘರ್ಷ ಕೊನೆಗೊಳಿಸಲು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಇದರಿಂದ ಲೀಗ್ ಮುಂದುವರಿಯಲು ಅವಕಾಶವಾಗಿದೆ. ಐಪಿಎಲ್ ಆಡಳಿತ ಮಂಡಳಿ ಮತ್ತು ಬಿಸಿಸಿಐ ಅಧಿಕಾರಿಗಳು ಲೀಗ್ ಪುನರಾರಂಭಕ್ಕೆ ಸಂಬಂಧಿಸಿ ಯೋಜನೆ ರೂಪಿಸಲು ಭಾನುವಾರ ಸಭೆ ಸೇರಿದ್ದರು.

‘ಸೂಕ್ತ ವೇಳಾಪಟ್ಟಿ ರೂಪಿಸಲು ಮಂಡಳಿಯು ಕಾರ್ಯಪ್ರವೃತ್ತವಾಗಿದೆ’ ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ ಶುಕ್ಲಾ ತಿಳಿಸಿದರು.

‘ಐಪಿಎಲ್‌ಗೆ ಸಂಬಂಧಿಸಿ ಇದುವರೆಗೆ ನಿರ್ಧಾರ ಕೈಗೊಂಡಿಲ್ಲ. ಪರಿಹಾರ ಕಂಡುಕೊಳ್ಳಲು ಮಂಡಳಿ ಅಧಿಕಾರಿಗಳು ಯೋಜನೆ ರೂಪಿಸುತ್ತಿದ್ದಾರೆ. ಬಿಸಿಸಿಐ ಕಾರ್ಯದರ್ಶಿ, ಐಪಿಎಲ್ ಅಧ್ಯಕ್ಷರು ಫ್ರ್ಯಾಂಚೈಸಿಗಳು ಮತ್ತು ಇತರ ಭಾಗೀದಾರರ ಜೊತೆ ಮಾತುಕತೆ ನಡೆಸಿದ್ದಾರೆ. ಶೀಘ್ರವೇ ನಿರ್ಧಾರಕ್ಕೆ ಬರಲಾಗುವುದು. ಸಾಧ್ಯವಾದಷ್ಟು ಬೇಗ ಟೂರ್ನಿ ಆರಂಭಿಸಲು ಪ್ರಯತ್ನ ನಡೆದಿದೆ’ ಎಂದರು.

ಲಖನೌ ಸೂಪರ್ ಜೈಂಟ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಣ ಪಂದ್ಯದೊಡನೆ ಲೀಗ್ ಪುನರಾರಂಭಗೊಳ್ಳಲಿದೆ ಎಂದು ಐಪಿಎಲ್ ಮೂಲವೊಂದು ತಿಳಿಸಿದೆ. ಈ ಪಂದ್ಯ ಮೇ 9ರಂದು ನಡೆಯಬೇಕಿತ್ತು. ಟೂರ್ನಿಯಲ್ಲಿ ಇನ್ನೂ ಒಟ್ಟು 16 ಪಂದ್ಯಗಳು ಬಾಕಿ ಇವೆ.

ದೇಗುಲ ಪ್ರವೇಶಿಸಿದ್ದ ದಲಿತ ಯುವಕ ಹೊರಕ್ಕೆ

ಪ್ರಜಾವಾಣಿ ವಾರ್ತೆ

ಮಧುಗಿರಿ (ತುಮಕೂರು): ತಾಲ್ಲೂಕಿನ ದೊಡ್ಡೇರಿ ಹೋಬಳಿಯ ಕವಣದಾಲ ಗ್ರಾಮದಲ್ಲಿ ಶನಿವಾರ ಪೂಜೆ ಮಾಡಿಸಲು ರಾಮಾಂಜನೇಯ ದೇವಾಲಯ ಪ್ರವೇಶಿಸಿದ್ದ ಪರಿಶಿಷ್ಟ ಜಾತಿಯ ಯುವಕನನ್ನು ಸ್ಥಳೀಯರು ಹೊರಗಡೆ ಕಳುಹಿಸಿದರು.



ಇದೇ ವಿಷಯವಾಗಿ ದೇಗುಲದ ಮುಂಭಾಗದಲ್ಲಿ ಯುವಕ ಮತ್ತು ಸ್ಥಳೀಯರ ಮಧ್ಯೆ ಮಾತಿನ ಚಕಮಕಿ ನಡೆದಿದೆ. ಈ ಕುರಿತು ವಿಡಿಯೊ ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡುತ್ತಿದೆ.

ಶನಿವಾರ ಸಂಜೆ ಪೂಜೆ ಮಾಡಿಸಲು ಯುವಕ ಗ್ರಾಮದ ರಾಮಾಂಜನೇಯ ದೇವಸ್ಥಾನದ ಒಳಗೆ ಹೋಗಿದ್ದರು. ಈ ವೇಳೆ ಸ್ಥಳದಲ್ಲಿದ್ದ ಒಕ್ಕಲಿಗ ಸಮುದಾಯದವರು ಯುವಕನನ್ನು ಈ ಬಗ್ಗೆ ಪ್ರಶ್ನಿಸಿದ್ದಾರೆ. ‘ಅನಾದಿ ಕಾಲದಿಂದಲೂ ನಿಮ್ಮ ಜಾತಿಯವರು (ಪರಿಶಿಷ್ಟ ಜಾತಿಯವರು) ದೇಗುಲದ ಒಳಗಡೆ ಬಂದಿಲ್ಲ. ಈಗಲೂ ಬರುವುದು ಬೇಡ’ ಎಂದು ಹೊರಗಡೆ ಕಳುಹಿಸಿದ್ದಾರೆ.

‘ಊರಿನ ಜನರೆಲ್ಲ ಒಳಗಡೆ ಕೂತಿದ್ದಾರೆ. ನಾನೇಕೆ ಹೊರಗಡೆ ನಿಲ್ಲಬೇಕು. ಒಳಗಡೆ ಹೋಗಿದ್ದು ತಪ್ಪು ಎಂದರೆ ಹೇಗೆ? ಸಂವಿಧಾನ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿಲ್ಲವೇ? ನೀವು ಒಳಗೆ ಹೋಗುವುದಾದರೆ ನಾನೇಕೆ ಹೋಗಬಾರದು? ಸಂವಿಧಾನಕ್ಕೆ ಗೌರವ ಇಲ್ಲವೇ’ ಎಂದು ಯುವಕ ಪ್ರಶ್ನಿಸಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.

ಆಗ ಸ್ಥಳೀಯರು, ‘ನಿಮ್ಮವರು (ಪರಿಶಿಷ್ಟ ಜಾತಿಯವರು) ಯಾರೂ ಒಳಗೆ ಬಂದಿಲ್ಲ. ಒಬ್ಬರಿಗೆ ಹೇಳಿದರೆ ಉಳಿದವರೂ ಅರ್ಥ ಮಾಡಿಕೊಳ್ಳಬೇಕು. ನೀನು ಒಳಗಡೆ ಹೋಗಬೇಡ’ ಎಂದು ತಾಕೀತು ಮಾಡಿದರು. ಇದರಿಂದ ದೇವಾಲಯದ ಬಳಿ ಕೆಲ ಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

9ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸೈಬರ್ ಅಪರಾಧ ಪತ್ತೆಗೆ ತರಬೇತಿ

ಬೆಂಗಳೂರು: ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ತನಿಖಾ ವ್ಯವಸ್ಥೆಯನ್ನು ಬಲಪಡಿಸಲು ಪೊಲೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ಪ್ರಾಸಿಕ್ಯೂಟರ್‌ಗಳಿಗೆ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರ (ಸಿಸಿಐಟಿಆರ್) ವತಿಯಿಂದ ತರಬೇತಿ ನೀಡಲಾಗುತ್ತಿದೆ. ರಾಜ್ಯದಲ್ಲಿ ದಾಖಲಾಗುತ್ತಿರುವ ಒಟ್ಟು ಅಪರಾಧ ಪ್ರಕರಣಗಳಲ್ಲಿ ಶೇಕಡ 30ರಷ್ಟು ಸೈಬರ್ ವಂಚನೆಗೆ ಸಂಬಂಧಿಸಿದ್ದಾಗಿವೆ. ಬೆಂಗಳೂರಿನಲ್ಲಿ ಶೇಕಡ 40 ರಷ್ಟು ವರದಿಯಾಗಿದೆ. ಆರೋಪಿಗಳ ಪತ್ತೆಯೇ ಪೊಲೀಸರಿಗೆ ಸವಾಲಾಗಿದೆ.

4

ಮಹೇಶ್ವರಮ್ಮನವರ ಕರಗ ಮಹೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಇಲ್ಲಿನ ಬಜಾರ್ ರಸ್ತೆಯಲ್ಲಿರುವ ಮಹೇಶ್ವರಮ್ಮನವರ ಹೂವಿನ ಕರಗ ಮಹೋತ್ಸವಕ್ಕೆ ಭಾನುವಾರ ಚಾಲನೆ ದೊರೆತಿದೆ.

ಭಾನುವಾರ ಹಸಿಕರಗ ನೆರವೇರಿಸಲಾಯಿತು. ಮಂಗಳವಾರ ರಾತ್ರಿ 10 ಗಂಟೆಗೆ ಸುತ್ತಮುತ್ತಲ ಗ್ರಾಮಗಳ ಮಹಿಳೆಯರು ಆರತಿ ದೀಪಗಳ ಸಮೇತ ಮಹೇಶ್ವರಮ್ಮನವರ ದೇವಾಲಯಕ್ಕೆ ಆಗಮಿಸಿ, ದೇವಿಗೆ ಆರತಿ ಬೆಳಗಿದ ನಂತರ ಅಗ್ನಿಕುಂಡ ತುಳಿಯುವ ಕಾರ್ಯ ನೆರವೇರಲಿದೆ. ಬುಧವಾರ ಮಧ್ಯರಾತ್ರಿ ಮಹೇಶ್ವರಮ್ಮನವರ ಕರಗ ಮಹೋತ್ಸವ ಹಾಗೂ ಸುತ್ತಮುತ್ತಲ ಗ್ರಾಮಗಳ 24 ದೇವರುಗಳ ಹೂವಿನ ಪಲ್ಲಕ್ಕಿ ಉತ್ಸವ ನಡೆಯಲಿದೆ ಎಂದು ರಾಜ್ಯ ವಹ್ನಿಕುಲ ಕ್ಷತ್ರಿಯ ಸಂಘದ ಅಧ್ಯಕ್ಷ ಮು.ಕೃಷ್ಣಮೂರ್ತಿ ತಿಳಿಸಿದ್ದಾರೆ.

ಗಾಯಗೊಂಡ ಪಾರಿವಾಳಗಳಿಗೆ ಚಿಕಿತ್ಸೆ ನೀಡುವ ಆಸ್ಪತ್ರೆ

ಪಾರಿವಾಳಗಳಿಗೆ ಮರುಜೀವ

• ಜಗದೀಶ

ಬೆಂಗಳೂರು: ನಗರದಲ್ಲಿ ಪ್ರತಿದಿನ ಹತ್ತಾರು ಪಾರಿವಾಳಗಳು ಕಾಯಿಲೆ ಮತ್ತು ವಾಹನಗಳ ಹೊಡೆತ, ಬಲೆಯ ಹಿಡಿತಗಳಿಂದ ಗಾಯಗೊಂಡು ಹಾರಲಾಗದೆ ಜೀವನ್ಮರಣ ಹೋರಾಟ ನಡೆಸುತ್ತಿರುತ್ತವೆ. ಅಂತಹ ಪಾರಿವಾಳಗಳಿಗೆ ಚಿಕಿತ್ಸೆ, ಆರೈಕೆ ನೀಡಿ ಮತ್ತೆ ರೆಕ್ಕೆ ಬಿಚ್ಚಲು ಶಕ್ತಿ ತುಂಬುವ ಕೆಲಸವನ್ನು ರಾಜಾಜಿನಗರದ 'ಕಬೂತರ್ ದಾನ ಸೇವಾ ಸಮಿತಿ' ಮಾಡುತ್ತಿದೆ.

ರಾಜಾಜಿನಗರದಲ್ಲಿರುವ ಶ್ರೀ ಶಂಖೇಶ್ವರ್ ಪಾರ್ಶ್ವನಾಥ ಕಬೂತರ್ ದಾನ ಸೇವಾ ಸಮಿತಿಯ ಪಾರಿವಾಳ ಆಸ್ಪತ್ರೆ ಲಕ್ಷಾಂತರ ಪಾರಿವಾಳಗಳಿಗೆ ಮರುಜೀವ ನೀಡಿದೆ. ವಾಹನ ಅಪಘಾತದಿಂದ, ಬಲೆಗಳಿಗೆ ಸಿಲುಕಿ ಅಥವಾ ಬೇರೆ ಪಾರಿವಾಳಗಳೊಂದಿಗಿನ ಕಾದಾಟದಿಂದ ಗಾಯಗೊಂಡಿರುವ ಪಾರಿವಾಳಗಳು, ಕಾಯಿಲೆಗಳಿಂದ ಬಳಲುತ್ತಿರುವ ಪಾರಿವಾಳಗಳಿಗೆ ಇಲ್ಲಿ ಸೂಕ್ತ ಚಿಕಿತ್ಸೆ ನೀಡಿ, ಆರೈಕೆ ಮಾಡಲಾಗುತ್ತದೆ. ಹಾರಬಲ್ಲದು, ಸ್ವತಂತ್ರವಾಗಿ ಬದುಕಬಲ್ಲದು ಎಂಬುದನ್ನು ಖಚಿತಪಡಿಸಿಕೊಂಡ ಬಳಿಕ ಅಂತಹ ಪಾರಿವಾಳವನ್ನು ಉದ್ಯಾನಗಳ ಬಳಿ ಬಿಡಲಾಗುತ್ತದೆ.

ಕೆಲವು ಪಾರಿವಾಳಗಳು ಶಾಶ್ವತವಾಗಿ ಹಾರಲಾಗದ ಸ್ಥಿತಿಯಲ್ಲಿ ಇರುತ್ತವೆ. ಅಂತಹವುಗಳನ್ನು ಆರೈಕೆ ಕೇಂದ್ರದಲ್ಲೇ ಸಾಕಲಾಗುತ್ತದೆ. ಚಿಕಿತ್ಸೆ ಹಂತದಲ್ಲಿ ಅಥವಾ ನಂತರ ಮೃತಪಟ್ಟ ಪಾರಿವಾಳಗಳನ್ನು ಜೈವಿಕ ತ್ಯಾಜ್ಯ ನಿರ್ವಹಣಾ ಸಂಸ್ಥೆಗೆ ನೀಡಿ ವೈಜ್ಞಾನಿಕ ವಿಧಾನದಲ್ಲಿ ವಿಲೇವಾರಿ ಮಾಡಿಸಲಾಗುತ್ತದೆ.

'ಪ್ರತಿದಿನ 30ರಿಂದ 50 ಪಾರಿವಾಳಗಳನ್ನು ಸಾರ್ವಜನಿಕರು ಇಲ್ಲಿಗೆ ತಂದುಕೊಡುತ್ತಾರೆ. ಸಾವಿರಕ್ಕೂ ಅಧಿಕ ಪಾರಿವಾಳಗಳು ಇಲ್ಲಿ ಆರೈಕೆ ಪಡೆಯುತ್ತಿವೆ. ಈವರೆಗೆ ಲಕ್ಷಕ್ಕೂ ಅಧಿಕ ಪಾರಿವಾಳಗಳಿಗೆ ನಮ್ಮ ಸಂಸ್ಥೆ ಆಸರೆಯಾಗಿದೆ' ಎನ್ನುತ್ತಾರೆ ಸೇವಾ ಸಮಿತಿಯ ಖಜಾಂಚಿ ವಸಂತರಾಜ್ ರಾಂಕ ಸೇಟಿಯ.

ದಾನಿಗಳ ನೆರವಿನಲ್ಲಿ ನಡೆಯುತ್ತಿರುವ ಈ ಸಂಸ್ಥೆಯು ಉಚಿತವಾಗಿ ಪಾರಿವಾಳಗಳ ಆರೈಕೆ ಮಾಡುತ್ತಿದೆ. ಇದಕ್ಕಾಗಿಯೇ ನಾಲ್ಕು ಅಂತಸ್ತಿನ ಕಟ್ಟಡವನ್ನು ಮೀಸಲಿರಿಸಲಾಗಿದ್ದು, 13 ಮಂದಿ ಈ ಆಸ್ಪತ್ರೆಯ ನಿರ್ವಹಣೆ ಮಾಡುತ್ತಿದ್ದಾರೆ. ವರ್ಷಕ್ಕೆ ₹60ರಿಂದ ₹70 ಲಕ್ಷವನ್ನು ಪಾರಿವಾಳಗಳಿಗಾಗಿ ವಿನಿಯೋಗಿಸುತ್ತಾರೆ.

ಆಸ್ಪತ್ರೆ ಆರಂಭಗೊಂಡಿದ್ದು ಹೇಗೆ: 30 ವರ್ಷಗಳ ಹಿಂದೆ ನಗರದೊಳಗೆ ಆಹಾರ ಸಿಗದೇ ಪರದಾಡುತ್ತಿದ್ದ ಪಾರಿವಾಳಗಳನ್ನು ಕಂಡ ಪನ್ನಲಾಲ್ ಜಿ. ಕಟಾರಿಯ ಮತ್ತು ಪುಕ್ಕರಾಜ್ ಜಿ. ರಾಂಕ ಸೇಟಿಯ ಎಂಬ ಇಬ್ಬರು ವರ್ತಕರು ಅವುಗಳಿಗೆ ಆಹಾರ ನೀಡಲು ಆರಂಭಿಸಿದ್ದರು. ತಮ್ಮ ಸ್ವಂತ ಹಣದಿಂದ ಧಾನ್ಯ ನೀಡುತ್ತಿದ್ದ ಅವರಿಗೆ ಧಾನ್ಯದ ಅವಶ್ಯಕತೆ ಹೆಚ್ಚಾಗಿರುವುದು ಅರಿವಿಗೆ ಬಂತು.

ಪಾರಿವಾಳಗಳಿಗೆ ಆಹಾರ ನೀಡಲು ದೇಣಿಗೆಯನ್ನು ಸಂಗ್ರಹಿಸಲು 23 ಸದಸ್ಯರನ್ನೊಳಗೊಂಡ ನೋಂದಾಯಿತ ಸಂಸ್ಥೆಯೊಂದನ್ನು ಆರಂಭಿಸಿ, ಆ ಸಂಸ್ಥೆಗೆ ಶ್ರೀ ಶಂಖೇಶ್ವರ್ ಪಾರ್ಶ್ವನಾಥ ಕಬೂತರ್ ದಾನ ಸೇವಾ ಸಮಿತಿ ಎಂದು ಹೆಸರಿಟ್ಟರು. ಆ ಸಂಸ್ಥೆಯ ಮೂಲಕ ಪಾರಿವಾಳಗಳಿಗೆ ಆಹಾರ ನೀಡುವ ಕಾರ್ಯ ಮುಂದುವರಿಯಿತು.

ಬಳಿಕ ಅವರ ಮಕ್ಕಳು ಆ ಸೇವಾ ಕಾರ್ಯವನ್ನು ಮುಂದುವರಿಸಿದರು. ಎಂಟು ವರ್ಷಗಳ ಹಿಂದೆ ನಗರದಲ್ಲಿ ಪಾರಿವಾಳಗಳಿಗೆ ಕಾಯಿಲೆಗಳು ಹೆಚ್ಚಾದವು. ಬೇರೆ ಬೇರೆ ಕಾರಣಗಳಿಂದಾಗಿ ಪಾರಿವಾಳಗಳ ಸಾವಿನ ಸಂಖ್ಯೆ ಹೆಚ್ಚಾಗುತ್ತ ಬರುವುದನ್ನು ಗಮನಿಸಿದ ಕಬೂತರ್ ದಾನ ಸೇವಾ ಸಮಿತಿಯು ಮತ್ತೊಂದು ಹೆಜ್ಜೆ ಮುಂದಿಟ್ಟಿತು. ಕಾಯಿಲೆಯಿಂದ ಬಳಲುವ, ಗಾಯಗೊಂಡ ಪಾರಿವಾಳಗಳಿಗಾಗಿ ಆಸ್ಪತ್ರೆಯನ್ನು ಆರಂಭಿಸಿತು.

'ಹಲವಾರು ಪಕ್ಷಿ ಪ್ರಭೇದಗಳು ಈಗಾಗಲೇ ಕಣ್ಮರೆ ಯಾಗಿದ್ದು, ಪಾರಿವಾಳಗಳು ಆ ಸಾಲಿಗೆ ಸೇರದಂತೆ ಮಾಡುವ ಸಣ್ಣ ಪ್ರಯತ್ನ ನಮ್ಮದು' ಎನ್ನುತ್ತಾರೆ ವಸಂತರಾಜ್ ರಾಂಕ ಸೇಟಿಯ.



ಚಿಕಿತ್ಸೆ ನೀಡಿದ ಬಳಿಕ ಪಾರಿವಾಳಗಳ ಆರೈಕೆ ಮಾಡಲಾಗುತ್ತಿದೆ



ಕಾಯಿಲೆಯಿಂದ ಬಳಲುತ್ತಿರುವ ಪಾರಿವಾಳಗಳು

ಸಂಪರ್ಕ ಹೇಗೆ?

ನಗರದಲ್ಲಿ ಎಲ್ಲಾದರೂ ಗಾಯಗೊಂಡ ಅಥವಾ ಕಾಯಿಲೆಯಿಂದ ಬಳಲುತ್ತಿರುವ ಪಾರಿವಾಳಗಳು ಕಂಡರೆ ಅದನ್ನು ಸಾರ್ವಜನಿಕರು ಆಸ್ಪತ್ರೆಗೆ ತಂದು ಕೊಡಬಹುದು ಅಥವಾ ಆಟೊ ಮತ್ತು ಬೇರೆ ವಾಹನಗಳ ಮೂಲಕ ಕಳುಹಿಸಿಕೊಡಬಹುದು.

ವಿಳಾಸ: ಶ್ರೀ ಶಂಖೇಶ್ವರ್ ಪಾರ್ಶ್ವನಾಥ ಜೈನ್ ಕಬೂತರ್ ದಾನ ಸೇವಾ ಸಮಿತಿ(ರಿ), ನಂ. 343, 57 'ಡಿ' ಅಡ್ಡರಸ್ತೆ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560010. ಮೊ.ಸಂ: 9845221309

'ಇನ್ನಷ್ಟು ಆಸ್ಪತ್ರೆ ಆರಂಭಕ್ಕೆ ಚಿಂತನೆ'

ನಗರದಲ್ಲಿ ಪ್ರತಿನಿತ್ಯ ಹಲವಾರು ಪಾರಿವಾಳಗಳು ತೊಂದರೆಗೆ ಒಳಗಾಗುತ್ತಿವೆ. ಆದರೆ ಇಡೀ ನಗರಕ್ಕೆ ಒಂದೇ ಪಾರಿವಾಳ ಆಸ್ಪತ್ರೆ ಇದೆ. ಕನಿಷ್ಠ ನಾಲ್ಕು ಆಸ್ಪತ್ರೆಗಳ ಅಗತ್ಯ ಇದೆ. ದಾನಿಗಳು ಸಹಕಾರ ನೀಡಿದರೆ. ಇನ್ನೂ ಹೆಚ್ಚಿನ ಪಾರಿವಾಳ ಆಸ್ಪತ್ರೆ ಆರಂಭಿಸುವ ಇಚ್ಛೆ ಹೊಂದಿದ್ದೇವೆ

ವಸಂತರಾಜ್ ರಾಂಕ ಸೇಟಿಯ ಖಜಾಂಚಿ, ಶ್ರೀ ಶಂಖೇಶ್ವರ್ ಪಾರ್ಶ್ವನಾಥ ಜೈನ್ ಕಬೂತರ್ ದಾನ ಸೇವಾ ಸಮಿತಿ


ನಗರದಲ್ಲಿ ಇಂದು

ಪ್ರಧಾನ್ ಗುರುದತ್ತ, ಮಂಡಗದ್ದೆ ಶ್ರೀನಿವಾಸಯ್ಯ ಅವರು ಸಂಪಾದಿಸಿದ 'ಕೆ.ವಿ. ರವಿಂದ್ರನಾಥ್ ಟ್ಯಾಗೋರ್' ಪುಸ್ತಕ ಬಿಡುಗಡೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು: ಟಿ. ತಿಮ್ಮೇಗೌಡ, ಡಿ.ವಿ. ಗುರುಪ್ರಸಾದ್, ಭಾಗ್ಯ ಟ್ಯಾಗೋರ್, ಅಧ್ಯಕ್ಷತೆ: ಜಿ.ಎ. ಪುರುಷೋತ್ತಮಗೌಡ, ಆಯೋಜನೆ: ಸಹ್ಯಾದ್ರಿ ಸಂಘ ಬೆಂಗಳೂರು, ಸ್ಥಳ: ಡಾ. ನರಸಿಂಹಯ್ಯ ಸಭಾಭವನ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

4 ಎಂಎಲ್‌ಡಿ ಸಾಮರ್ಥ್ಯದ ಜಲಾಗಾರದ ಶಂಕುಸ್ಥಾಪನೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಶೋಭಾ ಕರಂದ್ಲಾಜೆ, ಜಮೀರ್ ಅಹಮದ್ ಖಾನ್, ಅಧ್ಯಕ್ಷತೆ: ಎ.ಸಿ. ಶ್ರೀನಿವಾಸ, ಅತಿಥಿಗಳು ರಿಜ್ವಾನ್ ಅರ್ಷದ್, ಎಂ. ನಾಗರಾಜು ಯಾದವ್, ಆಯೋಜನೆ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಸ್ಥಳ: ಪಿಳ್ಳಣ್ಣ ಗಾರ್ಡನ್, ಸಗಾಯಪುರ ವಾರ್ಡ್, ಪುಲಕೇಶಿನಗರ, ಬೆಳಿಗ್ಗೆ 11

ಬುದ್ಧ ಜಯಂತಿ: ಸಾನ್ನಿಧ್ಯ: ಬಿಕ್ಕುಣಿ ಬುದ್ಧಮ್ಮ, ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಮುಖ್ಯ ಭಾಷಣ: ಛಲವಾದಿ ನಾರಾಯಣಸ್ವಾಮಿ, ಪ್ರಾಸ್ತಾವಿಕ ನುಡಿ: ಎಚ್.ಆರ್. ಸುರೇಂದ್ರ, ಆಯೋಜನೆ ಮತ್ತು ಸ್ಥಳ: ನಾಗಸೇನಾ ಬುದ್ಧ ವಿಹಾರ, ಸದಾಶಿವನಗರ, ಬೆಳಿಗ್ಗೆ 11.30

ಬುದ್ಧ ಪೌರ್ಣಿಮೆ, ಬುದ್ಧನ ಬೆಳದಿಂಗಳ ರಾತ್ರಿ ಕಾವ್ಯ–ಗಾನೋತ್ಸವ, ಬುದ್ಧ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಬಾಲಕೃಷ್ಣ ಎಚ್.ಸಿ., ಪ್ರಶಸ್ತಿ ಪ್ರದಾನ: ಎಲ್.ಹನುಮಂತಯ್ಯ, ಪ್ರಶಸ್ತಿ ಸ್ವೀಕರಿಸುವವರು: ಸಿ. ಸೋಮಶೇಖರ್, ಗುರುರಾಜ ಹೊಸಕೋಟೆ, ಎಂ. ನಂಜುಂಡಸ್ವಾಮಿ, ಜೆ. ರಾಜು, ಜಗದೀಶ್ ಎಸ್. ಮಹಾರಾಜ ಪೇಟ, ಜಿ. ಅಂಬರೀಶ್, ಎನ್. ಚಂದ್ರಶೇಖರ್, ಆಯೋಜನೆ: ರಂಗೋತ್ರಿ, ಸ್ಥಳ: ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್‌ನ ಆವರಣ, ಎಲೆಕೊಡಿಗೆಹಳ್ಳಿ, ಮಾಗಡಿ ಮುಖ್ಯರಸ್ತೆ, ಸಂಜೆ 5.30



ಭಗವಾನ್ ಬುದ್ಧರ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಆನಂದ ಭಂತೇಜಿ, ಬೋಧಿದತ್ತ ಭಂತೇಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ,ಸಂಜೆ 6

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಆಟೋದಲ್ಲಿ ಬಿಟ್ಟು ಹೋಗಿದ್ದ ಸೀಳುತುಟಿಯ ಮಗು ರಕ್ಷಣೆ

ಬೆಂಗಳೂರು: ಹೆಣ್ಣುಮಗುವಿಗೆ ಸೀಳುತುಟಿ ಇದೆಯೆಂಬ ಕಾರಣಕ್ಕೆ ಆಟೊದಲ್ಲಿ ಮಲಗಿಸಿ ಪರಾರಿಯಾಗಿದ್ದ ಜೋಡಿಯನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಪತ್ತೆಹಚ್ಚಿದ್ದಾರೆ.

ಏಪ್ರಿಲ್ 24ರಂದು ಠಾಣಾ ವ್ಯಾಪ್ತಿಯಲ್ಲಿ ಮಗುವನ್ನು ಆಟೊದಲ್ಲಿ ಬಿಟ್ಟು ಆರೋಪಿ ಅಪ್ಪಣ್ಣ ಹಾಗೂ 30 ವರ್ಷದ ಮಹಿಳೆ ಪರಾರಿಯಾಗಿದ್ದರು.

'ಕೊಡಗಿನ ವಿರಾಜಪೇಟೆಯ ಅಪ್ಪಣ್ಣ ಎಂಬಾತ ಮಹಿಳೆಯ ಜತೆ ಸಲುಗೆ ಹೊಂದಿದ್ದ. ಮಹಿಳೆಗೆ ಈಗಾಗಲೇ ಒಂದು ಮಗುವಿದ್ದು, ಪತಿಯ ಸಾವಿನ ನಂತರ ಅಪ್ಪಣ್ಣನೊಂದಿಗೆ ಸಂಬಂಧ ಹೊಂದಿದ್ದಳು. ಈ ಇಬ್ಬರ ಸಂಬಂಧಕ್ಕೆ ಜನಿಸಿದ್ದ ಹೆಣ್ಣುಮಗು ಸೀಳು ತುಟಿ ಹೊಂದಿತ್ತು. ಹಾಗಾಗಿ ಈ ಮಗುವನ್ನು ಸಾಕಲು ಇಚ್ಛಿಸದ ಜೋಡಿ, ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ನಿಲುಗಡೆ ಮಾಡಿದ್ದ ಆಟೊವೊಂದರಲ್ಲಿ ಮಲಗಿಸಿ ಕೆಎಸ್‌ಆರ್‌ಟಿಸಿ ಬಸ್ ಮೂಲಕ ವಿರಾಜಪೇಟೆಗೆ ಹೋಗಿತ್ತು. ಬೆಳಿಗ್ಗೆ ಮಗು ಅಳುತ್ತಿರುವ ಶಬ್ದ ಕೇಳಿದ ಸ್ಥಳೀಯರು ಮಾಹಿತಿ ನೀಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ಘಟನಾ ಸ್ಥಳದ ಸುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಗಳನ್ನು ಪರಿಶೀಲಿಸಲಾಯಿತು. ನಂತರ ವಿರಾಜಪೇಟೆಯಲ್ಲಿದ್ದ ಅಪ್ಪಣ್ಣನನ್ನು ಬಂಧಿಸಲಾಗಿದೆ. ಇಪ್ಪತ್ತು ದಿನದ ಮಗುವನ್ನು ಮಹಿಳೆಗೆ ಹಸ್ತಾಂತರಿಸಿ, ಎಚ್ಚರಿಕೆ ನೀಡಲಾಗಿದೆ ಎಂದು ಹೇಳಿದ್ದಾರೆ.

ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣ

ತೆನ್ನಿರಾ ಮೈನಾ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಜಿಲ್ಲೆಯ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣ ಸಂಬಂಧ ಭಾನುವಾರ ಆರೋಪಿ ತೆನ್ನಿರಾ ಮೈನಾ ಅವರು ಹೆಣ್ಣೂರು ಪೊಲೀಸ್ ಠಾಣೆಗೆ ಹಾಜರಾಗಿ ಹೇಳಿಕೆ ನೀಡಿದರು.

ಮೃತ ವಿನಯ್ ಸೋಮಯ್ಯ ಆತ್ಮಹತ್ಯೆಗೂ ಮೊದಲು ತನ್ನ ವಿರುದ್ಧ ರಾಜಕೀಯ ಪ್ರೇರಿತ ಎಫ್‌ಐಆರ್ ದಾಖಲಿಸಿ ಕಿರುಕುಳ ನೀಡಲಾಗುತ್ತಿದೆ ಎಂದು ಕೊಡಗಿನ ಶಾಸಕರಾದ ಮಂಥರ್ ಗೌಡ, ಎ.ಎಸ್.ಪೊನ್ನಣ್ಣ ಹಾಗೂ ಕೊಡಗು ಕಾಂಗ್ರೆಸ್ ಮುಖಂಡ ತೆನ್ನೀರಾ ಮೈನಾ ಹೆಸರು ಉಲ್ಲೇಖಿಸಿ ಮರಣಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು. ಹೆಣ್ಣೂರು ಠಾಣೆ ಪೊಲೀಸರು ತೆನ್ನಿರಾಗೆ ವಿಚಾರಣೆಗೆ ಹಾಜರಾಗುವಂತೆ ಎರಡು ಬಾರಿ ನೋಟಿಸ್ ನೀಡಿದ್ದರು.

ಆತ್ಮಹತ್ಯೆಗೂ ತನಗೂ ಸಂಬಂಧವಿಲ್ಲ: 'ನನಗೂ ಹಾಗೂ ಮೃತ ವಿನಯ್ ಸೋಮಯ್ಯಗೂ ವೈಯಕ್ತಿಕ ದ್ವೇಷ ಇಲ್ಲ. ವಿನಯ್ ಅಡ್ಮಿನ್ ಆಗಿದ್ದ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಕುರಿತು ಅಪಹಾಸ್ಯ ಮಾಡುವ ಪೋಸ್ಟ್ ಹಂಚಿಕೊಂಡಿದ್ದರು. ಹಾಗಾಗಿ ವಿನಯ್ ಸೋಮಯ್ಯ ಸೇರಿ ಗ್ರೂಪ್‌ನ ಮೂವರು ಸದಸ್ಯರ ವಿರುದ್ಧ ಮಡಿಕೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದೆ. ಅದರಂತೆ ಪೊಲೀಸರು ಆರೋಪಿಗಳನ್ನು ವಿಚಾರಣೆ ನಡೆಸಿದ್ದರು' ಎಂದು ತೆನ್ನಿರಾ ಮೈನಾ ಹೇಳಿಕೆ ನೀಡಿದ್ದಾರೆ ಎಂಬುದು ಗೊತ್ತಾಗಿದೆ.

ಅಪರಾಧ ಸುದ್ದಿ

'ಈ ಪ್ರಕರಣದಲ್ಲಿ ಮೂವರು ಆರೋಪಿಗಳು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದರು. ಹೀಗಾಗಿ ವಿನಯ್ ಸೋಮಯ್ಯ ಆತ್ಮಹತ್ಯೆಗೂ ತಮಗೂ ಯಾವುದೇ ಸಂಬಂಧವಿಲ್ಲ' ಎಂದು ತನಿಖಾಧಿಕಾರಿ ಎದುರು ಹೇಳಿಕೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಮತ್ತೊಂದೆಡೆ, ವಿನಯ್ ಸೋಮಯ್ಯ ಮರಣಪತ್ರದಲ್ಲಿ ಉಲ್ಲೇಖಿಸಿರುವ ಮಂಥರ್ ಗೌಡ ಮತ್ತು ಎ.ಎಸ್.ಪೊನ್ನಣ್ಣ ಅವರನ್ನೂ ಪೊಲೀಸರು ವಿಚಾರಣೆಗೆ ಒಳಪಡಿಸಲಿದ್ದಾರೆ. ಈ ನಿಟ್ಟಿನಲ್ಲಿ ಶೀಘ್ರದಲ್ಲೇ ಇಬ್ಬರಿಗೂ ನೋಟಿಸ್ ನೀಡಲಿದ್ದಾರೆ ಎಂದು ತಿಳಿದುಬಂದಿದೆ.

ಪ್ರಕರಣದ ಹಿನ್ನೆಲೆ: ಕೊಡಗು ಮೂಲದ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಪತ್ನಿ ಹಾಗೂ ಮಗು ಜತೆಗೆ ನಗರದಲ್ಲಿ ನೆಲಸಿದ್ದರು. ನಾಗವಾರದ ಎಚ್‌ಬಿಆರ್ ಲೇಔಟ್‌ನ ಖಾಸಗಿ ಕಂಪನಿಯಲ್ಲಿ ಕಾರ್ಯಾಚರಣೆ ವಿಭಾಗದ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಏಪ್ರಿಲ್ 4ರಂದು ಮುಂಜಾನೆ ತಾನು ಕೆಲಸ ಮಾಡುವ ಕಂಪನಿ ಗೋದಾಮಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ಮಾಜಿ ಉದ್ಯೋಗಿ ಬಂಧನ

ಮಹಿಳಾ ಸಹೋದ್ಯೋಗಿಗಳ ಭಾವಚಿತ್ರ ದುರ್ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಪನಿಯ ಮಹಿಳಾ ಸಹೋದ್ಯೋಗಿಗಳ ಭಾವಚಿತ್ರಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತಿದ್ದ ಮಾಜಿ ಉದ್ಯೋಗಿಯನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಕ್ಕೂರು ನಿವಾಸಿ ಆಶಿಶ್ ಮೊನ್ನಪ್ಪ (31) ಎಂಬಾತನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮಡಿಕೇರಿಯ ಆಶಿಶ್ ಮೊನ್ನಪ್ಪ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಜಕ್ಕೂರಿನ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ. ಯುವತಿಯರ ಭಾವಚಿತ್ರಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

'ಕಳೆದ ಜನವರಿಯಲ್ಲಿ ಕೆಲಸ ತೊರೆದಿದ್ದ ಆರೋಪಿ, ಬೇರೆ ಕಂಪನಿಗಳಿಗೆ ಸ್ವವಿವರ ಕಳುಹಿಸಲು ಹಳೆ ಕಂಪನಿಯ ಮಹಿಳಾ ಸಹೋದ್ಯೋಗಿಯಿಂದ ಲ್ಯಾಪ್‌ಟಾಪ್ ಪಡೆದುಕೊಂಡಿದ್ದ. ಕೆಲ ದಿನಗಳ ನಂತರ ಲ್ಯಾಪ್‌ಟಾಪ್



ಆಶಿಶ್ ಮೊನ್ನಪ್ಪ

ಹಿಂತಿರುಗಿಸಿದ್ದ. ಆದರೆ, ಅಸಭ್ಯವಾಗಿ ಮಹಿಳೆಯರ ಫೋಟೊಗಳನ್ನು ಎಡಿಟ್ ಮಾಡಿಟ್ಟುಕೊಂಡಿದ್ದ ಫೋಲ್ಡರ್ ಅಳಿಸಿ ಹಾಕುವುದನ್ನು ಮರೆತಿದ್ದ. ಸ್ನೇಹಿತೆ ಲ್ಯಾಪ್‌ಟಾಪ್ ನೋಡಿದಾಗ ಈ ವಿಚಾರ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

'ಈ ಬಗ್ಗೆ ಕರೆ ಮಾಡಿ ಆರೋಪಿಯನ್ನು ಕರೆಸಿಕೊಂಡು ಪ್ರಶ್ನಿಸಿದಾಗ, ಆತಂಕಗೊಂಡು ಸ್ಥಳದಲ್ಲೇ ಮೊಬೈಲ್ ಬಿಟ್ಟು ಪರಾರಿಯಾಗಿದ್ದ. ಮಾಜಿ ಸಹೋದ್ಯೋಗಿಗಳೂ ಸೇರಿದಂತೆ ಹಲವು ಮಹಿಳೆಯರ ಭಾವಚಿತ್ರಗಳನ್ನು ತಿರುಚಿ ನಕಲಿ ಬೆತ್ತಲೆ ಫೋಟೊಗಳ ಜೊತೆ ಸೇರಿಸಿ ಎಡಿಟ್ ಮಾಡಿ, ಟೆಲಿಗ್ರಾಮ್ ಸಾಮಾಜಿಕ ಮಾಧ್ಯಮದಲ್ಲಿ ಅಪ್‌ಲೋಡ್ ಮಾಡಿ ವಿಕೃತಿ ಮೆರೆಯುತ್ತಿದ್ದ. ಸಂತ್ರಸ್ತೆಯರ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.



ನಾನು ಮಗು.. ನೀನು ನಗು..

ಕಬ್ಬನ್ ಪಾರ್ಕ್ ಆವರಣದಲ್ಲಿರುವ ಮತ್ಸ್ಯಾಲಯದಲ್ಲಿ ಎತ್ತಿ ಆಡಿಸುವಾಗ ಮಗುವಿನ ಮುಖದಲ್ಲಿ ಅರಳಿದ ನಗು ನೋಡಿ ತಾಯಿ ಮುಖದಲ್ಲಿಯೂ ಸಂಭ್ರಮ ಅರಳಿದ ಕ್ಷಣವು ಅಮ್ಮಂದಿರ ದಿನ ಕಂಡುಬಂತು ಪ್ರಜಾವಾಣಿ ಚಿತ್ರ: ರಂಜು ಪಿ.

ಖಾಸಗಿ ಕಂಪನಿ ಉದ್ಯೋಗಿಗೆ ₹12.81 ಲಕ್ಷ ವಂಚನೆ

ಬೆಂಗಳೂರು: ರಿವ್ಯೂ ಹೆಸರಿನಲ್ಲಿ ಖಾಸಗಿ ಕಂಪನಿಯ ಉದ್ಯೋಗಿಯೊಬ್ಬರಿಗೆ ಸೈಬರ್ ವಂಚಕರು ₹12.81 ಲಕ್ಷ ವಂಚನೆ ಮಾಡಿದ್ದಾರೆ.

ಸಂತ್ರಸ್ತೆ ರಮ್ಯಾ ಅವರ ದೂರು ಆಧರಿಸಿ ಕೇಂದ್ರ ವಿಭಾಗದ ಸೈಬರ್ ಅಪರಾಧ ಠಾಣೆ ಪೊಲೀಸರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಕೆಲ ದಿನಗಳ ಹಿಂದೆ ಪ್ರಿಯಾ ಎಂಬ ಮಹಿಳೆ ವಾಟ್ಸ್‌ಆ್ಯಪ್‌ನಲ್ಲಿ ರಮ್ಯಾ ಅವರಿಗೆ ಸಂದೇಶ ಕಳುಹಿಸಿ, ಮನೆಯಲ್ಲಿಯೇ ಕುಳಿತು ರೆಸ್ಟೋರೆಂಟ್‌ಗಳಿಗೆ ರಿವ್ಯೂ ನೀಡಿ ಹಣ ಗಳಿಸಬಹುದೆಂದು ತಿಳಿಸಿದ್ದರು. ಇದನ್ನು ನಂಬಿದ ಅವರು, ಪ್ರಿಯಾ ಸೂಚಿಸಿದ್ದ ಟೆಲಿಗ್ರಾಂ ಗ್ರೂಪ್‌ಗೆ ಸೇರಿದ್ದರು.

ನಂತರ ಟಾಸ್ಕ್‌ಗಳ ಹೆಸರಲ್ಲಿ ರಮ್ಯಾ ಅವರಿಂದಲೇ ಹಣ ಹೂಡಿಕೆ ಮಾಡಿಸಲು ಯತ್ನಿಸಿದ್ದಾರೆ. ಹೂಡಿಕೆ ಮಾಡಿದರೆ ಅತ್ಯಧಿಕ ಲಾಭ ಸಿಗುವುದೆಂದು ನಂಬಿಸಿದ್ದಾರೆ. ಅದನ್ನು ನಂಬಿದ ರಮ್ಯಾ, ಆರೋಪಿ ನೀಡಿದ್ದ ವಿವಿಧ ಬ್ಯಾಂಕ್ ಖಾತೆಗಳಿಗೆ ₹12.81 ಲಕ್ಷ ವರ್ಗಾಯಿಸಿದ್ದಾರೆ. ಹಣ ವಾಪಸ್ ಪಡೆಯಲು ಮುಂದಾದಾಗ ಮತ್ತೆ ₹32 ಲಕ್ಷ ವರ್ಗಾಯಿಸುವಂತೆ ಬೇಡಿಕೆ ಇಟ್ಟಿದ್ದಾರೆ. ಇದರಿಂದ ಅನುಮಾನಗೊಂಡ ಅವರು ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.



ಯಲಹಂಕ ಕ್ಷೇತ್ರದ ಶ್ರೀರಾಮನಹಳ್ಳಿಯ ಪೀಪಲ್ಸ್ ಟ್ರಸ್ಟ್ ಸೇವಾಕೇಂದ್ರ ಹಾಗೂ ಕೇಂದ್ರ ಗ್ರಾಮಾಭಿವೃದ್ಧಿ ಮಂಡಳಿ ವತಿಯಿಂದ ಧರ್ಮದರ್ಶಿ ದಿವಂಗತ ಎನ್‌ಸಿ.ನಾಣಯ್ಯನವರ ಸ್ಮರಣಾರ್ಥ ಭಾನುವಾರ ಆಯೋಜಿಸಿದ್ದ 22ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ 17 ಜೋಡಿಗಳು ನೂತನ ದಾಂಪತ್ಯ ಜೀವನಕ್ಕೆ ಕಾಲಿಟ್ಟವು

'ಮೂರು ಹಂತದ ಸಂಸ್ಕರಣೆ ಮಾಡಿ'

ನೆಲಮಂಗಲ: 'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭೂಮಿಪೂಜೆ ನೆರವೇರಿಸಿದ ವೃಷಭಾವತಿ ಏತ ನೀರಾವರಿ ಯೋಜನೆಗೆ ವಿರೋಧ ಇಲ್ಲ. ಆದರೆ ಆ ನೀರನ್ನು ಎರಡು ಹಂತದ ಬದಲು ಮೂರು ಹಂತಗಳಲ್ಲಿ ಸಂಸ್ಕರಿಸಿ ಕೆರೆಗಳಿಗೆ ಹರಿಸಬೇಕು' ಎಂದು ಜಾಗೃತ ನಾಗರಿಕ ವೇದಿಕೆಯ ಸಂಚಾಲಕ ಗಂಗಾಧರ್ ಕಾಸರಘಟ್ಟ ಮನವಿ ಮಾಡಿದರು.

'ಎರಡು ಹಂತಗಳಲ್ಲಿ ಸಂಸ್ಕರಿಸಿದ ನೀರು ಕೃಷಿ ಹಾಗೂ ಮಾನವ ಉಪಯೋಗಕ್ಕೂ ಯೋಗ್ಯವಲ್ಲ ಎಂದು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ವರದಿ ನೀಡಿವೆ. ಹೀಗಾಗಿ ಮೂರು ಹಂತದ ಸಂಸ್ಕರಣೆ ಅಗತ್ಯ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವಿಜ್ಞಾನಿ ಜಿ.ಬೈರೇಗೌಡ ಮಾತನಾಡಿ, 'ವೃಷಭಾವತಿ ವ್ಯಾಲಿ ನೀರು ಕುಡಿಯಲು ಯೋಗ್ಯವಲ್ಲ, ಕೃಷಿಗೆ ಬಳಸಬಹುದು ಎಂದು ಸರ್ಕಾರ ತಿಳಿಸಿದೆ. ಪ್ರಾಣಿ ಪಕ್ಷಿಗಳು ಕುಡಿಯುವುದನ್ನು ಹೇಗೆ ತಪ್ಪಿಸುತ್ತಾರೆ' ಎಂದು ಪ್ರಶ್ನಿಸಿದರು.

ನಗರ ಕೃಷಿ ನೀತಿ ರೂಪಿಸಲು ಪ್ರಸ್ತಾವ ಸಲ್ಲಿಸಿ

'ಹಸಿರು ಬೆಂಗಳೂರು' ಕಾರ್ಯಾಗಾರದಲ್ಲಿ ಶಾಸಕ ರಿಜ್ವಾನ್ ಅರ್ಷದ್ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರನ್ನು ಹಸಿರಾಗಿಸುವ ನಿಟ್ಟಿನಲ್ಲಿ ನಗರ ಕೃಷಿಗೆ ಸಂಬಂಧಿಸಿದ ನೀತಿಯನ್ನು ರೂಪಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುವಂತೆ ಶಾಸಕ ರಿಜ್ವಾನ್ ಅರ್ಷದ್ ಅವರು ಕೃಷಿ ತಂತ್ರಜ್ಞರ ಸಂಸ್ಥೆಗೆ ಸಲಹೆ ನೀಡಿದರು.

ಕೃಷಿ ತಂತ್ರಜ್ಞರ ಸಂಸ್ಥೆ ಆಯೋಜಿಸಿದ್ದ 'ಹಸಿರು ಬೆಂಗಳೂರು: ಸುಸ್ಥಿರ ಜೀವನಕ್ಕಾಗಿ ಉದ್ಯಾನ ನಗರಿಯ ಪುನಶ್ಚೇತನ' ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಹಸಿರು ಬೆಂಗಳೂರು ಕುರಿತು ಆಯೋಜಿಸಿರುವ ಕಾರ್ಯಾಗಾರ ಸಕಾಲಿಕವಾಗಿದೆ. ಹನಿ ಹನಿಗೂಡಿದರೆ ಹಳ್ಳ ಎನ್ನುವಂತೆ ಪ್ರತಿಯೊಬ್ಬರೂ ವೈಯಕ್ತಿಕವಾಗಿ ತಮ್ಮ ಮನೆಗಳ ಅಂಗಳದಲ್ಲಿ ಗಿಡಗಳನ್ನು ಬೆಳೆಸಿದರೆ, ನಗರ ಹಸಿರಾಗುತ್ತದೆ. ಈ ಬಗ್ಗೆ ನಗರವಾಸಿಗಳಿಗೆ ಇನ್ನೂ ಹೆಚ್ಚಿನ ತಿಳಿವಳಿಕೆ ಮೂಡಿಸಿ. ಪ್ರತಿ ತಿಂಗಳೂ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿ' ಎಂದರು.

ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ ದಳವಾಯಿ ಮಾತನಾಡಿ, 'ನಗರ ಹಾಗೂ ನಗರದ ಅಂಚಿನ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಗಳನ್ನು ಉತ್ತೇಜಿಸುವ ಅಗತ್ಯವಿದೆ. ಇದಕ್ಕೆ ಪೂರಕವಾಗಿ ನಿಯಮಾವಳಿಗಳನ್ನು ಸರ್ಕಾರ ರೂಪಿಸಬಹುದು' ಎಂದು ಹೇಳಿದರು.



ಸಂಪನ್ಮೂಲ ವ್ಯಕ್ತಿ ರಾಜೇಂದ್ರ ಹೆಗಡೆ ತ್ಯಾಜ್ಯದಿಂದ ಕಾಂಪೋಸ್ಟ್ ಮಾಡುವ ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿವರಣೆ ನೀಡಿದರು

ನಂತರ ನಡೆದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿ ರಾಜೇಂದ್ರ ಹೆಗಡೆ, 'ನಗರವಾಸಿಗಳಿಗೆ ಹಸಿರು ಜೀವನ ಪದ್ಧತಿಗಳು' ವಿಷಯದ ಕುರಿತು ವಿಚಾರ ಮಂಡಿಸಿದರು. ನಂತರ ಮನೆಯ ತ್ಯಾಜ್ಯದಿಂದ ಕೈತೋಟಕ್ಕೆ ಅಗತ್ಯವಾದ ಕಾಂಪೋಸ್ಟ್ ತಯಾರಿಕೆಯನ್ನು ಪ್ರಾತ್ಯಕ್ಷಿಕೆ ಮೂಲಕ ಪ್ರಸ್ತುತಪಡಿಸಿದರು.

ವಿಜ್ಞಾನಿ ಚಂದ್ರಶೇಖರ ಬಿರಾದಾರ ಅವರು, 'ಬೆಂಗಳೂರಿನ ಹಸಿರೀಕರಣ ಮತ್ತು ಸುಸ್ಥಿರ ಜೀವನವನ್ನು ಉತ್ತೇಜಿಸುವ ಕ್ರಮಗಳು' ಕುರಿತು ಉಪನ್ಯಾಸ ನೀಡಿದರು. ಕಾರ್ಯಾಗಾರದಲ್ಲಿ ನಗರದ ವಿವಿಧ ಭಾಗಗಳ ನಿವಾಸಿಗಳು ಪಾಲ್ಗೊಂಡಿದ್ದರು. ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷ ಎ.ಬಿ. ಪಾಟೀಲ ಮಾತನಾಡಿದರು. ಕಾರ್ಯಕ್ರಮ ಸಮಿತಿಯ ಮುಖ್ಯಸ್ಥ ಎಸ್.ಬಿ.ಯೋಗಾನಂದ, ಐಎಟಿ ಕಾರ್ಯದರ್ಶಿ ಯೋಗೇಶ್ ಜಿ.ಎಚ್. ಭಾಗವಹಿಸಿದ್ದರು.

'ಸರ್ಕಾರದ ಪ್ರಶಸ್ತಿಗೆ ಬಹಿಷ್ಕೃತರು ನಾವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಶಸ್ತಿ ನೀಡುವಾಗ ಸರ್ಕಾರ ತಾರತಮ್ಯ ಮಾಡುತ್ತಿದೆ. ನಮ್ಮಂಥವರು ಬಹಿಷ್ಕೃತರ ಪಟ್ಟಿಯಲ್ಲಿದ್ದು, ಸರ್ಕಾರ ಖಂಡಿತ ಪ್ರಶಸ್ತಿ ನೀಡುವುದಿಲ್ಲ' ಎಂದು ಕವಿ ಬಿ.ಆರ್. ಲಕ್ಷ್ಮಣರಾವ್ ಬೇಸರ ವ್ಯಕ್ತಪಡಿಸಿದರು.

ಸುಂದರ ಪ್ರಕಾಶನ ಭಾನುವಾರ ಹಮ್ಮಿಕೊಂಡಿದ್ದ 'ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ ಪ್ರದಾನ ಮತ್ತು ಪುಸ್ತಕ ಬಿಡುಗಡೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಶಸ್ತಿಗೆ ಆಯ್ಕೆ ಮಾಡುವಾಗ ನಮ್ಮವರು, ಸ್ನೇಹಿತರು ಎಂಬುದು ಇರಬಾರದು. ಮಾಡಿದ ಕೆಲಸವನ್ನು ನೋಡಿ ಪ್ರಶಸ್ತಿಗೆ ಆಯ್ಕೆ ಮಾಡಬೇಕು' ಎಂದು ಸಲಹೆ ನೀಡಿದರು.

ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ ಸ್ವೀಕರಿಸಿದ ನಟಿ, ನಿರ್ದೇಶಕಿ ಎಸ್.ವಿ. ಸುಷ್ಮಾ ಮಾತನಾಡಿ, 'ಬದುಕಿನಲ್ಲಿ ಏರು ಪೇರುಗಳನ್ನು ಕಂಡಿದ್ದೇನೆ. ಒಬ್ಬ ಕಲಾವಿದನಿಗೆ ತನ್ನ ಎಲ್ಲ ಪ್ರತಿಭೆಯನ್ನು ಅಭಿವ್ಯಕ್ತಿಗೊಳಿಸಲು ಹೆಚ್ಚು ಅವಕಾಶ ಇರುವುದು ರಂಗಭೂಮಿಯಲ್ಲಿ ಮಾತ್ರ' ಎಂ ದರು.

ಮಂ.ಆ. ವೆಂಕಟೇಶ್ ಅವರ 'ಕರ್ನಾಟಕ ರಾಜ್ಯ ರಮಾರಮಣರು' ಪುಸ್ತಕ ಬಿಡುಗಡೆ ಮಾಡಲಾಯಿತು. ವಿಜಯನಗರ ಬಿಂಬ ಮತ್ತು ಪಿ.ಇ.ಎಸ್ . ವಿಶ್ವವಿದ್ಯಾಯದ ಶಿಷ್ಯವೃಂದದಿಂದ 'ರಂಗ ಕವನ' ಪ್ರಾಯೋಗಿಕ ರಂಗ ಪ್ರಸ್ತುತಿ ನಡೆಯಿತು. ರಂಗಕರ್ಮಿ ಗುಂಡಣ್ಣ, ಸಾಹಿತಿ ಎಚ್. ಗೋಪಾಲಕೃಷ್ಣ, ಇಂದಿರಾ ಸುಂದರ್ ಭಾಗವಹಿಸಿದ್ದರು.



ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿಯನ್ನು ನಟಿ ಎಸ್.ವಿ. ಸುಷ್ಮಾ ಅವರಿಗೆ ಭಾನುವಾರ ಪ್ರದಾನ ಮಾಡಲಾಯಿತು —ಪ್ರಜಾವಾಣಿ ಚಿತ್ರ

'ಮುಜರಾಯಿ ಕಾನೂನು ತಿದ್ದುಪಡಿ ರಾಜ್ಯಪಾಲರು ಒಪ್ಪಿಗೆ ನೀಡಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ಕಾನೂನು ತಿದ್ದುಪಡಿ ಮಸೂದೆಗೆ ರಾಜ್ಯಪಾಲರು ಒಪ್ಪಿಗೆ ನೀಡುವ ಮೂಲಕ 'ಸಿ' ಶ್ರೇಣಿಯ ದೇವಸ್ಥಾನಗಳ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಅಖಿಲ ಕರ್ನಾಟಕ ಅರ್ಚಕರ ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ ಮನವಿ ಮಾಡಿದೆ.

ಒಕ್ಕೂಟದ ಅಧ್ಯಕ್ಷ ಕೆ.ಇ. ರಾಧಾಕೃಷ್ಣ, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಮುಜರಾಯಿ ಕಾನೂನಿಗೆ ತಿದ್ದುಪಡಿ ಮಾಡಿದರೆ ಹೆಚ್ಚು ವರಮಾನ ಇರುವ 'ಎ' ಮತ್ತು 'ಬಿ' ಶ್ರೇಣಿಯ ದೇವಸ್ಥಾನಗಳ ಹೆಚ್ಚುವರಿ ಆದಾಯದ ಪಾಲು 'ಸಿ' ಶ್ರೇಣಿಯ ದೇವಸ್ಥಾನಗಳಿಗೆ ಸಿಗಲಿದ್ದು, ಈ ದೇವಸ್ಥಾನಗಳ ಅಭಿವೃದ್ಧಿಗೆ ಸಹಾಯವಾಗುತ್ತದೆ. ಆದರೆ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಈ ಮಸೂದೆಯನ್ನು ಯಾಕೆ ವಾಪಸ್ ಕಳುಹಿಸಿದರು ಎಂಬುದು ಗೊತ್ತಾಗುತ್ತಿಲ್ಲ' ಎಂದು ತಿಳಿಸಿದರು.

ರಾಜ್ಯ ಪುರಾತತ್ವ ಇಲಾಖೆ ಮತ್ತು ಮುಜರಾಯಿ ಇಲಾಖೆಗಳು ಜಂಟಿಯಾಗಿ ಕಾಲಮಿತಿ ನಿಗದಿಪಡಿಸಿಕೊಂಡು ಐತಿಹಾಸಿಕ ದೇವಸ್ಥಾನಗಳ ಆಸ್ತಿಗಳ ಸರ್ವೇಕ್ಷಣೆ ನಡೆಸಬೇಕು. ಅವುಗಳ ಅಭಿವೃದ್ಧಿಗೆ ₹500 ಕೋಟಿ ಮೀಸಲಿಡಬೇಕು. ಮುಜರಾಯಿ ದೇವಸ್ಥಾನಗಳಿಗೆ ಸಂಬಂಧಪಟ್ಟ ಸುಮಾರು ಒಂದು ಲಕ್ಷ ಎಕರೆ ವಿಸ್ತೀರ್ಣದ ಜಮೀನುಗಳನ್ನು ಪಟ್ಟಭದ್ರರು ಅತಿಕ್ರಮಣ ಮಾಡಿದ್ದಾರೆ. ಬೆಂಗಳೂರು ನಗರದಲ್ಲಿಯೂ ದೇವಸ್ಥಾನಗಳ ಬೆಲೆ ಬಾಳುವ ಜಮೀನು ಬಲಿಷ್ಠರ ಕೈಯಲ್ಲಿದೆ. ಎ.ಟಿ. ರಾಮಸ್ವಾಮಿ ವರದಿಯನ್ನು ಅನುಷ್ಠಾನಕ್ಕೆ ತರುವ ಮೂಲಕ ಆ ಜಮೀನು ವಶಪಡಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅರ್ಚಕರು, ಉದ್ಯೋಗಿಗಳ ಮೇಲೆ ನಡೆಯುವ ದೌರ್ಜನ್ಯ ತಡೆಯಲು ನೀತಿ ರೂಪಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿರುವ ದೇವಸ್ಥಾನಗಳಲ್ಲಿ ಅರ್ಚಕರಿಗೆ ವಸತಿ ನಿರ್ಮಿಸಿಕೊಡಬೇಕು. ಪೂಜಾದ್ರವ್ಯಗಳ ನಿರ್ವಹಣೆಗೆ ತಿಂಗಳಿಗೆ ₹5ಸಾವಿರ ನೀಡಬೇಕು ಎಂದು ಆಗ್ರಹಿಸಿದರು.

ಒಕ್ಕೂಟದ ಶಾಮಾಚಾರ್, ಶ್ಯಾಮ ಸುಂದರ್, ಉಮೇಶ್ ಶರ್ಮ, ಸಂಪರ್ಕಾಧಿಕಾರಿ ಗಾಯತ್ರಿ ಉಪಸ್ಥಿತರಿದ್ದರು.



ತಾಯಂದಿರ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು

ವ್ಯಕ್ತಿತ್ವ ರೂಪಿಸುವ ತಾಯಿ: ಮಮತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಯೊಂದು ಮಗುವನ್ನು ಸಮಾಜದಲ್ಲಿ ಉತ್ತಮ ವ್ಯಕ್ತಿಯನ್ನಾಗಿ ರೂಪಿಸುವಲ್ಲಿ ತಾಯಿಯ ಪಾತ್ರ ದೊಡ್ಡದು ಎಂದು ರಾಜ್ಯ ಮಾಹಿತಿ ಆಯುಕ್ತೆ ಬಿ.ಆರ್. ಮಮತಾ ಹೇಳಿದರು.

ಪರಿವರ್ತನಂ ಟ್ರಸ್ಟ್ ಹಾಗೂ ಮಾಯಾ ಫೌಂಡೇಶನ್ ಹಮ್ಮಿಕೊಂಡಿದ್ದ 'ತಾಯಂದಿರ ದಿನಾಚರಣೆ', ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪ್ರಕೃತಿಯಲ್ಲಿ ಇರುವ ಎಲ್ಲ ರೀತಿಯ ಜೀವಿಗಳಲ್ಲೂ ತನ್ನ ಮಗುವಿಗಾಗಿ ಸದಾ ಮಿಡಿಯುವ ಜೀವವೆಂದರೆ ಅದು ತಾಯಿ. ಮಗುವಿನ ಆರೈಕೆಗಾಗಿ ತನ್ನೆಲ್ಲಾ ಸರ್ವಸ್ವವನ್ನು ಮುಡಿಪಾಗಿಡುತ್ತಾಳೆ. ತನ್ನ ಕರುಳಿನ ಕುಡಿಗೆ ಸಣ್ಣ ಕೆಡುಕಾಗದಂತೆ ಜೋಪಾನ ಮಾಡುತ್ತಾಳೆ' ಎಂದು ತಿಳಿಸಿದರು.

ತಾಯಂದಿರ ದಿನಾಚರಣೆ ಪ್ರಯುಕ್ತ ಪತ್ರಿಕೋದ್ಯಮದ ಸಾಧಕರು, ಕ್ರೀಡಾ ಸಾಧಕರು ಸೇರಿದಂತೆ ವಿವಿಧ ಕ್ಷೇತ್ರದ ಸಾಧಕಿಯರನ್ನು ಮತ್ತು ಗರ್ಭಿಣಿಯರನ್ನು ಸನ್ಮಾನಿಸಲಾಯಿತು. ಕರ್ನಾಟಕ ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷ ಬಾನಂದೂರು ಕೆಂಪಯ್ಯ, ಮಾಯಾ ಫೌಂಡೇಶನ್‌ನ ಸಂಸ್ಥಾಪಕಿ ರಮ್ಯಾ ಎಂ.ಕೆ., ಪರಿವರ್ತನಂ ಟ್ರಸ್ಟ್ ಸಂಸ್ಥಾಪಕ ವಿನೋದ್ ಚೆನ್ನಕೃಷ್ಣ ಹಾಗೂ ವಿಧಾನಪರಿಷತ್ ಸದಸ್ಯ ಶರವಣ ಉಪಸ್ಥಿತರಿದ್ದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256




ಕಸದ ತೊಟ್ಟಿಯಾಗುತ್ತಿರುವ ಉದ್ಯಾನ

'ಕಸ ತೆರವುಗೊಳಿಸಿ'

ನಗರದ ಮೇಖ್ರಿ ವೃತ್ತದ ಬಳಿ ಚಂದದ ಉದ್ಯಾನವಿದೆ. ಅದರೊಳಗೆ ಐತಿಹಾಸಿಕ ಕೆಂಪೇಗೌಡ ಗಡಿ ಗೋಪುರವಿದೆ. ನಿತ್ಯ ನೂರಾರು ವಾಯುವಿಹಾರಿಗಳು ಈ ಉದ್ಯಾನದಲ್ಲಿ ವಿಹರಿಸುತ್ತಾರೆ. ಇಂಥ ವಿಶಿಷ್ಟ ಉದ್ಯಾನ ದಿನೇದಿನೇ ಕಸದ ತೊಟ್ಟಿಯಂತಾಗುತ್ತಿದೆ. ಸ್ವಚ್ಛತೆ ಮರೀಚಿಕೆಯಾಗುತ್ತಿದೆ. ಇಲ್ಲಿಗೆ ಬರುವ ವಾಯುವಿಹಾರಿಗಳಿಗೆ ನಿತ್ಯ ಕಸದ ದರ್ಶನ ಹೆಚ್ಚಾಗುತ್ತಿದೆ. ಉದ್ಯಾನದ ಸ್ವಚ್ಛತೆಗೆ ಅಧಿಕಾರಿಗಳು ಆದ್ಯತೆ ನೀಡಬೇಕು.

ಶಿವಕುಮಾರ್
ಆರ್.ಟಿ.ನಗರ



ಇಂದಿರಾ ಕ್ಯಾಂಟೀನ್ ಫಲಕದಲ್ಲಿ ಇಂ ಅಕ್ಷರ ಮಾತ್ರ ಇರುವುದು

'ಇಂದಿರಾ ಕ್ಯಾಂಟೀನ್ ಹೆಸರಿನ ಫಲಕ ಬರೆಯಿಸಿ'

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಅಗ್ರಹಾರ ದಾಸರಹಳ್ಳಿಯಲ್ಲಿ ಇರುವ ಇಂದಿರಾ ಕ್ಯಾಂಟೀನ್‌ನ ಹೆಸರಿನ ಫಲಕ ಕಿತ್ತುಹೋಗಿ ವರ್ಷಗಳೇ ಕಳೆದಿವೆ. ಜನರಿಗೆ ಈ ಕ್ಯಾಂಟೀನ್‌ನ ಹೆಸರು ಏನು ಎಂಬುದನ್ನು ತಿಳಿದುಕೊಳ್ಳಲು ಕಷ್ಟವಾಗುತ್ತಿದೆ. ಫಲಕದಲ್ಲಿ ಈಗ 'ಇಂ' ಅಕ್ಷರ ಮಾತ್ರ ಉಳಿದಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಫಲಕ ಬದಲಿಸಬೇಕು.

ಕೆ.ಎಸ್. ಕುಮಾರಸ್ವಾಮಿ.
ಅಗ್ರಹಾರ ದಾಸರಹಳ್ಳಿ

'ಪಾದಚಾರಿ ಮಾರ್ಗದಲ್ಲಿನ ಕಸ ತೆರವುಗೊಳಿಸಿ'

ಬನಶಂಕರಿ ಮೂರನೇ ಹಂತದ ಆರನೇ ಬ್ಲಾಕ್ ಎರಡನೇ ಫೇಸ್‌ನ ನಾಲ್ಕನೇ ಮುಖ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿ (ಗಿರಿನಗರ ವಾರ್ಡ್) ತೆಂಗಿನ ಗರಿಯ ರಾಶಿ ಬಿದ್ದಿದೆ. ಎರಡು ತಿಂಗಳಿಂದ ತೆಂಗಿನ ಗರಿಯ ರಾಶಿಯನ್ನು ತೆರವುಗೊಳಿಸುವ ಕೆಲಸವಾಗಿಲ್ಲ. ಈಗ ಇದು ಕಸ ಹಾಕುವ ಸ್ಥಳವಾಗಿ ಬದಲಾಗಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಇದನ್ನು ತೆರವುಗೊಳಿಸುವಂತೆ ಬಿಬಿಎಂಪಿ ಸಿಬ್ಬಂದಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಮೋಹನದಾಸ್, ಬನಶಂಕರಿ



ಬನಶಂಕರಿ ಪಾದಚಾರಿ ಮಾರ್ಗದಲ್ಲಿ ಹಾಕಿರುವ ತೆಂಗಿನ ಗರಿಗಳ ರಾಶಿ

ಮರಕ್ಕೆ ಕಾರು ಡಿಕ್ಕಿ ಬೆಂಗಳೂರು ಯುವಕ ಸಾವು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಪಾಂಡವಪುರ ಬಳಿ ಭಾನುವಾರ ಕಾರೊಂದು ಮರಕ್ಕೆ ಡಿಕ್ಕಿ ಹೊಡೆದು ಬೆಂಗಳೂರಿನ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಬೆಂಗಳೂರಿನ ಹೆಬ್ಬಾಳದ ಮೋಹನ್ (21) ಮೃತಪಟ್ಟ ಯುವಕ. ನಾಲ್ವರು ಸ್ನೇಹಿತರೊಂದಿಗೆ ಕಬ್ಬಾಳು ದೇವಸ್ಥಾನಕ್ಕೆ ಹೋಗಿ ವಾಪಸ್ ಬೆಂಗಳೂರಿಗೆ ತೆರಳುವ ವೇಳೆ ಕಾರು ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಮರಕ್ಕೆ ಡಿಕ್ಕಿ ಹೊಡೆಯಿತು. ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ.

ಜೊತೆಯಲ್ಲಿದ್ದ ನಾಲ್ವರು ಸ್ನೇಹಿತರಿಗೆ ತೀವ್ರ ಗಾಯಗಳಾಗಿವೆ. ಗಾಯಗೊಂಡವರನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕಳುಹಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಅಕ್ಕೂರು ಪೊಲೀಸರು ಆಗಮಿಸಿ ಮೃತದೇಹವನ್ನು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದರು. ಗಾಯಾಳುಗಳನ್ನು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರು. ತಾಲ್ಲೂಕಿನ ಅಕ್ಕೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳೆದ ಭಾನುವಾರ ಇದೇ ರಸ್ತೆಯ ಅಮ್ಮಳ್ಳಿದೊಡ್ಡಿ ಗ್ರಾಮದ ಬಳಿ ಸಂಜೆ ಕಾರೊಂದು ಮರಕ್ಕೆ ಡಿಕ್ಕಿ ಹೊಡೆದು ಮೂರು ಮಂದಿ ಸಾವನ್ನಪ್ಪಿ, ಒಬ್ಬರು ತೀವ್ರವಾಗಿ ಗಾಯಗೊಂಡಿದ್ದರು.

ಚಿತ್ರಾವಳಿ



'ಎಸ್‌.ಆರ್‌. ಉಮಾಶಂಕರ್–60' ಅಭಿನಂದನೆ, ಗೌರವ ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಎಸ್‌.ಆರ್‌. ಉಮಾಶಂಕರ್ – ತ್ರಿವೇಣಿ ದಂಪತಿಯನ್ನು ಸನ್ಮಾನಿಸಲಾಯಿತು. ಡಿಜಿಪಿ ಸಿಐಡಿ ಎಂ.ಎ. ಸಲೀಂ, ಬಿಬಿಎಂಪಿ ಆಡಳಿತಗಾರ ತುಷಾರ್ ಗಿರಿನಾಥ್, ಸಂಸದ ಡಾ.ಸಿ.ಎನ್‌. ಮಂಜುನಾಥ್, ಆದಿಚುಂಚನಗಿರಿಮಠದ ನಿರ್ಮಲಾನಂದನಾಥ ಸ್ವಾಮೀಜಿ, ಕೆಂಗೇರಿ ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ಶಾಸಕ ದರ್ಶನ್ ಪುಟ್ಟಣಯ್ಯ, ಸಾಹಿತಿ ಚಂದ್ರಶೇಖರ ಕಂಬಾರ, ಆದಾಯ ತೆರಿಗೆ ಇಲಾಖೆ ಮುಖ್ಯ ಆಯುಕ್ತ ಜಯರಾಮ್ ರಾಯಪುರ ಉಪಸ್ಥಿತರಿದ್ದರು



ವಿಶ್ವವಾಣಿ ಫೌಂಡೇಶನ್ ಮತ್ತು ಸಪ್ತಗಿರಿ ಆಸ್ಪತ್ರೆ ಹಾಗೂ ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಮೈಲಪ್ಪನಹಳ್ಳಿಯಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ವೈದ್ಯರು ವ್ಯಕ್ತಿಯೊಬ್ಬರಿಗೆ ರಕ್ತದೊತ್ತಡ ತಪಾಸಣೆ ಮಾಡಿದರು. ಶಾಸಕ ಎಸ್‌.ಆರ್‌.ವಿಶ್ವನಾಥ್, ಫೌಂಡೇಶನ್ ಕಾರ್ಯದರ್ಶಿ ವಾಣಿಶ್ರೀ ವಿಶ್ವನಾಥ್, ಬಿಜೆಪಿ ಮುಖಂಡರಾದ ಎಂ.ಗೋಪಾಲ್, ಎನ್‌.ಹರೀಶ್ ಇತರರು ಇದ್ದರು



ಕೆ.ಆರ್‌.ಪುರದ ಜಯಂತಿನಗರದಲ್ಲಿ ಜಲಮಂಡಳಿ ವತಿಯಿಂದ ಮನೆಮನೆಗೆ ಕಾವೇರಿ ನೀರು ಪೂರೈಸುವ ಕಾರ್ಯಕ್ರಮಕ್ಕೆ ಶಾಸಕ ಬೈರತಿ ಬಸವರಾಜ ಅವರು ಚಾಲನೆ ನೀಡಿದರು. ಮುಖಂಡ ಮುನೇಗೌಡ, ಹೊರಮಾವು ವೆಂಕಿ ಇದ್ದರು



ಗಾಂಧಿನಗರ ಪತ್ರಿಕಾ ವಿತರಕರ ಸಂಘದಿಂದ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿ ಉತ್ತೀರ್ಣರಾದ ಪತ್ರಿಕಾ ವಿತರಕರ ಮಕ್ಕಳಿಗೆ ಸನ್ಮಾನಿಸಲಾಯಿತು. ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಕೆ. ಶಂಭುಲಿಂಗ, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸಂಗಮ ಸುರೇಶ್, ಗಾಂಧಿನಗರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು

ಚಲಿಸುವ ರೈಲಿನಿಂದ ಬಿದ್ದು ಶಿಕ್ಷಕ ಸಾವು

ಪ್ರಜಾವಾಣಿ ವಾರ್ತೆ

ಗದಗ: ಮಂಗಳೂರು–ವಿಜಯಪುರ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಶಿಕ್ಷಕ ರಾಮಚಂದ್ರ ಢಗೆ (40) ಆಕಸ್ಮಿಕವಾಗಿ ಕೆಳಕ್ಕೆ ಬಿದ್ದು ತೀವ್ರವಾಗಿ ಗಾಯಗೊಂಡು, ಆಸ್ಪತ್ರೆಯಲ್ಲಿ ಶನಿವಾರ ಮೃತಪಟ್ಟಿದ್ದಾರೆ.

'ಬಾಗಲಕೋಟೆ ನವನಗರ ನಿವಾಸಿಯಾದ ರಾಮಚಂದ್ರ ಅವರು ಮೈಸೂರಿನ ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿದ್ದರು. ಇವರು ಮಂಗಳೂರು–ವಿಜಯಪುರ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಶನಿವಾರ ಸಂಜೆ 6.30ರ ಸುಮಾರಿಗೆ ಹೊಂಬಳ ರೈಲು ನಿಲ್ದಾಣದ ಬಳಿ ಆಕಸ್ಮಿಕವಾಗಿ ಕೆಳಕ್ಕೆ ಬಿದ್ದಿದ್ದಾರೆ. ಚಲಿಸುವ ರೈಲಿಗೆ ಕಾಲುಗಳು ಸಿಕ್ಕಿಹಾಕಿಕೊಂಡಿದ್ದರಿಂದ ಕಾಲುಗಳು ತುಂಡಾಗಿವೆ. ತೀವ್ರ ರಕ್ತಸ್ರಾವ ಉಂಟಾಗಿದ್ದ ಅವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಯಿತು. ಹೆಚ್ಚಿನ ಚಿಕಿತ್ಸೆಗಾಗಿ ಅಲ್ಲಿಂದ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ.

ಘಟನೆಗೆ ನಿಖರ ಕಾರಣ ತಿಳಿದು ಬಂದಿಲ್ಲ' ಎಂದು ಗದಗ ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ರಾಜ್ಯದಲ್ಲಿ ಶೇ 30ರಷ್ಟು ಪ್ರಕರಣ, ಬೆಂಗಳೂರಿನಲ್ಲಿ ಅತಿ ಹೆಚ್ಚು ದಾಖಲು

ಸೈಬರ್ ಅಪರಾಧ ಪತ್ತೆಗೆ ತರಬೇತಿ

• ಕೆ.ಎಸ್. ಸುನಿಲ್

ಬೆಂಗಳೂರು: ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ತನಿಖಾ ವ್ಯವಸ್ಥೆಯನ್ನು ಬಲಪಡಿಸಲು ಪೊಲೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ಪ್ರಾಸಿಕ್ಯೂಟರ್‌ಗಳಿಗೆ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರ (ಸಿಐಟಿಆರ್) ವತಿಯಿಂದ ತರಬೇತಿ ನೀಡಲಾಗುತ್ತಿದೆ.

ರಾಜ್ಯದಲ್ಲಿ ದಾಖಲಾಗುತ್ತಿರುವ ಒಟ್ಟು ಅಪರಾಧ ಪ್ರಕರಣಗಳಲ್ಲಿ ಶೇಕಡ 30ರಷ್ಟು ಸೈಬರ್ ವಂಚನೆಗೆ ಸಂಬಂಧಿಸಿದ್ದಾಗಿವೆ. ಬೆಂಗಳೂರಿನಲ್ಲಿ ಶೇಕಡ 40 ರಷ್ಟು ವರದಿಯಾಗಿದೆ. ವಂಚನೆಗೆ ನಾನಾ ಮಾರ್ಗ ಕಂಡುಕೊಂಡಿರುವ ಕಾರಣ ಆರೋಪಿಗಳ ಪತ್ತೆಯೇ ಪೊಲೀಸರಿಗೆ ಸವಾಲಾಗಿದೆ.

ಬ್ಯಾಂಕ್ ಖಾತೆ, ದತ್ತಾಂಶ ಕಳವು, ವಿವಿಧ ಇಲಾಖೆಗಳ ಖಾತೆಗಳು ಹ್ಯಾಕ್ ಆಗುವುದು ಸೇರಿದಂತೆ ನಾನಾ ರೀತಿಯ ಸೈಬರ್ ಅಪರಾಧಗಳು ವರದಿಯಾಗುತ್ತಿವೆ. ಹಳೆಯ ಮಾದರಿಯ ಡಕಾಯಿತಿ, ದರೋಡೆ ಹಾಗೂ ಇತರ ಭೌತಿಕ ಕಳ್ಳತನಗಳನ್ನು ಹಿಂದಿಕ್ಕಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚು ವರದಿ ಆಗುತ್ತಿವೆ.

'ಸೈಬರ್ ಅಪರಾಧ ಪ್ರಕರಣಗಳನ್ನು ಆರಂಭದಲ್ಲಿಯೇ ನಿಯಂತ್ರಿಸುವ ಉದ್ದೇಶದಿಂದ ಈವರೆಗೂ ಪೊಲೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ಪ್ರಾಸಿಕ್ಯೂಟರ್ ಸೇರಿ 45 ಸಾವಿರ ಜನರಿಗೆ ತರಬೇತಿ ನೀಡಲಾಗಿದೆ' ಎಂದು ಸಿಐಟಿಆರ್ ಅಧಿಕಾರಿಯೊಬ್ಬರು ತಿಳಿಸಿದರು.

'ಸೈಬರ್ ಅಪರಾಧ ಪ್ರಕರಣ ಪತ್ತೆ ಸಂಬಂಧ, ಪೊಲೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ಪ್ರಾಸಿಕ್ಯೂಟರ್‌ಗಳಿಗೆ ಮಾಹಿತಿ ತಂತ್ರಜ್ಞಾನ ಕೌಶಲ, ಸೈಬರ್ ಸುರಕ್ಷತೆ, ಸಾಮಾಜಿಕ ಜಾಲತಾಣಗಳ ಬಳಕೆ, ನಿರ್ವಹಣೆ ಕುರಿತು ತರಬೇತಿ ನೀಡುವ ಮೂಲಕ ಸಶಕ್ತಗೊಳಿಸಲಾಗುತ್ತಿದೆ. ಸೈಬರ್ ಅಪರಾಧಗಳ ತನಿಖೆ ಜಟಿಲವಾಗುತ್ತಿದೆ. ಇದಕ್ಕೆ ತಕ್ಕಂತೆ ತನಿಖಾಧಿಕಾರಿಗಳ ಸಾಮರ್ಥ್ಯ ಹೆಚ್ಚಿಸಬೇಕು. ಡಿಜಿಟಲ್ ಹಾಗೂ ಸೈಬರ್ ಅಪರಾಧಗಳ ತನಿಖಾಧಿಕಾರಿಗಳಿಗೆ ತಾಂತ್ರಿಕ ನೈಪುಣ್ಯ, ತಾಂತ್ರಿಕ ಪರಿಣತಿ, ವಿಧಿವಿಜ್ಞಾನಗಳ ಕುರಿತಾಗಿ ಅರಿವು ಅಗತ್ಯ' ಎಂದರು.

'ರಾಜ್ಯದಲ್ಲಿ ನಾಲ್ಕು ವರ್ಷಗಳಲ್ಲಿ 62 ಸಾವಿರ ಸೈಬರ್ ಅಪರಾಧ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನ ವೈಟ್‌ಫೀಲ್ಡ್ ವಿಭಾಗದಲ್ಲಿ ಹೆಚ್ಚು ದಾಖಲಾಗುತ್ತಿವೆ. ದಾಖಲಾಗುವ ಪ್ರಕರಣಗಳು ಇನ್ನೂ ಇವೆ. ಹಾಗಾಗಿ ಐ.ಟಿ, ಬಿ.ಟಿ ಕಂಪನಿಗಳಿಗೆ ಭೇಟಿ ನೀಡಿ, ಸೈಬರ್ ವಂಚನೆ ಕುರಿತು ಉದ್ಯೋಗಿಗಳಿಗೆ ಅರಿವು ಮೂಡಿಸಲಾಗುತ್ತಿದೆ' ಎಂದು ಸೈಬರ್ ಠಾಣೆ ಅಧಿಕಾರಿ ವಿವರಿಸಿದರು.

'60 ವರ್ಷ ದಾಟಿದವರು ಹೆಚ್ಚು ವಂಚನೆಗೆ ಒಳಗಾಗುತ್ತಿದ್ದಾರೆ. 2023ರಲ್ಲಿ ₹46.7 ಕೋಟಿ ಕಳೆದುಕೊಂಡರೆ, 2024ರಲ್ಲಿ ₹182.8 ಕೋಟಿಗೇರಿದೆ. ಸ್ವಯಂ ಸೇವಾ ಸಂಸ್ಥೆಯ ಸಹಕಾರದೊಂದಿಗೆ ಸೈಬರ್ ವಂಚನೆ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ' ಎಂದರು.

ನಾನಾ ಮಾದರಿ ಅಪರಾಧ: ಸಾಮಾಜಿಕ ಜಾಲತಾಣಗಳಲ್ಲಿ ನಿಂದನೆ, ಬೆದರಿಕೆ, ಕಸ್ಟಮ್ಸ್ ಅಪ್‌ಡೇಟ್, ಎಪಿಕೆ ಫೈಲ್ ಕಳುಹಿಸಿ ಒಟಿಪಿ ಪಡೆದು ವಂಚನೆ, ಎಟಿಎಂ, ಕ್ರೆಡಿಟ್ ಕಾರ್ಡ್, ಕಾರ್ಡ್ ಸ್ಕಿಮ್ಮಿಂಗ್, ಫಿಶಿಂಗ್, ಮ್ಯಾಟ್ರಿಮೋನಿಯಲ್, ನೌಕರಿ, ಒಎಲ್‌ಎಕ್ಸ್, ಹೂಡಿಕೆ, ಅರೆಕಾಲಿಕ ನೌಕರಿ, ರಿಮೋಟ್ ಆಕ್ಸೆಸ್, ಡೇಟಾ ಕಳ್ಳತನ, ಹ್ಯಾಕಿಂಗ್, ವೈರಸ್ ದಾಳಿ, ಅಶ್ಲೀಲ ವಿಡಿಯೊ ಅಪ್‌ಲೋಡ್, ಡೀಪ್ ಫೇಕ್, ಜಾಹೀರಾತು ವಂಚನೆ, ನಕಲಿ ಸಹಾಯವಾಣಿ, ಆನ್‌ಲೈನ್ ಹಣ ವರ್ಗಾವಣೆ, ಎಇಪಿಎಸ್, ಸಾಲದ ಆ್ಯಪ್, ಉಡುಗೊರೆ, ಸಾಮಾಜಿಕ ಜಾಲತಾಣದ ಕೇಸ್, ಕ್ರಿಪ್ಟೋ ಕರೆನ್ಸಿ, ಫೆಡೆಕ್ಸ್, ಡಿಜಿಟಲ್ ಅರೆಸ್ಟ್, ಸೇರಿ ಹಲವು ಮಾದರಿ ಸೈಬರ್ ಅಪರಾಧ ಪ್ರಕರಣಗಳು ವರದಿಯಾಗಿವೆ.

> ಪ್ರಪಂಚದಲ್ಲಿ ನಡೆಯುತ್ತಿರುವ ಸೈಬರ್ ಅಪರಾಧ ಪ್ರಕರಣಗಳ ಕುರಿತು ಪೊಲೀಸ್ ಸಿಬ್ಬಂದಿ ಹಾಗೂ ಪ್ರಾಸಿಕ್ಯೂಟರ್‌ಗಳಿಗೆ ಜ್ಞಾನ ಇರಬೇಕು. ಹಾಗಾಗಿ ತರಬೇತಿ ನೀಡಲಾಗುತ್ತಿದೆ
> **ಜಿ.ಪರಮೇಶ್ವರ,** ಗೃಹ ಸಚಿವ

ರಾಜ್ಯದಲ್ಲಿ ದಾಖಲಾದ ಸೈಬರ್ ಅಪರಾಧ

ವರ್ಷ	ಪ್ರಕರಣ	ಪತ್ತೆ
2021	8,636	2,934
2022	12,885	3,546
2023-22	224	5,541
2024-22	415	1,841
2025(ಮಾರ್ಚ್ ಅಂತ್ಯಕ್ಕೆ)	2,574	11

ಬೆಂಗಳೂರು ನಗರದಲ್ಲಿ ಸೈಬರ್ ಅಪರಾಧ

ವರ್ಷ	ಪ್ರಕರಣ	ಹಣ ಕಳೆದುಕೊಂಡಿದ್ದು (₹ ಕೋಟಿಗಳಲ್ಲಿ)	ಜಪ್ತಿ
2022	9,940	271.89	34.75
2023	17,632	673.92	68.17
2024	17,560	1998.48	142
2025(ಮಾರ್ಚ್‌ವರೆಗೆ)	2,838	358	76

ಸುದ್ದಿ 2 ನಿಮಿಷ

ಕೆಕೆ ಎಕ್ಸ್‌ಪ್ರೆಸ್‌ನಲ್ಲಿ ಹುಸಿ ಬಾಂಬ್ ಬೆದರಿಕೆ ಕರೆ; ವ್ಯಕ್ತಿ ಬಂಧನ

ವಾಡಿ (ಕಲಬುರಗಿ ಜಿಲ್ಲೆ): ದೆಹಲಿಯಿಂದ ಬೆಂಗಳೂರಿಗೆ ಸಂಚರಿಸುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ (ಕೆಕೆ) ರೈಲಿನಲ್ಲಿ ಬಾಂಬ್ ಇದೆ ಎಂದು ಬೆದರಿಕೆ ಹಾಕಿ ಕರೆ ಮಾಡಿದ್ದ ವ್ಯಕ್ತಿಯನ್ನು ವಾಡಿ ರೈಲ್ವೆ ಠಾಣೆಯ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಉತ್ತರ ಪ್ರದೇಶ ಮೂಲದ ದೀಪ್‌ಸಿಂಗ್ (33) ಬಂಧಿತ ಆರೋಪಿ. ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಚಿತ್ತಾಪುರದ ಜೈಲಿನಲ್ಲಿ ಇರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಕೆ ಎಕ್ಸ್‌ಪ್ರೆಸ್ ರೈಲಿನಲ್ಲಿ ಬಾಂಬ್ ಇಟ್ಟಿರುವ ಶಂಕೆ ಇದೆ ಎಂದು ರಾತ್ರಿ 10 ಸುಮಾರಿಗೆ ರೈಲ್ವೆ ಕಂಟ್ರೋಲ್ ರೂಂಗೆ ಕರೆ ಬಂದಿತ್ತು. ವಾಡಿ ನಿಲ್ದಾಣದಲ್ಲಿ ರೈಲು ನಿಲ್ಲಿಸಿದ ರೈಲ್ವೆ ಪೊಲೀಸರು, ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸ್ಥಳಕ್ಕಾಗಮಿಸಿ ಸುಮಾರು 4 ಗಂಟೆ ತಪಾಸಣೆ ಮಾಡಿದರು. ರೈಲಿನ 22 ಬೋಗಿಗಳಲ್ಲಿದ್ದ ಸಾವಿರಾರು ಪ್ರಯಾಣಿಕರನ್ನು ಕೆಳಗೆ ಇಳಿಸಿ, ಎಲ್ಲ ಬೋಗಿಗಳನ್ನು ತಪಾಸಣೆ ಮಾಡಿದರು. ಬಳಿಕ 'ಇದೊಂದು ಹುಸಿ ಬಾಂಬ್ ಕರೆ ಎಂಬುದು ಖಚಿತವಾಯಿತು' ಎಂದು ಮಾಹಿತಿ ನೀಡಿದರು.

ಕಂಟ್ರೋಲ್ ರೂಂಗೆ ಫೋನ್ ಕರೆ: 'ಇದೇ ರೈಲಿನಲ್ಲಿ ದೆಹಲಿಯಿಂದ ಗುಂತಕಲ್‌ಗೆ ಪ್ರಯಾಣಿಸುತ್ತಿದ್ದ ದೀಪ್‌ಸಿಂಗ್ ಎಂಬಾತ ತನ್ನ ತಂದೆಯ ಫೋನ್ ಸಂಖ್ಯೆಯಿಂದ ಕಂಟ್ರೋಲ್ ರೂಂಗೆ ಕರೆ ಮಾಡಿದ್ದಾನೆ. ಮುಂದೆ ಏನಾಗುತ್ತದೆ ಎಂಬ ಭಯದಿಂದ ಮೊಬೈಲ್ ಅನ್ನು ಫ್ಲೈಟ್ ಮೋಡ್‌ಗೆ ಹಾಕಿ ಏನೂ ಗೊತ್ತಿಲ್ಲದವನಂತೆ ಕುಳಿತಿದ್ದ. ಟ್ರೂ ಕಾಲರ್ ಆ್ಯಪ್‌ನಲ್ಲಿ ಫೋನ್ ಕರೆ ಮಾಡಿದ್ದ ವ್ಯಕ್ತಿಯ ಫೋಟೊ ಪತ್ತೆಯಾಗಿತ್ತು. ಫೋಟೊ ಆಧಾರದ ಮೇಲೆ ವಾಡಿಯಲ್ಲಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ವಾಡಿ ರೈಲ್ವೆ ಠಾಣೆಯ ಪಿಎಸ್‌ಐ ವೀರಭದ್ರಪ್ಪ ಎಚ್.ಎಸ್. 'ಪ್ರಜಾವಾಣಿ'ಗೆ ತಿಳಿಸಿದರು.



ಇದೇ 20ರಂದು ಲಕ್ಷ ಜನರಿಗೆ ಪಟ್ಟಾ ಖಾತೆ ವಿತರಣೆ: ಡಿಕೆಶಿ

ರಾಮನಗರ: ತಾಂಡಾ, ಹಟ್ಟಿ ಸೇರಿದಂತೆ ಕಂದಾಯ ಭೂಮಿಯಲ್ಲಿ ವಾಸವಾಗಿರುವ ಒಂದು ಲಕ್ಷ ಜನರಿಗೆ ಪಟ್ಟಾ ಖಾತೆ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ನಗರದಲ್ಲಿ ಭಾನುವಾರ ನಡೆದ ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಸಮಾರಂಭ 'ಯುವ ಪರ್ವ' ಸಮಾವೇಶದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಎರಡು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮೇ 20ರಂದು ವಿಜಯನಗರದಲ್ಲಿ ನಡೆಯುವ ಸಮಾವೇಶದಲ್ಲಿ ಪಟ್ಟಾ ಖಾತೆ ವಿತರಿಸಲಾಗುವುದು ಎಂದು ಹೇಳಿದರು.

ರಾಜ್ಯದ 22 ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ಬರೆದ 12,200 ಮಂದಿ

ಸಂಗೀತ, ನೃತ್ಯ ಪರೀಕ್ಷೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಆಯೋಜಿಸಿದ್ದ ಸಂಗೀತ, ನೃತ್ಯ ಹಾಗೂ ತಾಳವಾದ್ಯಗಳ ಲಿಖಿತ ಪರೀಕ್ಷೆಯು ಭಾನುವಾರ ರಾಜ್ಯದ 22 ಕೇಂದ್ರಗಳಲ್ಲಿ ಯಶಸ್ವಿಯಾಗಿ ನಡೆಯಿತು.

ಜೂನಿಯರ್, ಸೀನಿಯರ್, ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ಪರೀಕ್ಷೆಗಳನ್ನು 12 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಬರೆದರು.

ನಗರದ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 1,100 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾದರು. ನಗರದೊಂದಿಗೆ ನೆರೆಯ ಜಿಲ್ಲೆಗಳ ಅಭ್ಯರ್ಥಿಗಳೊಂದಿಗೆ ಪೋಷಕರೂ ಬಂದಿದ್ದರು.



ಭಾನುವಾರ ಆಯೋಜಿಸಿದ್ದ ಸಂಗೀತ, ನೃತ್ಯ ಹಾಗೂ ತಾಳವಾದ್ಯಗಳ ಲಿಖಿತ ಪರೀಕ್ಷೆ ಬರೆಯಲು ಬಂದ ಅಭ್ಯರ್ಥಿಗಳು ಪ್ರಜಾವಾಣಿ ಚಿತ್ರ

'ಕಳೆದ ವರ್ಷ 17 ಸಾವಿರ ಮಂದಿ ನೋಂದಾಯಿಸಿಕೊಂಡಿದ್ದರು. ಅವರಲ್ಲಿ 14 ಸಾವಿರ ಮಂದಿ ಪರೀಕ್ಷೆ ಬರೆದಿದ್ದರು. ಜೂನಿಯರ್ ಪರೀಕ್ಷೆ ಬರೆದವರು ಎರಡೂವರೆ ವರ್ಷದ ನಂತರ ಸೀನಿಯರ್ ಪರೀಕ್ಷೆಗೆ ಹಾಜರಾಗಬೇಕು. ಹೀಗಾಗಿ ಈ ವರ್ಷ 12,200 ಮಂದಿ ಬಂದಿದ್ದರು. ಮುಂದಿನ ವರ್ಷ ಪರೀಕ್ಷೆ ತೆಗೆದುಕೊಳ್ಳುವವರ ಸಂಖ್ಯೆ ಹೆಚ್ಚಾಗಲಿದೆ' ಎಂದು ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ ಹಾಗೂ ಪರೀಕ್ಷಾಂಗ ಕುಲಸಚಿವ ಪ್ರೊ.ಎಂ.ಜಿ. ಮಂಜುನಾಥ್ ತಿಳಿಸಿದರು.

'ಬೆಂಗಳೂರು ನಗರದಲ್ಲಿ 4, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ಉತ್ತರಕನ್ನಡದ ಶಿರಸಿ, ಸೇರಿ ವಿವಿಧ ನಗರದ ಕೇಂದ್ರಗಳಲ್ಲಿ ಪರೀಕ್ಷೆಗಳು ಯಶಸ್ವಿಯಾಗಿ ನಡೆದಿವೆ' ಎಂದು ಮಾಹಿತಿ ನೀಡಿದರು.

'ಕರ್ನಾಟಕ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯನ, ವಾದ್ಯ ಸಂಗೀತ, ತಾಳವಾದ್ಯದ ಜೂನಿಯರ್ ಪರೀಕ್ಷೆ ತೆಗೆದುಕೊಂಡಿದ್ದವರಿಗೆ ಬೆಳಿಗ್ಗೆ ಹಾಗೂ ಸೀನಿಯರ್, ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ಅಭ್ಯರ್ಥಿಗಳಿಗೆ ಬೆಳಿಗ್ಗೆ ಮತ್ತು ಮಧ್ಯಾಹ್ನದ ಅವಧಿಯಲ್ಲಿ ಪರೀಕ್ಷೆ ನಡೆದವು. ಸೀನಿಯರ್, ಜೂನಿಯರ್ ಪ್ರಾಯೋಗಿಕ ಪರೀಕ್ಷೆಯು ಬೆಂಗಳೂರು ನಗರದ ಕೇಂದ್ರಗಳಲ್ಲಿ ಮೇ 14ರಿಂದ 18ರವರೆಗೆ ಹಾಗೂ ಇತರ ಕೇಂದ್ರಗಳಲ್ಲಿ ಮೇ 17 ಹಾಗೂ 18ರಂದು ನಡೆಯಲಿದೆ' ಎಂದರು.

ಬೀದಿ ನಾಯಿಗಳ ದಾಳಿಗೆ ಮಹಿಳೆ ಸಾವು: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಗಜೇಂದ್ರಗಡ (ಗದಗ ಜಿಲ್ಲೆ): ಮನೆ ಹತ್ತಿರ ಭಾನುವಾರ ಮುಂಜಾನೆ ಹೂ ಕೀಳುತ್ತಿದ್ದ ಪಟ್ಟಣದ ಚೋಳಿನವರ ಓಣಿಯ ಪ್ರೇಮಾ ಶರಣಪ್ಪ ಚೋಳಿನ (53) ಬೀದಿ ನಾಯಿಗಳ ಸಾಮೂಹಿಕ ದಾಳಿಗೆ ಸಿಲುಕಿ ಮೃತಪಟ್ಟಿದ್ದಾರೆ.

ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ತಕ್ಷಣವೇ ಸ್ಥಳೀಯ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆ ತರಲಾಯಿತು. ಆದರೆ ಚಿಕಿತ್ಸೆಗೆ ಸ್ಪಂದಿಸದೇ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಗಜೇಂದ್ರಗಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜನರ ಆಕ್ರೋಶ: ಮಹಿಳೆಯ ಕುಟುಂಬಸ್ಥರ ಜತೆಗೆ ಸ್ಥಳೀಯರು ಸೇರಿಕೊಂಡು ಆಸ್ಪತ್ರೆ ಎದುರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಮೃತದೇಹ ಇರಿಸಿ ಪ್ರತಿಭಟನೆ ನಡೆಸಿದರು. ಪಟ್ಟಣದ ವಿವಿಧ ಓಣಿಗಳಲ್ಲಿ ಹೆಚ್ಚಿರುವ ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕಲು ಪುರಸಭೆ ವಿಫಲವಾಗಿದೆ ಎಂದು ಆಕ್ರೋಶ ಹೊರ ಹಾಕಿದರು. ಮೃತ ಮಹಿಳೆ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.



ಹೇಮಾ ಚೋಳಿನ

'ಬೀದಿನಾಯಿಗಳ ಹಾವಳಿಗೆ ಕ್ರಮ ಕೈಗೊಳ್ಳುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮೃತ ಮಹಿಳೆ ಕುಟುಂಬಕ್ಕೆ ಪುರಸಭೆಯಿಂದ ₹3 ಲಕ್ಷ ಪರಿಹಾರ ಘೋಷಿಸಲಾಗಿದ್ದು, ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ₹2 ಲಕ್ಷ ಪರಿಹಾರ ಕೊಡಿಸುವುದಾಗಿ ಶಾಸಕರು ತಿಳಿಸಿದ್ದಾರೆ' ಎಂದು ಪುರಸಭೆ ಅಧ್ಯಕ್ಷ ಸುಭಾಸ ಮ್ಯಾಗೇರಿ ತಿಳಿಸಿದರು.

'ಬೀದಿನಾಯಿಗಳ ಹಾವಳಿ ತಡೆಯಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಅವರು ಪ್ರತಿಕ್ರಿಯಿಸಿದ್ದಾರೆ.

ಬೀದರ್: ಗುಡುಗು ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಬೀದರ್: ನಗರ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಭಾನುವಾರ ಸಂಜೆ ಗುಡುಗು ಸಹಿತ ಬಿರುಸಿನ ಮಳೆಯಾಗಿದೆ.

ದಿನವಿಡೀ ಪ್ರಖರವಾದ ಬಿಸಿಲು ಇತ್ತು. ಸಂಜೆ ದಟ್ಟ ಕಾರ್ಮೋಡ ಕವಿದು, ಬಿರುಗಾಳಿಯೊಂದಿಗೆ ಗುಡುಗು ಸಹಿತ ಬಿರುಸಿನ ಮಳೆಯಾಗಿದೆ. ಬಿರುಗಾಳಿ ಮಳೆಗೆ ನಗರದ ಹಳ್ಳದಕೇರಿ ಸಮೀಪ ರಿಂಗ್‌ರೋಡ್‌ನಲ್ಲಿ ಬುಡಸಮೇತ ಮರವೊಂದು ರಸ್ತೆಗೆ ಅಡ್ಡಲಾಗಿ ಬಿದ್ದು, ವಾಹನ ಸಂಚಾರಕ್ಕೆ ತೊಡಕಾಯಿತು. ಬಿದಿರಿನ ಹೋಟೆಲ್‌ವೊಂದು ಸಂಪೂರ್ಣ ನೆಲಕಚ್ಚಿದೆ.

ಕಲಬುರಗಿ ಜಿಲ್ಲೆಯ ಚಿಂಚೋಳಿ ಹಾಗೂ ಆಳಂದ ತಾಲ್ಲೂಕಿನಲ್ಲಿ ಬಿರುಸಿನ ಮಳೆ ಸುರಿದಿದೆ.

ಸಿಡಿಲಿಗೆ ಇಬ್ಬರು ಮಹಿಳೆಯರ ಸಾವು

ಸವದತ್ತಿ (ಬೆಳಗಾವಿ ಜಿಲ್ಲೆ): ಹಿಟ್ಟಣಗಿ ಗ್ರಾಮದಲ್ಲಿ ಭಾನುವಾರ ಸಿಡಿಲಿನ ಅಬ್ಬರಕ್ಕೆ ಒಂದೇ ಕುಟುಂಬದ ಗಂಗವ್ವ ಶೇಖಪ್ಪ ಜಿರಗವಾಡ (55), ಕಲಾವತಿ ವಿರೂಪಾಕ್ಷಿ ಜಿರಗವಾಡ (42) ಮೃತಪಟ್ಟಿದ್ದಾರೆ. ಸ್ಥಳ ಪರಿಶೀಲಿಸಿ ಪರಿಹಾರ ನೀಡಲಾಗುವುದು ಎಂದು ತಹಶೀಲ್ದಾರ್ ಎಂ.ಎನ್. ಹೆಗ್ಗನ್ನವರ ತಿಳಿಸಿದ್ದಾರೆ.

'ಭೋವಿ ಉಪ ಜಾತಿಯಲ್ಲ, ಜಾತಿಯೆಂದೇ ನಮೂದಿಸಿ'

ಬೆಂಗಳೂರು: ಒಳಮೀಸಲಾತಿಗಾಗಿ ನಡೆಯುತ್ತಿರುವ ಸಮೀಕ್ಷೆಯಲ್ಲಿ ಹಲವರು ಜಾತಿ ಕಾಲಂನಲ್ಲಿ ಆದಿ–ಕರ್ನಾಟಕ, ಆದಿ–ಆಂಧ್ರ, ಆದಿ–ದ್ರಾವಿಡ ಎಂದು ನಮೂದಿಸುತ್ತಿದ್ದು, ಉಪ ಜಾತಿ ಕಲಂನಲ್ಲಿ ಭೋವಿ ಎಂದು ನಮೂದಿಸುತ್ತಿದ್ದಾರೆ. ಇದರಿಂದ ಭೋವಿ/ವಡ್ಡರ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂದು ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ. ಸೀತಾರಾಮು ದೂರಿದ್ದಾರೆ.

ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ 101 ಜಾತಿಗಳಲ್ಲಿ ಭೋವಿ ಕೂಡಾ ಒಂದಾಗಿದೆ. ಆದರೆ, ಭೋವಿಯನ್ನು ಉಪ ಜಾತಿಯಾಗಿ ದಾಖಲು ಮಾಡಬೇಕೆಂದು ಸಮೀಕ್ಷೆದಾರರೇ ಹಲವು ಕಡೆ ಹೇಳುತ್ತಿದ್ದು, ಅಂಥ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಎಲ್ಲ ದತ್ತಾಂಶ ಪರಿಶೀಲಿಸಿ ಉಪ ಜಾತಿಯ ಕಾಲಂನಲ್ಲಿ ಭೋವಿ ಎಂದು ಇರುವುದನ್ನು ಸರಿಪಡಿಸಬೇಕು ಎಂದರು.

ಅಧಿಕಾರಿಗಳ ಎಡವಟ್ಟಿನಿಂದ ಬಹಳ ಕಡೆಗಳಲ್ಲಿ ಪಡಿತರ ಚೀಟಿಯಲ್ಲಿ ಪರಿಶಿಷ್ಟ ಜಾತಿಯ ಬದಲು ಪರಿಶಿಷ್ಟ ಪಂಗಡ ಎಂದು ನಮೂದಾಗುತ್ತಿದೆ. ಆಹಾರ ಸರಬರಾಜು ಇಲಾಖೆಯ ಅಧಿಕಾರಿಗಳು ಮಾಡಿದ ತಪ್ಪಿನಿಂದಾಗಿ ಇವರು ಸಮೀಕ್ಷೆಯಲ್ಲಿ ಭಾಗವಹಿಸದಂತಾಗಿದೆ. ಪಡಿತರ ಚೀಟಿಯಲ್ಲಿ ಇಂತಹ ಲೋಪ ಇದ್ದಾಗ ಅವರು ಮತದಾರರ ಚೀಟಿ ಅಥವಾ ಆಧಾರ್ ಕಾರ್ಡ್ ಅನ್ನು ಇಲ್ಲವೇ ಜಾತಿ ಪ್ರಮಾಣಪತ್ರವನ್ನು ಪರಿಗಣಿಸಿ ಗಣತಿ ಮಾಡಬೇಕು. ಸರ್ಕಾರ ಎಲ್ಲ ದೋಷಗಳನ್ನು ಸರಿಪಡಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಹುತಾತ್ಮ ಯೋಧನಿಗೆ ಕಣ್ಣೀರ ವಿದಾಯ

ಕಲ್ಲಿ ತಾಂಡಾದಲ್ಲಿ ಸಾವಿರಾರು ಜನರಿಂದ ಅಂತಿಮ ನಮನ

• ಪಿ.ಎಸ್.ರಾಜೇಶ್

ಕಲ್ಲಿ ತಾಂಡಾ (ಆಂಧ್ರಪ್ರದೇಶ): ಪಾಕಿಸ್ತಾನದ ಜೊತೆ ಗುಂಡಿನ ಕಾಳಗದಲ್ಲಿ ವೀರಮರಣ ಹೊಂದಿದ ಹುತಾತ್ಮ ಯೋಧ ಎಂ.ಮುರಳಿ ನಾಯ್ಕ್(25) ಅಂತ್ಯ ಸಂಸ್ಕಾರ ಭಾನುವಾರ ಸ್ವಗ್ರಾಮ ಆಂಧ್ರಪ್ರದೇಶದ ಸತ್ಯಸಾಯಿ ಜಿಲ್ಲೆಯ ಕಲ್ಲಿ ತಾಂಡಾದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಿತು.

ಮುರಳಿ ಪೋಷಕರು, ಸಂಬಂಧಿಕರು ಮತ್ತು ಸಾವಿರಾರು ಜನರು ಭಾರವಾದ ಹೃದಯದೊಂದಿಗೆ ಹುತಾತ್ಮ ಯೋಧನಿಗೆ ಕಣ್ಣೀರ ವಿದಾಯ ಹೇಳಿದರು. 'ಮುರಳಿ ನಾಯ್ಕ್ ಅಮರ್ ರಹೆ' ಘೋಷಣೆಗಳು ಮುಗಿಲು ಮುಟ್ಟಿದವು.

ಪಾರ್ಥಿವ ಶರೀರದ ಮೇಲೆ ಹೊದಿಸಿದ್ದ ರಾಷ್ಟ್ರಧ್ವಜವನ್ನು ಸೇನಾ ಅಧಿಕಾರಿಗಳು ಮುರಳಿ ಪೋಷಕರಾದ ಶ್ರೀರಾಮ ನಾಯ್ಕ್ ಮತ್ತು ಜ್ಯೋತಿಬಾಯಿ ಅವರಿಗೆ ಹಸ್ತಾಂತರಿಸಿದರು.ಸೇನಾ ಪಡೆ ಹಾಗೂ ಪೊಲೀಸ್ ಸಿಬ್ಬಂದಿ ಗಾಳಿಯಲ್ಲಿ ಗುಂಡು ಹಾರಿಸಿ ಅಂತಿಮ ಗೌರವ ಸಲ್ಲಿಸಿದರು.



ಪಾರ್ಥಿವ ಶರೀರದ ಮುಂದೆ ಕುಟುಂಬಸ್ಥರ ಆಕ್ರಂದನ

ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್, ಸಚಿವರಾದ ಸುನಿತಮ್ಮ, ನಾರಾ ಲೋಕೇಶ್ ಅಂತಿಮ ನಮನ ಸಲ್ಲಿಸಿ, ಪೋಷಕರನ್ನು ಸಂತೈಸಿದರು.

ಶ್ರೀ ಸತ್ಯಸಾಯಿ ಜಿಲ್ಲಾಧಿಕಾರಿ ಚೇತನ್ ಟಿ.ಎಸ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿ.ರತ್ನಾ ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಇದಕ್ಕೂ ಮೊದಲು ಪಾರ್ಥಿವ ಶರೀರದ ಮೆರವಣಿಗೆ ಮತ್ತು ಅಂತ್ಯ ಕ್ರಿಯೆಯಲ್ಲಿ ಆಂಧ್ರಪ್ರದೇಶ ಮತ್ತು ಕರ್ನಾಟಕದಿಂದ ಬಂದಿದ್ದ ಸಾವಿರಾರು ಜನರು ಪಾಲ್ಗೊಂಡಿದ್ದರು.

'ಪೇಜಾವರಶ್ರೀ ಅಜ್ಞಾನದ ಮಾತು'

ಬೆಂಗಳೂರು: 'ಮುಜರಾಯಿ ದೇವಸ್ಥಾನಗಳನ್ನು ಸರ್ಕಾರದಿಂದ ಮುಕ್ತ ಮಾಡಬೇಕು ಎಂದು ಪೇಜಾವರ ಸ್ವಾಮೀಜಿ ಅಜ್ಞಾನದಿಂದ, ಯಾವುದೋ ಆವೇಶದಲ್ಲಿ ಆಗಾಗ ಹೇಳುತ್ತಿದ್ದಾರೆ. ಮುಜರಾಯಿ ದೇವಸ್ಥಾನಗಳನ್ನು ಖಾಸಗೀಕರಣ ಮಾಡಬಾರದು' ಎಂದು ಅಖಿಲ ಕರ್ನಾಟಕ ಅರ್ಚಕರ ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಅಧ್ಯಕ್ಷ ಕೆ.ಇ. ರಾಧಾಕೃಷ್ಣ ತಿಳಿಸಿದರು.

'ರಾಜಾಧಿರಾಜರ ಕಾಲದಿಂದ ಸರ್ಕಾರಿ ಆಡಳಿತದ ಸುಪರ್ದಿಯಲ್ಲೇ ಇರುವ ದೇವಸ್ಥಾನಗಳನ್ನು ಖಾಸಗಿಯವರ ಕೈಗೆ ನೀಡುವುದು ಸರಿಯಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಹಿಂದೆ ಆದಿಚುಂಚನಗಿರಿ ಮಠದವರು 'ಸಿ' ಶ್ರೇಣಿಯ ದೇವಸ್ಥಾನಗಳನ್ನು ಕೇಳಿದ್ದರು. ನಾವು ವಿರೋಧಿಸಿದ್ದೆವು' ಎಂದು ಒಕ್ಕೂಟದ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ಅವರು ತಿಳಿಸಿದರು.

ಜೋಶಿ ವಿರುದ್ಧ ಹೋರಾಟಕ್ಕೆ ಮಹಾದೇವ ಬೆಂಬಲ

ಪ್ರಜಾವಾಣಿ ವಾರ್ತೆ

ಮೈಸೂರು: ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಹೇಶ ಜೋಶಿ ವಿರುದ್ಧ 'ಕನ್ನಡ ನಾಡು ನುಡಿ ಜಾಗೃತಿ ಸಮಿತಿ'ಯ ನೇತೃತ್ವದಲ್ಲಿ ಮೇ 17ರಂದು ಮಂಡ್ಯದಲ್ಲಿ ಹಮ್ಮಿಕೊಂಡಿರುವ 'ಮೈಸೂರು ವಿಭಾಗಮಟ್ಟದ ಜನಾಂದೋಲನ'ಕ್ಕೆ ಸಾಹಿತಿ ದೇವನೂರ ಮಹಾದೇವ ಬೆಂಬಲ ಸೂಚಿಸಿದ್ದಾರೆ.

ಸಮಿತಿಯ ನಿಯೋಗವು ಇಲ್ಲಿನ ಅವರ ನಿವಾಸದಲ್ಲಿ ಶನಿವಾರ ಭೇಟಿಯಾಗಿ ಮಾತುಕತೆ ನಡೆಸಿತು.

'ಜೋಶಿಯವರು ದುರಾಡಳಿತ ಹಾಗೂ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ. ಇದೆಲ್ಲ ಕಾರಣದಿಂದ ಅವರ ವಿರುದ್ಧ ಹೋರಾಟ ನಡೆಸಲಾಗುತ್ತಿದೆ' ಎಂದು ಸಮಿತಿಯವರು ತಿಳಿಸಿದರು. 'ಇದೆಲ್ಲವನ್ನೂ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಸೂಕ್ತ ಕಾನೂನು ಕ್ರಮ ಆಗುವಂತೆ ಮಾಡಲು ಸಹಕರಿಸಬೇಕು' ಎಂದು ಕೋರಿದರು.

'ಇದಕ್ಕೆ ಪ್ರತಿಕ್ರಿಯಿಸಿದ ಮಹಾದೇವ, ಈ ಎಲ್ಲಾ ಬೆಳವಣಿಗೆಗಳು ಮಾಧ್ಯಮದ ಮೂಲಕ ಗೊತ್ತಾಗಿದೆ. ನಿಮ್ಮ ಹೋರಾಟಕ್ಕೆ ನನ್ನ ನೈತಿಕ ಬೆಂಬಲವಿದೆ. ನಾನೂ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ಕ್ರಮ ಜರುಗಿಸುವಂತೆ ಒತ್ತಾಯಿಸುತ್ತೇನೆ ಎಂದು ತಿಳಿಸಿದ್ದಾರೆ' ಎಂದು ಸಮಿತಿಯವರು ಮಾಹಿತಿ ನೀಡಿದ್ದಾರೆ.

ಇದಕ್ಕೂ ಮುನ್ನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ನಗರದ ಸಾಹಿತಿಗಳು, ಪ್ರಾಧ್ಯಾಪಕರು, ಹೋರಾಟಗಾರರು, ಸಂಘ– ಸಂಸ್ಥೆಗಳ ಪ್ರಮುಖರು, ಮಹೇಶ್ ಜೋಶಿ ವಿರುದ್ಧದ ಹೋರಾಟ ಬೆಂಬಲಿಸಿದರು. ಆರೋಪಗಳ ಕುರಿತು ಸಮಗ್ರ ತನಿಖೆಗೆ ಒತ್ತಾಯಿಸಲು ಮುಖ್ಯಮಂತ್ರಿ ಬಳಿಗೆ ನಿಯೋಗ ತೆರಳಬೇಕೆಂದು ನಿರ್ಣಯಿಸಲಾಯಿತು.

ಉಚಿತ ತಪಾಸಣೆ, ಶಸ್ತ್ರಚಿಕಿತ್ಸೆಯ 'ಆಶಾಕಿರಣ' ಯೋಜನೆ ವಿಸ್ತರಣೆ

ದೃಷ್ಟಿ ಪರೀಕ್ಷೆಗೆ ಶಾಶ್ವತ ಕೇಂದ್ರ

• ಎಂ. ಮಹೇಶ್

ಮೈಸೂರು: ಕಣ್ಣಿನ ಸಮಗ್ರ ತಪಾಸಣೆ, ಶಸ್ತ್ರಚಿಕಿತ್ಸೆ ಹಾಗೂ ಕನ್ನಡಕಗಳ ವಿತರಣೆ ಸೇವೆಯನ್ನು ಉಚಿತವಾಗಿ ಒದಗಿಸುವ 'ಆಶಾಕಿರಣ' ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲಾಗಿದ್ದು, ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲೂ 'ಶಾಶ್ವತ ದೃಷ್ಟಿ ಪರೀಕ್ಷಾ ಕೇಂದ್ರ'ಗಳನ್ನು ಸ್ಥಾಪಿಸಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಯೋಜನೆ ಅನುಷ್ಠಾನ ಮಾಡಲಾಗುತ್ತಿದ್ದು, ದೃಷ್ಟಿ ದೋಷ ನಿವಾರಣೆಯ ಪ್ರಮುಖ ಆಶಯ ಹೊಂದಲಾಗಿದೆ.

ಯೋಜನೆಯನ್ನು ಪ್ರಾಯೋಗಿಕವಾಗಿ ಮೊದಲ ಹಂತದಲ್ಲಿ ಚಿಕ್ಕಬಳ್ಳಾಪುರ, ಕಲಬುರಗಿ, ಹಾವೇರಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗಿತ್ತು. ಅಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದರಿಂದ ಇತರ ಜಿಲ್ಲೆಗಳಲ್ಲೂ ಅನುಷ್ಠಾನಗೊಳಿಸಲಾಗುತ್ತಿದೆ.

ಮೊದಲಿಗೆ, ಹಂತ–ಹಂತವಾಗಿ ಇತರ ಜಿಲ್ಲೆಗಳಿಗೆ ವಿಸ್ತರಿಸುವ ಉದ್ದೇಶ ಹೊಂದಲಾಗಿತ್ತು. ಪ್ರತಿ ವರ್ಷ ನಾಲ್ಕು ಜಿಲ್ಲೆಗಳ ಸೇರ್ಪಡೆಗೆ ಯೋಜಿಸಲಾಗಿತ್ತು. ಹೀಗೆ ನಡೆದರೆ, ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕಾರ್ಯಕ್ರಮ ಅನುಷ್ಠಾನಗೊಳಿಸಲು 7 ವರ್ಷಗಳು ಬೇಕಾಗುತ್ತವೆ. ಆದ್ದರಿಂದ, ಎಲ್ಲ ಕಡೆಯೂ ಸೇವೆ ಲಭ್ಯವಾಗವಂತೆ ಮಾಡಬೇಕೆಂದು ಏ.24ರಂದು ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯಿಸಲಾಗಿತ್ತು.



> ಜನರಿಗೆ ನೇತ್ರ ಆರೈಕೆ ಸೇವೆಯು ಮನೆ ಬಾಗಿಲಿನಲ್ಲಿ ಸಿಗಬೇಕೆಂಬ ಆಶಯದಿಂದ 'ಆಶಾಕಿರಣ' ಯೋಜನೆ ಜಾರಿಗೊಳಿಸಲಾಗಿದೆ. ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ
> **ದಿನೇಶ್ ಗುಂಡೂರಾವ್** ಆರೋಗ್ಯ ಸಚಿವ

ಅದರಂತೆ, ಎಲ್ಲ ಜಿಲ್ಲೆಗಳಿಗೂ ಅನುದಾನ ಕಲ್ಪಿಸಲಾಗುತ್ತಿದೆ. ಒಟ್ಟು ₹45 ಕೋಟಿ ವೆಚ್ಚವಾಗಲಿದ್ದು, ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮನೆಗಳಿಗೆ ತೆರಳಿ: ಆಶಾ ಕಾರ್ಯಕರ್ತೆಯರು ಅಥವಾ ಆರೋಗ್ಯ ಇಲಾಖೆಯ ಸಿಬ್ಬಂದಿಯ ಮೂಲಕ ಮನೆಗಳಿಗೆ ತೆರಳಿ ಪ್ರಾಥಮಿಕ ಪರೀಕ್ಷೆ ನಡೆಸಲಾಗುತ್ತದೆ. ದ್ವಿತೀಯ ಹಂತದ ಪರೀಕ್ಷೆ ಹಾಗೂ ಶಸ್ತ್ರಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಸುವುದು ಯೋಜನೆಯ ಸ್ವರೂಪವಾಗಿದೆ. ನಿಯಮಿತವಾಗಿ ತಪಾಸಣೆಗೆ ಒಳಗಾಗಲೂ ಅವಕಾಶವಿದೆ.

ವಯಸ್ಸಾಗುತ್ತಿದ್ದಂತೆಯೇ ವಿವಿಧ ಕಾರಣಗಳಿಂದಾಗಿ ದೃಷ್ಟಿದೋಷದ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಇದನ್ನು ನಿರ್ಲಕ್ಷಿಸಿದರೆ ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಇದನ್ನು ತಡೆಯಲು ಹಾಗೂ ತಪಾಸಣೆ, ಚಿಕಿತ್ಸೆಯ ಸೌಲಭ್ಯ ಸುಲಭವಾಗಿ ಲಭ್ಯವಾಗಲೆಂದು ಆಶಾಕಿರಣ ಯೋಜನೆ ಜಾರಿಗೊಳಿಸಲಾಗಿದೆ. ಅಗತ್ಯಬಿದ್ದರೆ ಕನ್ನಡಕಗಳು ಅಥವಾ ಕಾಂಟಾಕ್ಟ್ ಲೆನ್ಸ್‌ಗಳನ್ನು ಉಚಿತವಾಗಿ ಒದಗಿಸಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ಒಂದು ಕೋಟಿಗೂ ಹೆಚ್ಚಿನ ತಪಾಸಣೆ ನಡೆಸಲು ಉದ್ದೇಶಿಸಲಾಗಿದೆ.

ಅನುದಾನ: 'ಆಶಾಕಿರಣ ಯೋಜನೆಯಡಿ ಈಗ ಎಲ್ಲ ತಾಲ್ಲೂಕು ಕೇಂದ್ರಗಳ ಸಾರ್ವಜನಿಕ ಆಸ್ಪತ್ರೆಗಳಲ್ಲೂ 'ಶಾಶ್ವತ ದೃಷ್ಟಿ ಪರೀಕ್ಷಾ ಕೇಂದ್ರ'ಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 17 ಕೇಂದ್ರಗಳಿದ್ದು, ಅಲ್ಲಿ ನೇತ್ರ ತಪಾಸಣೆ ಮೊದಲಾದ ಸೇವೆ ಒದಗಿಸಲಾಗುತ್ತಿದೆ. ಪ್ರತಿ ಕೇಂದ್ರಗಳಿಗೆ ಸಲಕರಣೆಗಳಿಗೆಂದೇ ಸರಾಸರಿ ₹1.50 ಲಕ್ಷ ಅನುದಾನ ನೀಡಲಾಗಿದೆ. ಎಚ್.ಡಿ. ಕೋಟೆಗೆ ವಿಶೇಷವಾಗಿ ₹9 ಲಕ್ಷ ಬಿಡುಗಡೆ ಮಾಡಲಾಗಿದೆ' ಎಂದು ಡಿಎಚ್‌ಒ ಡಾ.ಪಿ.ಸಿ. ಕುಮಾರಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ದೃಷ್ಟಿ ಪರೀಕ್ಷಾ ಕೇಂದ್ರಗಳಲ್ಲಿ ಶಾಲಾ ಮಕ್ಕಳನ್ನೂ ತಪಾಸಣೆ ಮಾಡಿ, ಉಚಿತವಾಗಿ ಕನ್ನಡಗಳನ್ನು ವಿತರಿಸಲಾಗುವುದು. ಅಗತ್ಯವಿರುವವರು ಯೋಜನೆಯ ಪ್ರಯೋಜನವನ್ನು ಉಚಿತವಾಗಿ ಪಡೆದುಕೊಳ್ಳಬಹುದು' ಎನ್ನುತ್ತಾರೆ ಅವರು.



ವೈಭವ್ ಫೆಲೋಷಿಪ್

ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ (ಡಿಎಸ್‌ಟಿ) ಉಪಕ್ರಮವಾಗಿದೆ. ಇದು ಪ್ರಸ್ತುತ ನಡೆಯುತ್ತಿರುವ ಸಂಶೋಧನಾ ಯೋಜನೆಗಳ ಸಹಯೋಗಕ್ಕಾಗಿ ಭಾರತದ ಸಾಗರೋತ್ತರದ ವಿಜ್ಞಾನಿಗಳನ್ನು ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ಸರ್ಕಾರಿ-ಅನುದಾನಿತ ಸಂಶೋಧನಾ ಸ್ಥಳಗಳೊಂದಿಗೆ ಸಂಪರ್ಕಿಸುವ ಗುರಿಯನ್ನು ಹೊಂದಿದೆ.

ಅರ್ಹತೆ: ಪಿಎಚ್‌.ಡಿ/ ಎಂ.ಡಿ/ ಎಂಎಸ್/ ಎಂ.ಟೆಕ್ ಪದವೀಧರರಿಗೆ ಇದು ಲಭ್ಯವಿದೆ. ಅಭ್ಯರ್ಥಿಯು ಅನಿವಾಸಿ ಭಾರತೀಯ (ಎನ್‌ಆರ್‌ಐ), ಸಾಗರೋತ್ತರ ಅಥವಾ ಭಾರತೀಯ ಮೂಲದ ವ್ಯಕ್ತಿ (ಪಿಐಒ) ಆಗಿರಬೇಕು. ಅವರು ಸಕ್ರಿಯ ಸಂಶೋಧನೆಯಲ್ಲಿ ತೊಡಗಿಕೊಂಡಿರಬೇಕು ಮತ್ತು ವಿದೇಶಿ ಸಂಸ್ಥೆ/ ವಿಶ್ವವಿದ್ಯಾಲಯದಲ್ಲಿ ಕನಿಷ್ಠ 5 ವರ್ಷಗಳ ಕೆಲಸದ ಅನುಭವವನ್ನು ಹೊಂದಿರಬೇಕು.

ಆರ್ಥಿಕ ಸಹಾಯ: ₹4,00,000 ವರೆಗೆ ಮತ್ತು ಇತರ ಪ್ರಯೋಜನಗಳು

ಅರ್ಜಿ ಸಲ್ಲಿಸಲು ಕೊನೆ ದಿನ: 30-05-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/pjvi/VAIF

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಸಮಾಜ ವಿಜ್ಞಾನ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

27) ಕೋಲ್ಕತ್ತಾ ನಗರವಾಗಿ ಬೆಳೆಯಲು ಕಾರಣವಾದುದ್ದು ಯಾವುದು?

ಉತ್ತರ:– ಬ್ರಿಟಿಷರು 1690ರ ದಶಕದಲ್ಲಿ ಬಂಗಾಳದ ರಾಜ್ಯಪಾಲನಿಂದ ಹೂಗ್ಲಿ ನದಿ ದಂಡೆಯ ಮೇಲೆ ಸುತನುತಿ, ಕಲ್ಕತ್ತ ಮತ್ತು **ಗೋವಿಂದಪುರ** ಎಂಬ ಮೂರು ಹಳ್ಳಿಗಳನ್ನು ಖರೀದಿಸಿ ಫೋರ್ಟ್ ವಿಲಿಯಂ ಎಂಬ ಕೋಟೆಯನ್ನು ಕಟ್ಟಿದರು. ಇದರ ಸುತ್ತ ಕಲ್ಕತ್ತಾ ನಗರ ಬೆಳೆಯಿತು.

28) ಇತರೇ ಯುರೋಪಿಯನ್ ಈಸ್ಟ್ ಇಂಡಿಯಾ ಕಂಪನಿಗೂ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಗೂ ಇರುವ ವ್ಯತ್ಯಾಸವೇನು?

ಉತ್ತರ:– ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಸರ್ಕಾರಿ ಒಡೆತನದ ಕಂಪನಿಯಾಗಿ ಆರಂಭವಾಯಿತು. ಆದರೆ ಉಳಿದವು ಖಾಸಗಿ ಕಂಪನಿಗಳಾಗಿದ್ದವು.

29) ಯಾವ ವರ್ಷ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.

ಉತ್ತರ:– 1664

30) ಫ್ರೆಂಚರ ವ್ಯಾಪಾರಿ ಕೇಂದ್ರ್ರಗಳನ್ನು ಹೆಸರಿಸಿ.

ಉತ್ತರ:– ಸೂರತ್, ಮಚಲಿಪಟ್ಟಣ, ಚಂದ್ರನಗರ, ಮಾಹೆ, ಕಾರೈಕಲ್ಲು, ಕಾಸಿಂ ಬಜಾರ್, ಬಾಲಸೂರ್

31) ಪಾಂಡಿಚೇರಿ ಬಗ್ಗೆ ಬರೆಯಿರಿ.

ಉತ್ತರ:– ಫ್ರೆಂಚರು 1674ರಲ್ಲಿ ವಾಲಿಕೊಂಡಪುರಂನ ಸ್ಥಳೀಯ ಮುಸ್ಲಿಂ ಅಧಿಕಾರಿಯಿಂದ ಪಡೆದರು. ಕ್ರಮೇಣ ಇದನ್ನೆ ದೊಡ್ಡ ವ್ಯಾಪಾರ ಕೇಂದ್ರವಾಗಿ ಮಾರ್ಪಡಿಸಿ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು.

ಅದೇ ಪುದುಚೇರಿ ಅಥವಾ ಪಾಂಡಿಚೇರಿ. ಇದು ಫ್ರೆಂಚರು ಭಾರತ ತೊರೆದು ಹೋಗುವವರೆಗೆ ಅವರ ರಾಜಧಾನಿಯಾಗಿತ್ತು.

32) ಯಾವ ವರ್ಷ ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದನು?

ಉತ್ತರ:– 1746

33) 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಸ್ಥಾಪಿಸಿದನು ಯಾರು?

ಉತ್ತರ:– 'ಅಸಫ್ ಜಾ'

34) ಯಾವ ಒಪ್ಪಂದದೊಂದಿಗೆ ಮೊದಲ ಕಾರ್ನಾಟಿಕ್ ಯುದ್ಧ ಅಂತ್ಯವಾಯಿತು?

ಉತ್ತರ:–ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ಆದ 'ಏಕ್ಸ್–ಲಾ–ಚಾಪೆಲ್' ಒಪ್ಪಂದದೊಂದಿಗೆ ಮುಕ್ತಾಯವಾಯಿತು

35) **ಮೊದಲ ಕಾರ್ನಾಟಿಕ್ ಯುದ್ಧದ ಬಗ್ಗೆ ಬರೆಯಿರಿ**

ಉತ್ತರ:– ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ಬ್ರಿಟಿಷರಿಂದ ಮದ್ರಾಸನ್ನು ವಶಪಡಿಸಿಕೊಂಡನು. ಅಸಹಾಯಕರಾದ ಬ್ರಿಟಿಷರು ಕಾರ್ನಾಟಿಕ್ ನವಾಬನಾದ ಅನ್ವರುದ್ದೀನನಲ್ಲಿ ಮೊರೆ ಇಟ್ಟರು. ಮದ್ರಾಸ್‌ನಿಂದ ಫ್ರೆಂಚರನ್ನು ಹೊರಗಟ್ಟಲು ಅನ್ವರುದ್ದೀನ್ ಕಳುಹಿಸಿಕೊಟ್ಟ ಸೇನೆಯು ಸೋತಿತು. ಕೊನೆಗೆ ಲಾಬೋರ್ಡಿನನು ಡೂಪ್ಲೆಗೆ ತಿಳಿಸದೆ ಬ್ರಿಟಿಷರಿಂದ ಹಣ ಪಡೆದು ಮದ್ರಾಸನ್ನು ಬಿಟ್ಟುಕೊಟ್ಟು ಮಾರಿಷಸ್‌ಗೆ ಹೊರಟು ಹೋದನು. ಇದರಿಂದ ಕೋಪಗೊಂಡ ಡೂಪ್ಲೆಯು ಮದ್ರಾಸನ್ನು ಮತ್ತೆ ಪಡೆಯುವ ವಿಫಲ ಪ್ರಯತ್ನ ನಡೆಸಿದನು. ಅಂತಿಮವಾಗಿ ಈ ಯುದ್ಧವು ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ಆದ 'ಏಕ್ಸ್–ಲಾ–ಚಾಪೆಲ್' ಒಪ್ಪಂದದೊಂದಿಗೆ ಮುಕ್ತಾಯವಾಯಿತು

36) ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದವರು ಯಾರು?

ಉತ್ತರ:– ಫ್ರೆಂಚರು

37) ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿ ಆತನ ರಕ್ಷಣೆಗೆ ಫ್ರೆಂಚರು ಯಾರನ್ನು ನೇಮಿಸಿದ್ದರು?

ಉತ್ತರ:– ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿ ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯ ಸಹಿತ 'ಬುಸ್ಸಿ' ಎಂಬ ಅಧಿಕಾರಿಯನ್ನು ನೇಮಿಸಿದ್ದರು.

38) ಎರಡನೆಯ ಕಾರ್ನಾಟಿಕ್ ಯುದ್ಧವು ಯಾವ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು?

ಉತ್ತರ:– ಎರಡನೆಯ ಕಾರ್ನಾಟಿಕ್ ಯುದ್ಧವು ಪಾಂಡಿಚೇರಿ ಒಪ್ಪಂದದೊಂದಿಗೆ ಮುಕ್ತಾಯವಾಯಿತು.

39) ಎರಡನೆಯ ಕಾರ್ನಾಟಿಕ್ ಯುದ್ಧ ಕುರಿತು ಬರೆಯಿರಿ

ಉತ್ತರ:– ಫ್ರೆಂಚರು ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದರು. ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯ ಸಹಿತ 'ಬುಸ್ಸಿ' ಎಂಬ ಅಧಿಕಾರಿಯನ್ನು ನೇಮಿಸಿದ್ದರು. ಮತ್ತೊಂದು ಕಡೆ ಫ್ರೆಂಚರ ಬೆಂಬಲದಿಂದ ಚಂದಾಸಾಹೇಬನು ಕಾರ್ನಾಟಿಕ್‌ನ ನವಾಬನಾಗಿದ್ದನು ಆದರೆ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿ ರಾಬರ್ಟ್ ಕ್ಲೈವನು ಕಾರ್ನಾಟಿಕದ ರಾಜಧಾನಿ ಆರ್ಕಾಟಿನ ಮೇಲೆ ಆಕ್ರಮಣ ಮಾಡಿ ಫ್ರೆಂಚರು ಮತ್ತು ಚಂದಾಸಾಹೇಬನನ್ನು ಸೋಲಿಸಿದನು. ಅಂತಿಮವಾಗಿ ಈ ಯುದ್ಧದಲ್ಲಿ ಚಂದಾಸಾಹೇಬನನ್ನು ಬಂಧಿಸಿ ಹತ್ಯೆ ಮಾಡಲಾಯಿತು. ಅವನ ಸ್ಥಾನಕ್ಕೆ ಬ್ರಿಟಿಷರು ಅನ್ವರುದ್ದೀನನ ಮಗನಾದ ಮಹಮ್ಮದ್ ಅಲಿಯನ್ನು ನವಾಬನಾಗಿ ನೇಮಕ ಮಾಡಿದರು. ಕೊನೆಗೆ ಎರಡನೆಯ ಕಾರ್ನಾಟಿಕ್ ಯುದ್ಧವು ಪಾಂಡಿಚೇರಿ ಒಪ್ಪಂದದೊಂದಿಗೆ ಮುಕ್ತಾಯವಾಯಿತು. ಫ್ರೆಂಚರು ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡರು. ಈ ಯುದ್ಧವು ಫ್ರೆಂಚರಿಗೆ ರಾಜಕೀಯ ಹಿನ್ನಡೆಯನ್ನು, ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಿತು.

40) ಮೂರನೆಯ ಕಾರ್ನಾಟಿಕ್ ಯುದ್ಧ ಬಗ್ಗೆ ಬರೆಯಿರಿ

ಉತ್ತರ: ಫ್ರೆಂಚರ 'ಕೌಂಟ್ ಡಿ ಲಾಲಿ'ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು. ಈ ನಿರ್ಣಾಯಕ ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೇನಾಧಿಕಾರಿ ಸರ್. ಐರ್ ಕೂಟನು ಫ್ರೆಂಚರನ್ನು ಸೋಲಿಸಿದನಲ್ಲದೆ, ಬುಸ್ಸಿಯನ್ನು ಸೆರೆಹಿಡಿದನು. ಲಾಲಿಯು ತಪ್ಪಿಸಿಕೊಂಡು ಪಾಂಡಿಚೇರಿಯಲ್ಲಿ ತಲೆಮರೆಸಿಕೊಂಡನು. ಅಂತಿಮವಾಗಿ ಐರ್‌ಕೂಟನು ಪಾಂಡಿಚೇರಿಗೂ ಮುತ್ತಿಗೆ ಹಾಕಿದಾಗ ಲಾಲಿಯು 1761ರಲ್ಲಿ ಬೇಷರತ್ತಾಗಿ ಶರಣಾದನು. ಕಾರ್ನಾಟಿಕ್ ಯುದ್ಧಗಳ ಪರಿಣಾಮವಾಗಿ ಫ್ರೆಂಚರು ಭಾರತದಲ್ಲಿ ತಮ್ಮ ಎಲ್ಲ ನೆಲೆಗಳನ್ನು ಕಳೆದುಕೊಂಡರು. ಅದಾಗ್ಯೂ 1763ರಲ್ಲಿ ನಡೆದ 'ಪ್ಯಾರಿಸ್ ಒಪ್ಪಂದ'ದ ಪ್ರಕಾರ ಫ್ರೆಂಚರಿಗೆ ಪಾಂಡಿಚೇರಿಯನ್ನು ಹಿಂತಿರುಗಿಸಲಾಯಿತು. ಈ ಬೆಳವಣಿಗೆಗಳೊಂದಿಗೆ ದಕ್ಷಿಣ ಭಾರತದಲ್ಲಿ ಫ್ರೆಂಚರು ಮೂಲೆಗುಂಪಾದರು. ಹೀಗೆ ಬ್ರಿಟಿಷರು ತಮ್ಮ ಇತರ ಯುರೋಪಿಯನ್ ಪ್ರತಿಸ್ಪರ್ಧಿಗಳನ್ನು ದಮನ ಮಾಡಿ ದಕ್ಷಿಣ ಭಾರತವನ್ನು ಗೆಲ್ಲುವ ಕಾರ್ಯದಲ್ಲಿ ಮಗ್ನರಾದರು.

41) ರಾಬರ್ಟ್ ಕ್ಲೈವ್ ಬಗ್ಗೆ ಬರೆಯಿರಿ

ಉತ್ತರ:– ಭಾರತದಲ್ಲಿ ಬ್ರಿಟಿಷ್ ಅಧಿಕಾರವನ್ನು ಕಟ್ಟಿದ ಪ್ರಥಮ ಅಧಿಕಾರಿ ರಾಬರ್ಟ್‌ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕಾರಕೂನನಾಗಿ ಸೇವೆಗೆ ಸೇರಿದ್ದನು. ಕಾರ್ನಾಟಿಕ್ ಯುದ್ಧದಲ್ಲಿ ಅದರಲ್ಲೂ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

PUC: MATHS

MATRICES

Problems:-

7. If $A = \begin{bmatrix} 3 & 1 \\ 2 & 5 \end{bmatrix}$ prove that

$$A^2 - 8A + 13I = 0$$

(......Contd)

Soln :– Given, $A = \begin{bmatrix} 3 & 1 \\ 2 & 5 \end{bmatrix}$

$$A^2 = A \times A = \begin{bmatrix} 3 & 1 \\ 2 & 5 \end{bmatrix}\begin{bmatrix} 3 & 1 \\ 2 & 5 \end{bmatrix}$$

$$= \begin{bmatrix} 9+2 & 3+5 \\ 6+10 & 2+25 \end{bmatrix} = \begin{bmatrix} 11 & 8 \\ 16 & 27 \end{bmatrix}$$

$$8A = 8\begin{bmatrix} 3 & 1 \\ 2 & 5 \end{bmatrix} = \begin{bmatrix} 24 & 8 \\ 16 & 40 \end{bmatrix}$$

$$13I = 13\begin{bmatrix} 1 & 0 \\ 0 & 1 \end{bmatrix} = \begin{bmatrix} 13 & 0 \\ 0 & 13 \end{bmatrix}$$

$$\therefore A^2 - 8A + 13I$$

$$= \begin{bmatrix} 11 & 8 \\ 16 & 27 \end{bmatrix} - \begin{bmatrix} 24 & 8 \\ 16 & 40 \end{bmatrix} + \begin{bmatrix} 13 & 0 \\ 0 & 13 \end{bmatrix}$$

$$= \begin{bmatrix} 11-24+13 & 8-8+0 \\ 16-16+0 & 27-40+13 \end{bmatrix} = \begin{bmatrix} 0 & 0 \\ 0 & 0 \end{bmatrix}$$

Hence $A^2 - 8A + 13I = 0$

8. If $A = \begin{bmatrix} a & b \\ c & d \end{bmatrix}$ and I is the unit matrix of the order 2, show that

$$A^2 - (a+d)A = (bc - ad)I$$

Soln :– 1st consider $A^2 = \begin{bmatrix} a & b \\ c & d \end{bmatrix}\begin{bmatrix} a & b \\ c & d \end{bmatrix}$↓

$$= \begin{bmatrix} a^2+bc & ab+bd \\ ac+dc & bc+d^2 \end{bmatrix}$$

Now, consider $(a+d)A = \begin{bmatrix} a^2+ad & ab+bd \\ ac+dc & ad+d^2 \end{bmatrix}$

$$\Rightarrow A^2 - (a+d)A = \begin{bmatrix} a^2+bc & ab+bd \\ ac+dc & bc+d^2 \end{bmatrix} - \begin{bmatrix} a^2+ad & ab+bd \\ ac+dc & ad+d^2 \end{bmatrix}$$

$$= \begin{bmatrix} bc-ad & 0 \\ 0 & bc-ad \end{bmatrix}$$

$$= (bc-ad)\begin{pmatrix} 1 & 0 \\ 0 & 1 \end{pmatrix} = (bc-ad)I$$

Hence, $A^2 - (a+d)A = (bc-ad)I$ is proved.

9. If $A = \begin{bmatrix} 3 & 2 \\ 1 & 0 \end{bmatrix}$, $B = \begin{bmatrix} 4 & 5 & 6 \\ 0 & 1 & 2 \end{bmatrix}$ and

$$C = \begin{bmatrix} 1 & -4 & 1 \\ -2 & 5 & -3 \\ 3 & 6 & 5 \end{bmatrix}$$

verify $(AB)C = A(BC)$.

Soln :– Consider, $A = \begin{bmatrix} 3 & 2 \\ 1 & 0 \end{bmatrix}$ & $B = \begin{bmatrix} 4 & 5 & 6 \\ 0 & 1 & 2 \end{bmatrix}$

$$\therefore AB = \begin{bmatrix} 3 & 2 \\ 1 & 0 \end{bmatrix}\begin{bmatrix} 4 & 5 & 6 \\ 0 & 1 & 2 \end{bmatrix}$$

$$= \begin{bmatrix} 3\times4+0 & 3\times5+2 & 3\times6+4 \\ 1\times4+0 & 1\times5+0 & 1\times6+0 \end{bmatrix}$$

$$= \begin{bmatrix} 12 & 17 & 22 \\ 4 & 5 & 6 \end{bmatrix}$$

Hence, $(AB)C = \begin{bmatrix} 12 & 17 & 22 \\ 4 & 5 & 6 \end{bmatrix}\begin{bmatrix} 1 & -4 & 1 \\ -2 & 5 & -3 \\ 3 & 6 & 5 \end{bmatrix}$

$$\Rightarrow \begin{bmatrix} 12-34+66 & -48+85+132 & -12-51+110 \\ 4-10+18 & -16+25+36 & -4-15+30 \end{bmatrix}$$

$$\Rightarrow \begin{bmatrix} 44 & 169 & 47 \\ 12 & 45 & 11 \end{bmatrix}$$

Now, $BC = \begin{bmatrix} 4 & 5 & 6 \\ 0 & 1 & 2 \end{bmatrix}\begin{bmatrix} 1 & -4 & 1 \\ -2 & 5 & -3 \\ 3 & 6 & 5 \end{bmatrix}$

$$\Rightarrow \begin{bmatrix} 4-10+18 & -16+25+36 & -4-15+30 \\ 0-2+6 & 0+5+12 & 0-3+10 \end{bmatrix}$$

$$\Rightarrow \begin{bmatrix} 12 & 45 & 11 \\ 4 & 17 & 7 \end{bmatrix}$$

Hence, $A(BC) = \begin{bmatrix} 3 & 2 \\ 1 & 0 \end{bmatrix}\begin{bmatrix} 12 & 45 & 11 \\ 4 & 17 & 7 \end{bmatrix}$

$$= \begin{bmatrix} 36+8 & 135+34 & 33+14 \\ 12+0 & 45+0 & 11+0 \end{bmatrix}$$

$$= \begin{bmatrix} 44 & 169 & 47 \\ 12 & 45 & 11 \end{bmatrix}$$

$\therefore (AB)C = A(BC)$ is verified

10. If p, q, r satisfies the eqn $p^2+q^2+r^2=1$,

Show that $A = \begin{bmatrix} 0 & r & q \\ -r & 0 & p \\ -q & -p & 0 \end{bmatrix}$ satisfies the eqn

$A^3 + A = 0$

Soln :– $A^2 = A.A = \begin{bmatrix} 0 & r & q \\ -r & 0 & p \\ -q & -p & 0 \end{bmatrix}\begin{bmatrix} 0 & r & q \\ -r & 0 & p \\ -q & -p & 0 \end{bmatrix}$

$$= \begin{bmatrix} -r^2-q^2 & -pq & pr \\ -pq & -r^2-p^2 & -qr \\ pr & -qr & -q^2-p^2 \end{bmatrix}$$

$\left(\text{as } p^2+q^2+r^2=1;\ -r^2-q^2=p^2-1;\ -r^2-p^2=q^2-1 \text{ and } -q^2-p^2=r^2-1\right)$

$$A^3 = \begin{bmatrix} p^2-1 & -pq & pr \\ -pq & q^2-1 & -qr \\ pr & -qr & r^2-1 \end{bmatrix}\begin{bmatrix} 0 & r & q \\ -r & 0 & p \\ -q & -p & 0 \end{bmatrix}$$

$$\begin{bmatrix} pqr-pqr & (p^2-1)r-p^2r & (p^2-1)q-p^2q \\ -r(q^2-1)+q^2r & -pqr+pqr & -p^2q+p(q^2-1) \\ q^2r-q(r^2-1) & pr^2-p(r^2-1) & pqr-pqr \end{bmatrix}$$

$$\Rightarrow \begin{bmatrix} 0 & -r & -q \\ r & 0 & -p \\ q & p & 0 \end{bmatrix} = \begin{bmatrix} 0 & r & q \\ -r & 0 & p \\ -q & -p & 0 \end{bmatrix} = -A$$

$$\Rightarrow \therefore A^3 + A = 0$$

ವಿದ್ಯಾರ್ಥಿ ವೇತನ ಕೈಪಿಡಿ



ಕಿರಾಣಿ ಅಂಗಡಿ ಮಾಲೀಕರ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ನಿರ್ಮಿಸಲು ಫ್ಲಿಪ್‌ಕಾರ್ಟ್ ಫೌಂಡೇಷನ್ ವಿದ್ಯಾರ್ಥಿವೇತನವನ್ನು ನೀಡುತ್ತಿದೆ. ವೃತ್ತಿಪರ ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಮ್ಯಾಥಮ್ಯಾಟಿಕ್ಸ್) ಪದವಿ ಕೋರ್ಸ್‌ಗಳಿಗೆ ದಾಖಲಾಗಿರುವ ಕಿರಾಣಿ ಅಂಗಡಿ ಮಾಲೀಕರ ಮಕ್ಕಳ ಸಬಲೀಕರಣಕ್ಕಾಗಿ ಈ ವಿದ್ಯಾರ್ಥಿವೇತನವು ಮೀಸಲಾಗಿದೆ.

ಅರ್ಹತೆ: ಅಭ್ಯರ್ಥಿಗಳು ಪ್ರಸ್ತುತ ಭಾರತದಲ್ಲಿನ ಸರ್ಕಾರಿ ಕಾಲೇಜುಗಳಲ್ಲಿ ವೃತ್ತಿಪರ ಪದವಿ ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಮ್ಯಾಥಮ್ಯಾಟಿಕ್ಸ್) ಕೋರ್ಸ್‌ಗಳ 1ನೇ ವರ್ಷದಲ್ಲಿ ಅಭ್ಯಾಸ ಮಾಡುತ್ತಿರಬೇಕು. ಹೆತ್ತವರಲ್ಲಿ ಒಬ್ಬರು ಕಿರಾಣಿ ಅಂಗಡಿಯ ಮಾಲೀಕರಾಗಿರಬೇಕು (ಕೆಎಸ್‌ಒ). ಅಭ್ಯರ್ಥಿಗಳು ತಮ್ಮ 12ನೇ ತರಗತಿಯ ಪರೀಕ್ಷೆಗಳಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ಸೇರಿ ₹5 ಲಕ್ಷವನ್ನು ಮೀರಬಾರದು.

ಆರ್ಥಿಕ ಸಹಾಯ: ₹50,000 ನಿಗದಿತ ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೆ ದಿನ: 20-05-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/pjvi/FLIP1



ಸುಭಾಷಿತ

ಸೋಮಾರಿಯಾಗಿರುವುದು ಸಾಯುವುದಕ್ಕಿಂತ ಅಡ್ಡದಾರಿ. ಕ್ರಿಯಾಶೀಲವಾಗಿ ಇರುವುದು ಬದುಕುವ ಮಾರ್ಗ.

-ಗೌತಮ ಬುದ್ಧ

ಕದನ ವಿರಾಮ ಸ್ವಾಗತಾರ್ಹ ಅಮೆರಿಕದ ಮಧ್ಯಸ್ಥಿಕೆ ಇತ್ತೇ?

ಭಾರತ ಮತ್ತು ಪಾಕಿಸ್ತಾನವು ಶನಿವಾರದಿಂದ ಅನ್ವಯ ಆಗುವಂತೆ ಕದನ ವಿರಾಮವನ್ನು ಜಾರಿಗೆ ತಂದಿವೆ. ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ ನಂತರದಲ್ಲಿ ಎರಡೂ ದೇಶಗಳ ನಡುವೆ ತೀವ್ರ ಸ್ವರೂಪದ ಬಿಕ್ಕಟ್ಟು ಸೃಷ್ಟಿಯಾಗಿತ್ತು. ನಂತರದಲ್ಲಿ ಎರಡೂ ದೇಶಗಳ ನಡುವೆ ಸಂಘರ್ಷ ಕೂಡ ಉಂಟಾಗಿತ್ತು. ಇಂತಹ ಸಂದರ್ಭದಲ್ಲಿ ಮೂಡಿರುವ ಈ ಕದನ ವಿರಾಮ ಸ್ವಾಗತಾರ್ಹ. ಏಕೆಂದರೆ ಭಾರತವು ಹೆಚ್ಚಿನ ನಷ್ಟ ಅನುಭವಿಸದೆ ತನ್ನ ನಿಲುವನ್ನು ಪಾಕಿಸ್ತಾನಕ್ಕೆ ಸ್ಪಷ್ಟಪಡಿಸುವ ಕೆಲಸ ಮಾಡಿದೆ. ಕದನ ವಿರಾಮಕ್ಕೆ ಶನಿವಾರ ತುಸು ಮಟ್ಟಿಗೆ ಭಂಗ ಎದುರಾಗಿತ್ತಾದರೂ ಭಾನುವಾರ ಕದನ ವಿರಾಮ ಉಲ್ಲಂಘನೆ ಆದ ವರದಿಗಳು ಇಲ್ಲ. ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ಆರಂಭ ಆಗಿರಲಿಲ್ಲವಾದರೂ, ಎರಡೂ ದೇಶಗಳು ಕ್ಷಿಪಣಿಗಳ ಬಳಕೆ ಮಾಡಿದ್ದವು. ಎರಡೂ ದೇಶಗಳು ಡ್ರೋನ್ ಬಳಕೆ ಮಾಡಿದ್ದವು ಹಾಗೂ ಗಡಿ ನಿಯಂತ್ರಣ ರೇಖೆಯ ಬಳಿ ಶೆಲ್ ದಾಳಿ ನಡೆದಿತ್ತು. ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕರ ಶಿಬಿರಗಳ ಮೇಲೆ ಭಾರತ ದಾಳಿ ನಡೆಸಿತ್ತು. ಅಲ್ಲದೆ, ಪಾಕಿಸ್ತಾನದಲ್ಲಿ ಇರುವ ಭಯೋತ್ಪಾದಕರ ಮೂಲಸೌಕರ್ಯಗಳಿಗೆ ಹಾನಿ ಉಂಟುಮಾಡುವಲ್ಲಿ ಭಾರತ ಯಶಸ್ಸು ಕಂಡಿತ್ತು. ಎರಡೂ ದೇಶಗಳ ಮಿಲಿಟರಿಯನ್ನು ಯುದ್ಧಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿತ್ತು. ಸಂಘರ್ಷವು ಯುದ್ಧದ ಸ್ವರೂಪವನ್ನು ಪಡೆದುಕೊಳ್ಳಬಹುದು ಎಂಬ ಸ್ಥಿತಿ ನಿರ್ಮಾಣ ಆಗಿದ್ದಾಗ, ಎರಡೂ ದೇಶಗಳ ನಡುವೆ ಕದನ ವಿರಾಮ ಜಾರಿಗೆ ಬಂದಿದೆ. ಪೂರ್ಣ ಪ್ರಮಾಣದ ಯುದ್ಧದಿಂದ ಎರಡೂ ದೇಶಗಳಿಗೆ ನಷ್ಟ. ಹೀಗಾಗಿ, ಯುದ್ಧದ ಸಾಧ್ಯತೆಯನ್ನು ದೂರ ಮಾಡಿ, ಕದನ ವಿರಾಮಕ್ಕೆ ಒಪ್ಪುವ ಮೂಲಕ ಎರಡೂ ದೇಶಗಳು ಒಳ್ಳೆಯ ಕೆಲಸ ಮಾಡಿವೆ.



ಕದನ ವಿರಾಮ ಮತ್ತು ಇತರ ದ್ವಿಪಕ್ಷೀಯ ವಿಷಯಗಳ ಬಗ್ಗೆ ಅಮೆರಿಕದ ನಾಯಕರು ನೀಡಿರುವ ಹೇಳಿಕೆಗಳ ಕುರಿತಾಗಿ ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಬೇಕು

ಮಿಲಿಟರಿ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವ ವಿಚಾರವಾಗಿ ಪಾಕಿಸ್ತಾನದ ಜೊತೆ ಒಪ್ಪಂದವೊಂದಕ್ಕೆ ಬರಲಾಗಿದೆ, ಪಹಲ್ಗಾಮ್ ದಾಳಿಯ ನಂತರದಲ್ಲಿ ಪಾಕಿಸ್ತಾನವನ್ನು ಗುರಿಯಾಗಿಸಿಕೊಂಡು ಕೈಗೊಂಡಿರುವ ರಾಜತಾಂತ್ರಿಕ ಕ್ರಮಗಳ ಮೇಲೆ ಈ ಒಪ್ಪಂದವು ಪರಿಣಾಮ ಉಂಟುಮಾಡುವುದಿಲ್ಲ ಎಂದು ಭಾರತ ಹೇಳಿದೆ. ಕದನ ವಿರಾಮ ಹಾಗೂ ಅದು ಜಾರಿಗೆ ಬಂದ ನಂತರದ ಸ್ಥಿತಿಯ ಬಗ್ಗೆ ಕೇಂದ್ರ ಸರ್ಕಾರವು ಭಾನುವಾರ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಿದೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ಬಿಕ್ಕಟ್ಟಿಗೆ ದೀರ್ಘ ಇತಿಹಾಸ ಇದೆ. ಹಾಗೆಯೇ, ಪ್ರಚೋದನಾತ್ಮಕ ದಾಳಿಗಳನ್ನು ನಡೆಸುವ ಚಾಳಿಯನ್ನು ಪಾಕಿಸ್ತಾನ ಹೊಂದಿದೆ. ಇವುಗಳನ್ನು ಗಮನಿಸಿದಾಗ ಈಗಿನ ಕದನ ವಿರಾಮವು ದುರ್ಬಲ ಎಂದು ಅನ್ನಿಸಬಹುದು. ಆದರೂ ಈ ವಿರಾಮಕ್ಕೆ ಸದ್ಯಕ್ಕೆ ಭಂಗ ಎದುರಾಗಲಿಕ್ಕಿಲ್ಲ ಎಂಬ ಆಶಾಭಾವನೆಯೂ ಇದೆ. ಭಾರತದ ಮೇಲೆ ಇನ್ನೊಂದು ಬಾರಿ ಭಯೋತ್ಪಾದಕ ದಾಳಿ ನಡೆದಿದ್ದೇ ಆದಲ್ಲಿ ಅದನ್ನು ಯುದ್ಧಕ್ಕೆ ಸಮನಾದ ಕೃತ್ಯವೆಂದು ಪರಿಗಣಿಸಲಾಗುತ್ತದೆ ಎಂಬುದನ್ನು ಕೇಂದ್ರ ಸರ್ಕಾರವು ಸ್ಪಷ್ಟಪಡಿಸಿದೆ. ಶಾಂತಿಯನ್ನು ಸ್ಥಾಪಿಸುವ ಹೊಣೆಯು ಪಾಕಿಸ್ತಾನದ ಮೇಲಿದೆ ಎಂಬುದನ್ನೂ ಅದು ಹೇಳಿದೆ.

ಪರಿಸ್ಥಿತಿ ತಿಳಿಗೊಂಡಿದೆ. ಆದರೆ ಪರಿಸ್ಥಿತಿ ತಿಳಿಗೊಂಡಿದ್ದರ ಹಿಂದಿನ ಪ್ರಕ್ರಿಯೆ ಹಾಗೂ ಕೆಲವು ವಿಚಾರಗಳ ಬಗ್ಗೆ ಸ್ಪಷ್ಟತೆ ಬೇಕಿದೆ. ಎರಡೂ ದೇಶಗಳ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರ (ಡಿಜಿಎಂಒ) ನಡುವಿನ ದ್ವಿಪಕ್ಷೀಯ ಮಾತುಕತೆಯ ಮೂಲಕ ಕದನ ವಿರಾಮ ಒಪ್ಪಂದಕ್ಕೆ ಬರಲಾಯಿತು ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಸಂಘರ್ಷವನ್ನು ನಿಲ್ಲಿಸಿ, ಕದನ ವಿರಾಮಕ್ಕೆ ಒಪ್ಪಿಕೊಳ್ಳುವಂತೆ ಎರಡೂ ದೇಶಗಳ ಮೇಲೆ ಅಮೆರಿಕದ ಒತ್ತಡ ಇತ್ತು ಎಂಬುದನ್ನು ಸಂದರ್ಭವು ಹೇಳುತ್ತಿದೆ. ಕದನ ವಿರಾಮದ ಘೋಷಣೆಯನ್ನು ಮೊದಲು ಮಾಡಿದ್ದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್. ಈ ಕದನ ವಿರಾಮವು ಅಮೆರಿಕದ ಮಧ್ಯಸ್ಥಿಕೆಯಲ್ಲಿ ಮೂಡಿದೆ ಎಂದು ಅಲ್ಲಿನ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ. ಅಲ್ಲದೆ, ಅಮೆರಿಕದ ವಿದೇಶಾಂಗ ವ್ಯವಹಾರಗಳ ಸಚಿವ ಮಾರ್ಕೊ ರುಬಿಯೊ ಅವರು, ಎರಡೂ ದೇಶಗಳು ಹಲವು ವಿಚಾರಗಳ ಬಗ್ಗೆ ತಟಸ್ಥ ಸ್ಥಳವೊಂದರಲ್ಲಿ ಮಾತುಕತೆ ನಡೆಸಲು ಒಪ್ಪಿವೆ ಎಂದು ಹೇಳಿದ್ದಾರೆ. ಕಾಶ್ಮೀರ ವಿಚಾರವಾಗಿ ಪರಿಹಾರವೊಂದನ್ನು ಕಂಡುಕೊಳ್ಳಲು ಸಾಧ್ಯವೇ ಎಂಬ ಬಗ್ಗೆ ಎರಡೂ ದೇಶಗಳ ಜೊತೆಗೂಡಿ ಕೆಲಸ ಮಾಡುವುದಾಗಿಯೂ ಟ್ರಂಪ್ ಹೇಳಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ವಿಚಾರಗಳಲ್ಲಿ ಮೂರನೆಯ ದೇಶದ ಮಧ್ಯಸ್ಥಿಕೆಗೆ ಅವಕಾಶ ಇಲ್ಲ ಎಂಬ ನಿಲುವನ್ನು ಭಾರತವು ಹಿಂದಿನಿಂದಲೂ ತಾಳಿದೆ, ಶಿಮ್ಲಾ ಒಪ್ಪಂದ ಕೂಡ ಇದನ್ನೇ ಹೇಳುತ್ತದೆ. ಪ್ರಸ್ತುತ ಕದನ ವಿರಾಮವು ಸಾಧ್ಯವಾಗಿದ್ದು ಹೇಗೆ ಎಂಬ ಬಗ್ಗೆ ಕೇಂದ್ರ ಸರ್ಕಾರವು ಮಾಹಿತಿ ಒದಗಿಸಬೇಕು. ಕದನ ವಿರಾಮದ ಬಗ್ಗೆ ಮತ್ತು ಇತರ ದ್ವಿಪಕ್ಷೀಯ ವಿಷಯಗಳ ಬಗ್ಗೆ ಅಮೆರಿಕದ ನಾಯಕರು ನೀಡಿರುವ ಹೇಳಿಕೆಗಳ ಕುರಿತಾಗಿ ಕೇಂದ್ರವು ಸ್ಪಷ್ಟನೆ ನೀಡಬೇಕು.

ದಿನದ ಟ್ವೀಟ್

ಕೋವಿಡ್ ಕಾಲದ ಕಹಿಸತ್ಯ



ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆಯನ್ನು ನಿಜವಾಗಿ ಆಗಿದ್ದಕ್ಕಿಂತ ಅತ್ಯಂತ ಕಡಿಮೆ ಪ್ರಮಾಣದಲ್ಲಿ ತೋರಿಸಿದ ರಾಜ್ಯ: ಗುಜರಾತ್. ಕೋವಿಡ್‌ನಿಂದಾದ ಸಾವುಗಳ ಸಂಖ್ಯೆಯನ್ನು ನಿಖರವಾಗಿ ದಾಖಲಿಸಿದ ರಾಜ್ಯ: ಕೇರಳ. ಸತ್ಯ ಯಾವಾಗಲೂ ಕೊನೆಯಲ್ಲಿ ಅನಾವರಣ ಆಗುತ್ತದೆ.

ಮಿನಿ ನಾಯರ್, ಲೇಖಕಿ

ಕಿಡಿನುಡಿ



ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಹಾಗೂ ಅವರ ಕುಟುಂಬದವರನ್ನು ಗುರಿಯಾಗಿಸಿಕೊಂಡಿರುವ ಟ್ರೋಲ್‌ಗಳನ್ನು ನೋಡಲು ಅಸಹ್ಯವಾಗುತ್ತದೆ. ವೃತ್ತಿಪರತೆಯ ಪ್ರತಿರೂಪದಂತಿರುವ ಅವರು, ಶಾಂತ, ಸಂಯಮ, ವಿವೇಚನಾಶೀಲ ಹಾಗೂ ಸ್ಪಷ್ಟವಾಗಿ ಮಾತನಾಡಬಲ್ಲವರು... ನಾಚಿಕೆಗೇಡು.

ನವ್‌ದೀಪ್ ಸೂರಿ, ಭಾರತದ ನಿವೃತ್ತ ರಾಜತಾಂತ್ರಿಕ ಅಧಿಕಾರಿ

25 ವರ್ಷಗಳ ಹಿಂದೆ

ಶುಕ್ರವಾರ, 12-5-2000

• ಭಾರತೀಯರು 100 ಕೋಟಿ ಪ್ರಧಾನಿ ಕಳವಳ

ನವದೆಹಲಿ, ಮೇ 11– ಭಾರತದ ಜನಸಂಖ್ಯೆಯು ಇಂದು ನೂರು ಕೋಟಿ ದಾಟಿದ ಬಗೆಗೆ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ತೀವ್ರ ಕಳವಳ ವ್ಯಕ್ತಪಡಿಸಿದರಾದರೂ, ಜನಸಂಖ್ಯಾ ನಿಯಂತ್ರಣ ಮತ್ತು ಜನರ ಆರೋಗ್ಯ ಹಾಗೂ ಮೂಲ ಸೌಕರ್ಯಗಳ ಬಗೆಗೆ ಹೊಸ ಜನಸಂಖ್ಯಾ ನೀತಿಯೊಂದನ್ನು ಪ್ರಕಟಿಸಿದರು.

ಯೋಜನಾ ಆಯೋಗವು ಸಿದ್ಧಪಡಿಸಿದ ಜನಸಂಖ್ಯಾ ನೀತಿಯನ್ನು ಆಯೋಗದ ಉಪಾಧ್ಯಕ್ಷ ಕೆ.ಸಿ. ಪಂತ್ ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿ, ಪ್ರಸ್ತುತ ವರ್ಷದಲ್ಲಿ ತುರ್ತಾಗಿ ಕೈಗೆತ್ತಿಕೊಳ್ಳಬೇಕಾದ ಕಾರ್ಯಕ್ರಮಗಳ ವಿವರ ನೀಡಿದರು.

ನೂತನ ಜನಸಂಖ್ಯಾ ನೀತಿಯನ್ನು ಅಕ್ಷರಶಃ ಜಾರಿಗೆ ತಂದದ್ದೇ ಆದರೆ, ಮುಂದಿನ 2010ನೇ ಇಸವಿ ವೇಳೆಗೆ ಒಟ್ಟು ಜನಸಂಖ್ಯೆಯು 110 ಕೋಟಿ ಮಾತ್ರ ಮುಟ್ಟಲು ಸಾಧ್ಯ ಎಂದು ಅಂದಾಜಿಸಲಾಗಿದೆ.

• ಅಮೆರಿಕ ಕಂಪನಿಯ ಬೇವಿನ ಪೇಟೆಂಟ್ ರದ್ದು

ಬರ್ಲಿನ್, ಮೇ 11 (ಪಿಟಿಐ)– ಅಮೆರಿಕದ ಕೃಷಿ ಇಲಾಖೆ ಮತ್ತು ಡಬ್ಲ್ಯು.ಆರ್. ಗ್ರೇಸ್ ರಾಸಾಯನಿಕ ಸಂಸ್ಥೆಗೆ 1995ರಲ್ಲಿ ಜಂಟಿಯಾಗಿ ನೀಡಿದ್ದ ಬೇವಿನ ಮರದ ಎಣ್ಣೆ ತೆಗೆಯುವ ಪೇಟೆಂಟ್ ಅನ್ನು ಯುರೋಪಿನ ಪೇಟೆಂಟ್ ಕಾರ್ಯಾಲಯ ವಾಪಸ್ ಪಡೆದಿದೆ. ಭಾರತದ ಬೇವು ಕೃಷಿಕರಿಗೆ ಇದು ವರದಾನವಾಗಿದೆ ಎಂದು ವರ್ಣಿಸಲಾಗಿದೆ.

ಈ ಬೇವಿನ ಪೇಟೆಂಟ್ ನೀಡಿಕೆ ವಿರುದ್ಧ ಮೂರು ಸಂಸ್ಥೆಗಳು ಆಕ್ಷೇಪ ವ್ಯಕ್ತಪಡಿಸಿ ಸಲ್ಲಿಸಿದ್ದ ಅರ್ಜಿಯನ್ನು ಯುರೋಪ್ ಪೇಟೆಂಟ್ ಕಾರ್ಯಾಲಯ ಪುರಸ್ಕರಿಸಿತು. ಬೇವಿನ ಮರದಿಂದ ಎಣ್ಣೆ ತೆಗೆಯುವ ಕಾರ್ಯ 1994ಕ್ಕಿಂತ ಹಿಂದೆ ಭಾರತದಲ್ಲಿ ನಡೆಯುತ್ತಿತ್ತು ಎಂಬ ವಾದವನ್ನು ಎತ್ತಿ ಹಿಡಿಯಿತು.

50 ವರ್ಷಗಳ ಹಿಂದೆ

ಸೋಮವಾರ, 12-5-1975

• ಸಾಮಾಜಿಕ ಹೊಣೆ ಅರಿಯಲು ಔಷಧಿ ವ್ಯಾಪಾರಿಗಳಿಗೆ ಕರೆ

ಬೆಂಗಳೂರು, ಮೇ 11– ನ್ಯಾಯವಾದ ಬೆಲೆಗಳಲ್ಲಿ ಉತ್ತಮ ಗುಣಮಟ್ಟದ ಔಷಧಿಗಳನ್ನು ಪೂರೈಸುವ ಮೂಲಕ ಮಾನವರ ರೋಗಬಾಧೆಗಳನ್ನು ನಿವಾರಿಸಲು ಶ್ರಮಿಸಬೇಕೆಂದು ರಾಜ್ಯಪಾಲ ಮೋಹನಲಾಲ್ ಸುಖಾಡಿಯಾ ಅವರು ಇಂದು ಇಲ್ಲಿ ಔಷಧಿ ವ್ಯಾಪಾರಿಗಳಿಗೆ ಕರೆ ನೀಡಿದರು.

ಭಾರತೀಯ ಔಷಧಿ ವ್ಯಾಪಾರಿಗಳ ಜಂಟಿ ಮಂಡಳಿ ಆಶ್ರಯದಲ್ಲಿ ನಡೆದ ಔಷಧಿ ವ್ಯಾಪಾರಿಗಳ ರಾಷ್ಟ್ರೀಯ ಸಮಾವೇಶವನ್ನು ರಾಜ್ಯಪಾಲರು ಉದ್ಘಾಟಿಸಿದರು.

ವೃತ್ತಿಗೆ ಸಂಬಂಧಿಸಿದಂತೆ ಸ್ವಯಂ ನಿಯಂತ್ರಣ ನಡವಳಿಕೆ ಸಂಹಿತೆಯೊಂದನ್ನು ರೂಪಿಸಿಕೊಂಡು, ಸಾಮಾಜಿಕ ಹೊಣೆಯರಿತು ಕಾರ್ಯಮಗ್ನರಾಗಬೇಕು ಎಂದು ಅವರು ತಿಳಿಸಿದರು.

ನಕಲಿ ಔಷಧಿಗಳ ತಯಾರಿಕೆ ಮತ್ತು ಕಳ್ಳ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದನ್ನು ‘ಹೀನಕೃತ್ಯ’ ಎಂದು ಕರೆದ ಸುಖಾಡಿಯಾ ಅವರು, ‘ನ್ಯಾಯಸಮ್ಮತ ಲಾಭ ತೆಗೆದುಕೊಳ್ಳಿ. ಆದರೆ ಜನತೆಯನ್ನು ಕಷ್ಟಕೋಟಲೆಗಳಿಗೆ ಸಿಲುಕಿಸಬೇಡಿ’ ಎಂದು ಸಲಹೆ ನೀಡಿದರು.

ಭಾಷಾ ಕೌಶಲದ ಮಹತ್ವ ಅರಿತು ಕಲಿಕೆಯ ಗುಣಮಟ್ಟ ಹೆಚ್ಚಿಸಬೇಕಿದೆ

ಭಾಷೆ ಮತ್ತು ಕಲಿಕೆಯ ಉನ್ನತೀಕರಣ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಎಸ್ಎಸ್ಎಲ್‌ಸಿ ಪರೀಕ್ಷೆಯ ಕನ್ನಡ ಭಾಷಾ ಪತ್ರಿಕೆಯಲ್ಲಿ ಅನುತ್ತೀರ್ಣರಾಗುತ್ತಿರುವವರ ಪ್ರಮಾಣ ಜಾಸ್ತಿಯಾಗುತ್ತಿದೆ ಎನ್ನುವುದು ಪ್ರತಿಬಾರಿಯೂ ಕೇಳಿಬರುತ್ತದೆ. ಆದರೆ ಇದಕ್ಕೆ ಕಾರಣ ಪತ್ತೆ ಹಚ್ಚಿ ಸಮಸ್ಯೆಯನ್ನು ಪರಿಹರಿಸುವ ಕ್ರಮಗಳು ಕಾಣಿಸುತ್ತಿಲ್ಲ. ಪರಿಹಾರದ ಕ್ರಮಗಳನ್ನು ಕಂಡುಕೊಳ್ಳಬೇಕಾದರೆ ಸಮಸ್ಯೆಯ ಸ್ವರೂಪವನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು.

ಎಲ್ಲಕ್ಕೂ ಮುಖ್ಯವಾಗಿ ಇಂದಿನ ಒಟ್ಟು ಶೈಕ್ಷಣಿಕ ಸನ್ನಿವೇಶವೇ ಭಾಷಾಶಾಸ್ತ್ರದ ಅಧ್ಯಯನವನ್ನು ‘ಅನುಪಯುಕ್ತ’ ಎಂಬ ಅರ್ಥದಲ್ಲಿ ಸಾಂಕೇತಿಕವಾಗಿಸಿದೆ. ಭಾಷಾಶಾಸ್ತ್ರದ ನಿಷ್ಪ್ರಯೋಜಕತ್ವದ ಪ್ರಜ್ಞೆಯು ಕನ್ನಡವನ್ನು ಮಾತ್ರ ಬಾಧಿಸುತ್ತಿಲ್ಲ; ಇಂಗ್ಲಿಷ್, ಹಿಂದಿ, ಸಂಸ್ಕೃತ... ಹೀಗೆ ಎಲ್ಲ ಭಾಷಾ ಪಠ್ಯಗಳನ್ನೂ ಬಾಧಿಸುತ್ತಿದೆ. ಒಂದೇ ಒಂದು ವ್ಯತ್ಯಾಸವೆಂದರೆ, ಇಂಗ್ಲಿಷ್‌ನ ವಿಷಯಕ್ಕಾದಾಗ ಸಂವಹನ ಭಾಷೆಯಾಗಿ ಅದಕ್ಕೊಂದು ಮಹತ್ವವನ್ನು ಕೊಡಲಾಗುತ್ತದೆ. ಅಲ್ಲಿಗೆ ಇತರ ಭಾಷಾ ಪಠ್ಯಗಳ ಕಲಿಕೆ ಚೆನ್ನಾಗಿ ನಡೆಯುತ್ತಿದೆ ಎಂದೇನೂ ಇಲ್ಲ. ಬಹಳಷ್ಟು ಪದವಿಪೂರ್ವ ವಿಜ್ಞಾನ ಕಾಲೇಜುಗಳಲ್ಲಿ ಭಾಷಾ ಪಠ್ಯಗಳ ಬೋಧನೆ ಮೂರು ಅಥವಾ ನಾಲ್ಕು ತಿಂಗಳಲ್ಲಿ ಮುಗಿದು, ನಂತರ ಆ ಅವಧಿಗಳು ನೀಟ್, ಸಿಇಟಿ ಕೋಚಿಂಗ್ ತರಗತಿಗಳಾಗಿ ಬದಲಾಗುವುದನ್ನು ಕಾಣಬಹುದು.

ಶೈಕ್ಷಣಿಕ ಸನ್ನಿವೇಶವು ಈ ಮಾದರಿಯಲ್ಲಿ ರೂಪುಗೊಳ್ಳಲು ಉನ್ನತ ಶಿಕ್ಷಣ ಮತ್ತು ಔದ್ಯೋಗಿಕ ಸಂಘಟನೆಗಳೂ ಕಾರಣವಾಗಿವೆ. ಉನ್ನತ ಶಿಕ್ಷಣದ ಪಾರಂಪರಿಕ ವ್ಯವಸ್ಥೆಯು ಕುಸಿದುಬಿದ್ದಿದೆ. ಹೆಚ್ಚು ಔದ್ಯೋಗಿಕ ಸ್ವರೂಪದ ಹೊಸ ಹೊಸ ಕೋರ್ಸ್‌ಗಳು ಪ್ರಾಮುಖ್ಯ ಪಡೆದಿವೆ. ಆರ್ಥಿಕ ವ್ಯವಸ್ಥೆಯ ಮರು ನಿರೂಪಣೆಯಲ್ಲಿ ಇದು ತೀರಾ ಸಹಜ. ಆದರೆ ಈ ಪ್ರಕ್ರಿಯೆಯು ಭಾಷಾ ಕೌಶಲವನ್ನು ಬಹಳ ಕನಿಷ್ಠ ಮಟ್ಟಕ್ಕೆ ಇಳಿಸಿದೆ. ಈ ಇಡೀ ಶೈಕ್ಷಣಿಕ ಮತ್ತು ಔದ್ಯೋಗಿಕ ಘಟಕಗಳಿಗೆ ಸಂವಹನಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಇಂಗ್ಲಿಷ್ ಗೊತ್ತಿರಬೇಕು. ಅದರ ಹೊರತಾಗಿ ಇಂಗ್ಲಿಷೂ ಸೇರಿದ ಹಾಗೆ ಬೇರೆ ಯಾವುದೇ ಭಾಷಾಶಾಸ್ತ್ರ ಜ್ಞಾನದ ಅವಶ್ಯಕತೆಯೂ ಇಲ್ಲ.

ನೇಮಕಾತಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳು ಬಹುಮಟ್ಟಿಗೆ ಬಹು ಆಯ್ಕೆ ಮಾದರಿಯ ಪ್ರಶ್ನೆಗಳನ್ನು ಹೊಂದಿರುತ್ತವೆ. ಇದಕ್ಕೆ ಭಾಷಾ ಶಿಕ್ಷಕರ ನೇಮಕಾತಿ ಪರೀಕ್ಷೆಯೂ ಹೊರತಲ್ಲ. ಅಂದರೆ ಭಾಷಾ ಶಿಕ್ಷಕರ ಭಾಷಾ ಕೌಶಲವನ್ನೇ ವ್ಯಾಪಕವಾಗಿ ಪರೀಕ್ಷಿಸುವ ವ್ಯವಸ್ಥೆ ಇಲ್ಲ! ಯುಪಿಎಸ್‌ಸಿ, ಕೆಪಿಎಸ್‌ಸಿ ಪ್ರಬಂಧ ಮಾದರಿಯ ಪ್ರಶ್ನೆಗಳ ಪರೀಕ್ಷೆಗಳಲ್ಲಿಯೂ ವಿಷಯವನ್ನು ಒಂದೊಂದು ಅಂಶವಾಗಿ ಹೇಳುವುದಕ್ಕೆ ಮಹತ್ವ ಇದೆಯೇ ವಿನಾ ಪ್ರಬಂಧ ಮಾದರಿಯಲ್ಲೇ ಉತ್ತರಿಸಬೇಕೆಂಬ ನಿರೀಕ್ಷೆ ಇಲ್ಲ. ವಿಷಯ ಗೊತ್ತಿದೆಯೋ ಇಲ್ಲವೋ ಎಂಬುದನ್ನು ತಿಳಿಯುವುದು ಮಾತ್ರ ಅಲ್ಲಿನ ಉದ್ದೇಶ. ಭಾಷಾ ಸಾಮರ್ಥ್ಯ ಇದೆಯೋ ಇಲ್ಲವೋ ಎನ್ನುವುದು ಬೇಕಾಗಿಲ್ಲ.

ಈ ರೀತಿಯ ಶೈಕ್ಷಣಿಕ ಮತ್ತು ಆರ್ಥಿಕ ಸನ್ನಿವೇಶದ ನಿರ್ಮಾಣದಲ್ಲಿ ಸಿಇಟಿ ಮತ್ತು ನೀಟ್ ವ್ಯವಸ್ಥೆಗಳು ಉಳಿದೆಲ್ಲ ಕಲಿಕೆಗಳ ಮೇಲೆ ಬಹಳಷ್ಟು ಪ್ರಭಾವ ಬೀರಿವೆ. ಶಿಕ್ಷಣೋದ್ಯಮದ ಕತ್ತು ಕುಯ್ಯುವ ಸ್ಪರ್ಧೆ ಹೇಗಿದೆ ಎಂದರೆ, ಒಂದು ಕಾಲೇಜಿನ ಪರಿಸರದಲ್ಲಿ ಮತ್ತೊಂದು ಕಾಲೇಜಿನವರು ಮಫ್ತಿಯಲ್ಲಿ ಬಂದು ನಿಲ್ಲುವುದು, ಆ ಕಾಲೇಜಿಗೆ ಸೇರಲೆಂದು ವಿದ್ಯಾರ್ಥಿಗಳು ಮತ್ತು ಪೋಷಕರು ಬಸ್ ಇಳಿದ ತಕ್ಷಣ ಅವರ ಬಳಿ ಹೋಗಿ ಅವರು ಸೇರಬಯಸಿದ ಕಾಲೇಜು ನೀಟ್, ಸಿಇಟಿ ಕೋಚಿಂಗ್‌ಗೆ ಯಾಕೆ ಸೂಕ್ತವಾಗಿಲ್ಲ ಎಂದು ಅವರಿಗೆ ವಿವರಿಸುವುದು, ತಮ್ಮ ಕಾಲೇಜು ಹೇಗೆ ಅತ್ಯುತ್ತಮವಾಗಿದೆ ಎಂದು ಅವರಿಗೆ ಮನವರಿಕೆ ಮಾಡಿಕೊಟ್ಟು ಅಲ್ಲಿಂದಲೇ ಅವರನ್ನು ಕಾರಿನಲ್ಲಿ ಕೂರಿಸಿಕೊಂಡು ತಮ್ಮ ಕಾಲೇಜಿಗೆ ಕರೆದೊಯ್ದು ದಾಖಲಾತಿ ಮಾಡಿಸುವಂತಹುದನ್ನು ಕಾಣಬಹುದು. ಸ್ಪರ್ಧಾತ್ಮಕ ಶಿಕ್ಷಣೋದ್ಯಮಕ್ಕೆ ಇದು ಅನಿವಾರ್ಯ. ಆದರೆ ಇದರಿಂದ ವಿದ್ಯಾರ್ಥಿಯ ಆಯ್ಕೆಯ ಸ್ವಾತಂತ್ರ್ಯವೇ ಹೊರಟು ಹೋಗುತ್ತದೆ.

ನೀಟ್, ಸಿಇಟಿ ಫಲಿತಾಂಶವೇ ಕಾಲೇಜಿನ ಗುಣಮಟ್ಟದ ನಿರ್ಧಾರಕವೂ ಆಗುತ್ತದೆ. ಅಂಕಗಳ ಆಧಾರದಲ್ಲಿ ಬುದ್ಧಿವಂತರಾದವರೆಲ್ಲರೂ ನೀಟ್, ಸಿಇಟಿಯನ್ನೇ ಆರಿಸಿಕೊಂಡಾಗ ಕ್ರಮೇಣ ಈ ಪ್ರವೇಶ ಪರೀಕ್ಷೆಗಳ ಮೂಲಕವೇ ಅಧ್ಯಯನ ನಡೆಸಿ ಉದ್ಯೋಗ ಬಯಸುವ ಕ್ಷೇತ್ರಗಳಲ್ಲಿ ಅತಿಯಾದ ಸ್ಪರ್ಧೆ ಉಂಟಾಗುತ್ತದೆ. ಅದರಿಂದಾಗಿ ಅವಕಾಶಗಳು ಕಡಿಮೆ ಆಗುತ್ತವೆ. ಬುದ್ಧಿವಂತರೇ ಹೆಚ್ಚು ಹೆಚ್ಚು ಅವಕಾಶವಂಚಿತರಾಗುವ ಸ್ಥಿತಿ ಬರುವ ತನಕವೂ ನೀಟ್, ಸಿಇಟಿ ವ್ಯವಸ್ಥೆಗಳು ಶಿಕ್ಷಣದ ಇತರ ಎಲ್ಲ ಕ್ಷೇತ್ರಗಳನ್ನೂ ಪ್ರಭಾವಿಸುವುದು ಮುಂದುವರಿಯಲಿದೆ. ಆದರೆ ಈ ಪ್ರಭಾವವೇ ಯಾವ ಉದ್ಯೋಗಕ್ಕೂ ಭಾಷಾಶಾಸ್ತ್ರದ ಜ್ಞಾನದ ಅವಶ್ಯಕತೆ ಇಲ್ಲ, ವಿಷಯ ಜ್ಞಾನ ಇದ್ದರೆ ಸಾಕು ಎಂಬ ಚಿಂತನೆಯನ್ನು ಹುಟ್ಟಿಸಿದೆ. ಅಂದರೆ ಭಾಷಾ ಕಲಿಕೆಗೆ ಮಹತ್ವವನ್ನು ತರಬೇಕಾದರೆ ಮೊದಲು ಔದ್ಯೋಗಿಕ ಕ್ಷೇತ್ರಕ್ಕೆ ಭಾಷಾ ಸಾಮರ್ಥ್ಯ ಇರುವ ಅಭ್ಯರ್ಥಿಗಳು ಬೇಕು ಮತ್ತು ಅದಕ್ಕಾಗಿ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಷಾಶಾಸ್ತ್ರದ ಸಾಮರ್ಥ್ಯವನ್ನು ಪರೀಕ್ಷಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಉನ್ನತ ಶಿಕ್ಷಣ ಸಂಘಟಿತವಾಗಿರುವ ಕ್ರಮವು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಮೇಲೂ ಪ್ರಭಾವ ಬೀರುತ್ತದೆ. ಮೇಲ್ನೋಟಕ್ಕೆ ಈ ಪ್ರಭಾವ ಗೊತ್ತಾಗುವುದಿಲ್ಲ. ತುಸು ಆಳವಾಗಿ ಅಭ್ಯಸಿಸಿದಾಗ ಗೊತ್ತಾಗುತ್ತದೆ. ಎರಡು– ಮೂರು ದಶಕಗಳ ಹಿಂದೆ ಪ್ರೌಢ ಶಿಕ್ಷಣದಲ್ಲಿ ಪ್ರಥಮ ಭಾಷೆಯಾಗಿ ಸಂಸ್ಕೃತವನ್ನು ತೆಗೆದುಕೊಂಡರೆ ಒಳ್ಳೆಯ ಅಂಕಗಳನ್ನು ಪಡೆಯಲು ಸುಲಭವಾಗುತ್ತದೆ ಎಂಬ ಭಾವನೆ ಇತ್ತು. ಏಕೆಂದರೆ ಸಂಸ್ಕೃತ ಪತ್ರಿಕೆಯನ್ನು ಕನ್ನಡದಲ್ಲಿ ಬರೆಯಬಹುದಾಗಿತ್ತು. ಬಲು ಸರಳವಾಗಿ ಪ್ರಶ್ನೆಪತ್ರಿಕೆಯನ್ನು ಸಂಯೋಜಿಸಲಾಗುತ್ತಿತ್ತು. ಈಗ ಎಲ್ಲ ಭಾಷಾ ಪಠ್ಯಗಳ ಪ್ರಶ್ನೆಪತ್ರಿಕೆಯನ್ನೂ ಅತಿ ಸರಳಗೊಳಿಸಲಾಗಿದೆ. ಒಂದು ‘ಪತ್ರ’ ಬರವಣಿಗೆಗೆ ನಾಲ್ಕು ಅಂಕಗಳು, ಒಂದು ‘ಪದ್ಯ ಕಂಠಪಾಠ’ಕ್ಕೆ ನಾಲ್ಕು ಅಂಕಗಳು, ಒಂದು ‘ರಜೆ ಅರ್ಜಿ’ಗೆ ನಾಲ್ಕು ಅಂಕಗಳು, ಒಂದು ‘ಪ್ರಬಂಧ’ಕ್ಕೆ ನಾಲ್ಕು ಅಂಕಗಳು, ಇನ್ನೊಂದು ಹತ್ತು ಅಂಕಗಳಿಗೆ ಬೇಕಾದಷ್ಟು ಒಂದು ಅಂಕದ ವ್ಯಾಕರಣಾಂಶಗಳು ಎಂಬ ಶೈಲಿಯಲ್ಲಿ ಅಂದಾಜಿಸಿ ಅಷ್ಟಕ್ಕೆ ಮಾತ್ರ ಭಾಷಾ ಪಠ್ಯವನ್ನು ಕಲಿಸುವ ಮತ್ತು ಕಲಿಯುವ ಪದ್ಧತಿ ಬಂದಾಗಿದೆ. ಅಂದರೆ ಭಾಷಾ ಕೌಶಲಗಳನ್ನು ಕಲಿಸುವುದೇ ಇಲ್ಲ!



ಆಗ ಕನ್ನಡ ಭಾಷೆಗೆ ಸಂಬಂಧಿಸಿದ ಸ್ಥಿತಿ ಹೇಗಿರುತ್ತದೆ? ವಿದ್ಯಾರ್ಥಿಗಳು ಕನ್ನಡದ ಸನ್ನಿವೇಶದಲ್ಲಿ ಇರುವುದರಿಂದ ಸಂವಹನ ಭಾಷೆಯಾಗಿ ಅವರಿಗೆ ಕನ್ನಡ ತಿಳಿದಿರುತ್ತದೆ. ಆದರೆ ಸಂವಹನ ಕನ್ನಡ ಎನ್ನುವುದು ಮಂಗಳೂರು ಕನ್ನಡ, ಬೆಂಗಳೂರು ಕನ್ನಡ, ಮೈಸೂರು ಕನ್ನಡ, ಮಂಡ್ಯ ಕನ್ನಡ, ಧಾರವಾಡ ಕನ್ನಡ, ವಿಜಯಪುರ ಕನ್ನಡ, ಬೀದರ್ ಕನ್ನಡ ಎಂದೆಲ್ಲ ನಾನಾ ಸ್ವರೂಪದಲ್ಲಿರುತ್ತದೆ. ಆದರೆ ಸಂವಹನ ಭಾಷೆಯಾಗಿ ಹೊಂದಿರುವ ತಿಳಿವಳಿಕೆಯೇ ಭಾಷಾಶಾಸ್ತ್ರದ ವ್ಯವಸ್ಥಿತ ಅಧ್ಯಯನವೂ ಆಗಿರುವುದಿಲ್ಲ, ಭಾಷಾ ಕೌಶಲವೂ ಆಗಿರುವುದಿಲ್ಲ. ಈ ಸಮಸ್ಯೆಯನ್ನು ಪರಿಹರಿಸಬೇಕಾದರೆ ಭಾಷಾ ಬೋಧನೆಯ ಗುಣಮಟ್ಟವನ್ನು ಹೆಚ್ಚಿಸಬೇಕು ಮತ್ತು ಪ್ರಶ್ನೆಪತ್ರಿಕೆಯ ಮಟ್ಟವನ್ನು ತುಸು ಏರಿಸಬೇಕು. ಆಗ ಒಂದು ಬಾರಿಗೆ ಫಲಿತಾಂಶ ಇನ್ನೂ ಕಡಿಮೆ ಬಂದೀತು. ಆದರೆ ನಿಧಾನವಾಗಿ ಭಾಷಾ ಕಲಿಕೆ ಚೇತರಿಸಿಕೊಳ್ಳುತ್ತದೆ.

ಭಾಷಾ ಕಲಿಕೆಯ ಉನ್ನತೀಕರಣವು ಪ್ರೌಢಶಾಲೆಗಿಂತ ಮುಖ್ಯವಾಗಿ ಪ್ರಾಥಮಿಕ ಶಾಲೆಯಲ್ಲಿ ಆಗಬೇಕು. ಅಕ್ಷರಗಳ ಅರಿವು, ಪದಗಳ ನಿರ್ಮಾಣ, ಸರಳ ವಾಕ್ಯ, ಸಂಯುಕ್ತ ವಾಕ್ಯ, ಸಂಕೀರ್ಣ ವಾಕ್ಯ ರಚನೆಯ ಕೌಶಲವು ಐದನೇ ತರಗತಿಯ ಮೊದಲು ಆಗದೇ ಇದ್ದರೆ ಮುಂದೆ ಅದನ್ನು ಕಲಿಯುವುದು ಮತ್ತು ಕಲಿಸುವುದು ಬಹಳ ಕಷ್ಟಕರ ಆಗಿರುತ್ತದೆ. ಏಕೆಂದರೆ ಮುಂದಿನ ಹಂತದಲ್ಲಿ ಕಲಿಕಾಂಶಗಳು ವಿಸ್ತರಿಸಲ್ಪಡುತ್ತವೆ. ವಿಸ್ತರಿಸಲ್ಪಟ್ಟ ಕಲಿಕಾಂಶಗಳನ್ನು ಬೋಧಿಸದೆ ಮುಂದಿನ ತರಗತಿಗಳ ಪರೀಕ್ಷೆ ನಡೆಸಲು ಬರುವುದಿಲ್ಲ. ಆ ತರಗತಿಗಳ ಬೋಧನಾಂಶಗಳನ್ನು ಬೋಧಿಸಿದರೆ ವಾಕ್ಯ ರಚನೆಯೇ ಗೊತ್ತಿಲ್ಲದವನಿಗೆ ಏನೂ ಅರ್ಥವಾಗುವುದಿಲ್ಲ. ಹಾಗೆಂದು ಅನುತ್ತೀರ್ಣಗೊಳಿಸಲು ಆಗುವುದಿಲ್ಲ, ಅನುತ್ತೀರ್ಣಗೊಳಿಸಿದರೂ ಉಪಯೋಗವಿಲ್ಲ ಎನ್ನುವ ಬಿಕ್ಕಟ್ಟಿನ ಸನ್ನಿವೇಶದಲ್ಲೇ ಮುಂದಿನ ತರಗತಿಗಳು ಮುಂದುವರಿಯುತ್ತವೆ. ಭಾಷೆಯ ವಿಷಯಗಳು ಗೊತ್ತಿದ್ದರೂ ವಾಕ್ಯ ರಚಿಸಿ ಬರೆಯಲು ಗೊತ್ತಿಲ್ಲದೇ ಬಹಳಷ್ಟು ವಿದ್ಯಾರ್ಥಿಗಳು ಪಬ್ಲಿಕ್ ಪರೀಕ್ಷೆಯಲ್ಲಿ ಅನುತ್ತೀರ್ಣಗೊಳ್ಳುವ ಸಾಧ್ಯತೆ ಇರುತ್ತದೆ. ಅಲ್ಲದೆ, ಅಕ್ಷರಗಳನ್ನು ಜೋಡಿಸಿ ಪದ ರಚಿಸುವಾಗ ಉಂಟಾಗುವ ದೋಷಗಳೂ ಅನುತ್ತೀರ್ಣತೆಗೆ ಕಾರಣವಾಗಬಹುದು.

ಭಾಷಾ ಕಲಿಕೆಯ ದೋಷಗಳನ್ನು ಪ್ರಾಥಮಿಕ ಶಿಕ್ಷಣದಲ್ಲೇ ಸರಿಪಡಿಸಲು ಕ್ರಮ ತೆಗೆದುಕೊಳ್ಳಬೇಕು ಮತ್ತು ಪ್ರಾಥಮಿಕ ಶಾಲೆಯ ಭಾಷಾ ಶಿಕ್ಷಕರಿಗೆ ಇತರ ಕೆಲಸಗಳ ಹೊರೆಯನ್ನು ಕಡಿಮೆ ಮಾಡಿ, ಭಾಷೆಯನ್ನು ಕಲಿಸಲು ಸಮಯ ಒದಗಿಸಬೇಕು. ಆಗ ಮಾತ್ರ ಭಾಷಾ ಕಲಿಕೆಯ ಸಮಸ್ಯೆಯನ್ನು ನಿವಾರಿಸಬಹುದು.

ಚುರುಮುರಿ



ಸುಳ್ಳುಸುದ್ದಿ ಪತ್ತೆಗೆ ಡ್ರೋನ್!

• ಸುಮಂಗಲಾ

‘ಸೈನಿಕರು ಪ್ರಾಣ ಪಣಕ್ಕಿಟ್ಟು ಹೋರಾಡತಿದ್ದರೆ ಬೆಂದ ಮನೇಲಿ ಹಿರಿದದ್ದೇ ಲಾಭ ಅನ್ನೋ ಹಂಗೆ ಇವ್ರು ಅದ್ರಾಗೆ ಲಾಭ ಮಾಡಿಕೊಳ್ಳೋ ಯೋಚನೇಲಿ ಇದಾರೆ’ ಎಂದು ಬೆಕ್ಕಣ್ಣ ವಾಚಾಮಗೋಚರ ಬೈಯುತ್ತಿತ್ತು. ‘ಯಾರಲೇ ಅದು, ಇಂಥಾ ಬಿಕ್ಕಟ್ಟಿನ ಸಂದರ್ಭದಲ್ಲೂ ಲಾಭ ಮಾಡಿಕೊಳ್ಳೋರು?’ ನನಗೂ ಕುತೂಹಲವಾಯಿತು.

‘ಅದೇ ಈ ಬಾಲಿವುಡ್ ಸಿನಿಮಾದವ್ರು, ಇನ್ನೂ ಕೆಲ ಮಂದಿ ಆಪರೇಷನ್ ಸಿಂಧೂರ್ ಟೈಟಲ್ ತಮಗೆ ಕೊಡಬಕು ಅಂತ ಅರ್ಜಿ ಹಾಕ್ಯಾರಂತೆ. ಮೂವತ್ತಕ್ಕೂ ಹೆಚ್ಚು ಅರ್ಜಿ ಬಂದಾವಂತೆ’ ಬೆಕ್ಕಣ್ಣ ಗುರುಗುಟ್ಟಿತು.

‘ನಿಮ್ ರಿಲಾಯನ್ಸ್ ಮುಕೇಶಣ್ಣನ ಕಡೇವ್ರೂ ನಮಗೇ ಕೊಡ್ರಿ ಅಂತ ಮೊದ್ಲು ಅರ್ಜಿ ಹಾಕಿದ್ರಂತೆ. ಆಮ್ಯಾಲೆ ಮಂದಿ ಇಂಟರ್‌ನೆಟ್ಟಿನಾಗೆ ಜಾಡಿಸಿದ್ದು ನೋಡಿ, ವಾಪಸು ತಗಂಡರಂತೆ’ ಎಂದೆ.

‘ಒಟ್ಟು ಎಲ್ಲಾರಿಗೂ ಅಗದಿ ಸೆನ್ಸೇಷನಲ್ ವಿಷ್ಯ ಬೇಕು. ಇನ್ನು ಸಿನಿಮಾವಳಗೆ ದೇಶಭಕ್ತಿ ಜೊತಿಗಿ ಪ್ರೀತಿ, ಪ್ರೇಮ, ಫೈಟಿಂಗ್ ಎಲ್ಲಾ ಥರದ ಮಸಾಲೆ ಸೇರಿಸಿ, ಬಾಕ್ಸಾಫೀಸಿನಲ್ಲಿ ಹಿಟ್ ಚಿತ್ರ ಮಾಡೂದೊಂದೇ ತೆಲಿವಳಗೆ ಇವ್ರಿಗೆಲ್ಲ’.

‘ಮಂದಿಗೆ ಯಾವುದು ಥಟ್ ಅಂತ ತಟ್ಟತದೆ ಅಂತಾ ವಸ್ತು ಇಟಗೊಂಡು ಸಿನಿಮಾ ಮಾಡತೀವಿ, ಅದ್ರಲ್ಲೇನು ತಪ್ಪು? ನಮ್ಮ ಸೇನೆಯ ಶೌರ್ಯವನ್ನು ಬಾಕ್ಸಾಫೀಸಿನಲ್ಲಿ ಮಾರಿಕೊಳ್ಳೋ ಹಕ್ಕು ನಮಗೈತಿ ಅಂತಾರವರು!’

‘ನಮ್ಮ ಸೈನ್ಯದವರೇನೋ ಆ ಪಾಕಿಗಳ ಡ್ರೋನ್ ದಾಳಿಯನ್ನು ಢಮಾರ್ ಅನ್ನಿಸ್ತಾರೆ. ಆದರೆ ಗಡಿಯೊಳಗೆ ಇಲ್ಲಿ ಸುಳ್ಳುಸುದ್ದಿಗಳ ದಾಳಿ ಮಾತ್ರ ನಿಲ್ಲಂಗಿಲ್ಲ. ಸುಳ್ಳು ಸುದ್ದಿಗಳನ್ನು ಪತ್ತೆ ಹಚ್ಚಿ ಢಮಾರ್ ಅನ್ನಿಸೋ ಡ್ರೋನ್ ಬೇಕಾಗೈತಿ ಈಗ’ ಬೆಕ್ಕಣ್ಣ ಗುರುಗುಟ್ಟಿತು.

‘ದೇಶದ ರಕ್ಷಣೆ ವಿಚಾರಕ್ಕೆ ಎಲ್ಲ ರಾಜಕೀಯ ಪಕ್ಷಗಳವರೂ ಒಮ್ಮತದಿಂದ ಕೈಜೋಡಿಸಿದ್ರಲ್ಲ... ಹಂಗೇನೇ ಭ್ರಷ್ಟಾಚಾರ, ಕೋಮುವಾದ, ಸುಳ್ಳುಸುದ್ದಿಗಳನ್ನೂ ಎಲ್ಲಾರೂ ಸೇರಿ ಢಮಾರ್ ಅನ್ನಿಸಬೇಕು’ ನಾನೂ ಜೋರಾಗಿ ಹೇಳಿದೆ.

‘ಅಗದಿ ಭಯಂಕರ ಆದರ್ಶ ದೇಶದ ಕನಸು ಕಾಣಬ್ಯಾಡ!’ ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

ಸಂಗತ

ಬೌದ್ಧಿಕ ನಾಯಕತ್ವದ ನಲ್ದಾಣ?

ಜಾಗತಿಕ ಮಟ್ಟದ ಶ್ರೇಷ್ಠ ವಿಶ್ವವಿದ್ಯಾಲಯವಾಗುವ ಸದವಕಾಶ ಇದೀಗ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಮುಂದೆ ಇದೆ

• ಪ್ರೊ. ಎಸ್.ಜಾಫೆಟ್

ಪ್ರಪಂಚದ ವಿವಿಧ ದೇಶಗಳಲ್ಲಿ ನಗರಕೇಂದ್ರಿತ ವಿಶ್ವವಿದ್ಯಾಲಯಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಸಿಟಿ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್, ಸಿಟಿ ಯೂನಿವರ್ಸಿಟಿ ಆಫ್ ಲಂಡನ್, ಯೂನಿವರ್ಸಿಟಿ ಆಫ್ ಟೊರಾಂಟೊ, ಆರಿಜಾನ ಸ್ಟೇಟ್ ಯೂನಿವರ್ಸಿಟಿಯಂತಹ ವಿಶ್ವದರ್ಜೆಯ 23 ವಿಶ್ವವಿದ್ಯಾಲಯಗಳಿದ್ದು, ಇವು ಒಂದು ಒಕ್ಕೂಟವಾಗಿ ಕಾರ್ಯನಿರ್ವಹಿಸುತ್ತಿವೆ. ಉತ್ಕೃಷ್ಟ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಮೂಲಕ ಜಾಗತಿಕ ಮನ್ನಣೆಯನ್ನು ಗಳಿಸಿಕೊಂಡಿವೆ.

ಮಹತ್ವದ ಸಂಗತಿಯೆಂದರೆ, ಈ ವಿಶ್ವವಿದ್ಯಾಲಯಗಳು ತಾವು ನೆಲೆಗೊಂಡ ಮಹಾನಗರಗಳು ವಾಣಿಜ್ಯ, ಸಮಾಜೋ–ಆರ್ಥಿಕ, ಹವಾಮಾನ ಬದಲಾವಣೆ, ಇಂಧನ, ಕುಡಿಯುವ ನೀರು, ವಲಸೆ, ಸಾರಿಗೆ, ಸೈಬರ್ ಸೆಕ್ಯೂರಿಟಿಯಂತಹ ಕ್ಷೇತ್ರಗಳಲ್ಲಿ ಎದುರಿಸುತ್ತಿರುವ ಸವಾಲುಗಳ ಕುರಿತು ಸಂಶೋಧನೆ, ಸಂವಾದಗಳನ್ನು ಕೈಗೊಳ್ಳುತ್ತವೆ. ಇದರಿಂದ ಹೊರಬರುವ ಫಲಿತಾಂಶವನ್ನು ಆಡಳಿತ ವ್ಯವಸ್ಥೆಯೊಂದಿಗೆ ಹಂಚಿಕೊಳ್ಳುವ ಮೂಲಕ ಆ ನಗರಗಳು ಆರ್ಥಿಕ ಸುಸ್ಥಿರತೆ ಮತ್ತು ಅಭಿವೃದ್ಧಿಯ ವೇಗ ಕಾಯ್ದುಕೊಳ್ಳುವಲ್ಲಿ ನೆರವಾಗುತ್ತವೆ. ಅಲ್ಲದೆ ಅಲ್ಲಿನ ಕೈಗಾರಿಕಾ ವಿಸ್ತರಣೆ ಮತ್ತು ಅಭಿವೃದ್ಧಿಗೆ ಅಗತ್ಯವಿರುವ ಕೌಶಲಾಧಾರಿತ ಪಠ್ಯಕ್ರಮಗಳನ್ನು ಅನುಷ್ಠಾನಗೊಳಿಸಿವೆ ಹಾಗೂ ಮಾನವ ಸಂಪನ್ಮೂಲವನ್ನು ಸೃಷ್ಟಿಸುವ ಕಾರ್ಯದಲ್ಲಿ ತೊಡಗಿವೆ.

ಈ ದಿಸೆಯಲ್ಲಿ, ಭಾರತದ ಮೊದಲ ನಗರಕೇಂದ್ರಿತ ವಿಶ್ವವಿದ್ಯಾಲಯವಾಗುವ ಚಾರಿತ್ರಿಕ ಅವಕಾಶ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಒದಗಿಬಂದಿದೆ. ಬೆಂಗಳೂರು ವಿಶ್ವವಿದ್ಯಾಲಯದಿಂದ 2017ರಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯವಾಗಿ ಪ್ರತ್ಯೇಕಗೊಂಡು, ಈ ವರ್ಷ ಡಾ. ಮನಮೋಹನ್ ಸಿಂಗ್ ಅವರ ಹೆಸರಿನಲ್ಲಿ ಮರುನಾಮಕರಣಗೊಂಡಿರುವ ಈ ಸಂಸ್ಥೆಯು ಜಾಗತಿಕ ಮಟ್ಟದ ಶ್ರೇಷ್ಠ ಶೈಕ್ಷಣಿಕ ಕೇಂದ್ರವಾಗಿ ಬೆಳೆಯಲು ಅಗತ್ಯವಾದ ಎಲ್ಲ ಅನುಕೂಲ ಹಾಗೂ ಸಾಮರ್ಥ್ಯವನ್ನು ಹೊಂದಿದೆ. ಮುಖ್ಯವಾಗಿ ಈ ವಿಶ್ವವಿದ್ಯಾಲಯದ ಕೇಂದ್ರಸ್ಥಾನ ಬೆಂಗಳೂರಿನ ಹೃದಯಭಾಗದಲ್ಲಿದೆ. 167 ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ಸೆಂಟ್ರಲ್ ಕಾಲೇಜಿನ ಬೃಹತ್ ಕಟ್ಟಡಗಳು ಮತ್ತು ನವೀಕೃತ ಕ್ಯಾಂಪಸ್ ಇಲ್ಲಿನ ಪ್ರಥಮ ಆಕರ್ಷಣೆ.

ಸುಮಾರು 275 ಸಂಯೋಜಿತ ಕಾಲೇಜುಗಳು ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿದ್ದು, 3 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಸರ್ಕಾರಿ ಕಲಾ ಕಾಲೇಜು ಮತ್ತು ಆರ್.ಸಿ. ಕಾಲೇಜನ್ನು ಸರ್ಕಾರವು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಘೋಷಿಸಿರುವುದು ಸ್ನಾತಕ ಅಧ್ಯಯನದ ಗುಣಾತ್ಮಕ ಮಾದರಿಯನ್ನು ಕಾಯ್ದುಕೊಳ್ಳಲು ಅನುವು ಮಾಡಿಕೊಟ್ಟಿದೆ. ಐಐಎಸ್ಸಿ, ಸಿ.ವಿ.ರಾಮನ್ ಸಂಶೋಧನಾ ಸಂಸ್ಥೆ, ಇಸ್ರೊ ಕೇಂದ್ರ ಕಚೇರಿ, ನಿಮ್ಹಾನ್ಸ್‌ನಂತಹ ಜಾಗತಿಕ ಸಂಸ್ಥೆಗಳೊಂದಿಗೆ ಕಲಿಕಾ ಒಡಂಬಡಿಕೆಯ ಮೂಲಕ ವಿಶ್ವವಿದ್ಯಾಲಯವು ವೃತ್ತಿಪರ ಸಂಶೋಧನೆಯ ಗುಣಮಟ್ಟವನ್ನು ಕಾಯ್ದುಕೊಳ್ಳಬಹುದು.

ದೇಶದ ಎಲ್ಲ ಭಾಗಗಳಿಂದಲೂ ಪ್ರತಿಭಾವಂತ ಯುವಜನ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ವಲಸೆ ಬರುತ್ತಿರುವ ವಿದ್ಯಮಾನದಿಂದ ಬೆಂಗಳೂರು ದಿನೇ ದಿನೇ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತಿದೆ. ಈ ಬೆಳವಣಿಗೆಯಿಂದ ಮೂಲಭೂತ ಅಗತ್ಯಗಳ ಮೇಲೆ ಬೀಳುತ್ತಿರುವ ಅಧಿಕ ಒತ್ತಡವನ್ನು ನಿಭಾಯಿಸುವುದು ನಗರಾಡಳಿತಕ್ಕೆ ದೊಡ್ಡ ಸವಾಲಾಗಿದೆ. ನಗರದ ಇಂತಹ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಕೆಲಸವನ್ನು ವಿಶ್ವವಿದ್ಯಾಲಯ ಕೈಗೊಳ್ಳಬೇಕು. ಮಹಾನಗರವನ್ನು ಔದ್ಯಮಿಕ ಅವಕಾಶಗಳ ಸ್ಥಳವನ್ನಾಗಿ ಪರಿವರ್ತಿಸಿದರಷ್ಟೇ ಸಾಲದು ಅದನ್ನು ಕಲೆ ಮತ್ತು ಮಾನವಿಕ ಜ್ಞಾನ ಸಂಗಮಿಸುವ ಸಾಂಸ್ಕೃತಿಕ ಆವರಣವಾಗಿಯೂ ರೂಪಿಸುವ ಕಾರ್ಯಕ್ಕೆ ಅದು ಮುಂದಾಗಬೇಕು.



70– 80ರ ದಶಕದಲ್ಲಿ ರಾಜ್ಯದಲ್ಲಿ ನಡೆದ ಜನಚಳವಳಿಗಳಿಗೆ ಸೆಂಟ್ರಲ್ ಕಾಲೇಜಿನ ಅಧ್ಯಾಪಕರು ಬೌದ್ಧಿಕ ಮಾರ್ಗದರ್ಶನ ಮಾಡಿದ್ದರು. ಆಡಳಿತವು ಜನಮುಖಿಯಾಗಿರುವಂತೆ ಎಚ್ಚರಿಸುವ ಸಂವಾದಗಳನ್ನು ನಡೆಸುತ್ತಿದ್ದರು. ಅಂತೆಯೇ ಈಗಲೂ ಈ ಕೇಂದ್ರವು ಜನಾಭಿಪ್ರಾಯದ ಮುಕ್ತ ವೇದಿಕೆಯಾಗಿ ಯುವ ಮನಸ್ಸುಗಳನ್ನು ಪ್ರೇರೇಪಿಸುವ ನಲ್ದಾಣ ಆಗಬೇಕು. ಕಲೆ ಮತ್ತು ಸೌಂದರ್ಯಶಾಸ್ತ್ರ ವಿಭಾಗಗಳನ್ನು ಆರಂಭಿಸುವ ಮೂಲಕ ಕಲೆ ಮತ್ತು ಸಮುದಾಯಗಳ ನಡುವಣ ಬೆಸುಗೆಯನ್ನು ಗಟ್ಟಿಗೊಳಿಸಬೇಕು.

ವಿಶ್ವವಿದ್ಯಾಲಯವು ತನ್ನ ಕಾಸ್ಮೊಪಾಲಿಟನ್ ಸ್ವರೂಪವನ್ನು ಉಳಿಸಿಕೊಂಡೇ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪರಂಪರೆಯನ್ನು ಉಳಿಸಿ ಬೆಳೆಸುವ ದೂರಗಾಮಿ ಪಠ್ಯಕ್ರಮಗಳನ್ನು ರೂಪಿಸಬೇಕು. ಹೊರ ರಾಜ್ಯ-ದೇಶಗಳಿಂದ ಉದ್ಯೋಗ ಅರಸಿ ಬರುವ ಜನರಿಗೆ ಕನ್ನಡ ಕಲಿಸುವ ಮತ್ತು ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ಪರಿಚಯಿಸುವ ಕಲಿಕಾ ಕೇಂದ್ರ ಪ್ರಾರಂಭಿಸಬೇಕು. ಬಹುಶಿಸ್ತೀಯವಾದ ಉತ್ಕೃಷ್ಟ ದರ್ಜೆಯ ಸಂಶೋಧನಾ ಬರಹಗಳನ್ನು ಪ್ರಕಟಿಸುವ ಪ್ರಸಾರಾಂಗವನ್ನು ಪ್ರಾರಂಭಿಸಬೇಕು. ಸರ್ಕಾರ ಸೃಜಿಸಿರುವ 162 ಬೋಧಕರ ಹುದ್ದೆಗಳನ್ನು ಕೂಡಲೇ ನೇಮಕ ಮಾಡುವುದು ಸರ್ಕಾರದ ಆದ್ಯತೆ ಆಗಬೇಕಾಗಿದೆ.

ಈ ಮೂಲಕ ಬೌದ್ಧಿಕ ನಾಯಕತ್ವವನ್ನು ನಿಭಾಯಿಸುವ ಹೊಣೆಯನ್ನು ವಿಶ್ವವಿದ್ಯಾಲಯ ಹೊರಬೇಕಿದೆ. ಅಂತಹ ಸಾಮರ್ಥ್ಯವನ್ನು ಅದು ಗಳಿಸಲಿ ಎನ್ನುವುದು ಶಿಕ್ಷಣ ತಜ್ಞರ ನಿರೀಕ್ಷೆಯಾಗಿದೆ.

ಲೇಖಕ: ವಿಶ್ರಾಂತ ಕುಲಪತಿ ಬೆಂಗಳೂರು ನಗರ ವಿಶ್ವವಿದ್ಯಾಲಯ

ವಾಚಕರ ವಾಣಿ

ಬೇಜವಾಬ್ದಾರಿ ಮೌಲ್ಯಮಾಪಕರಿಗೆ ಶಿಕ್ಷೆಯಾಗಲಿ

ಎಸ್ಎಸ್ಎಲ್‌ಸಿ ಫಲಿತಾಂಶ ಪ್ರಕಟವಾದಾಗ ಕನ್ನಡ ವಿಷಯದಲ್ಲಿ 13 ಅಂಕ ಪಡೆದಿದ್ದ ಬಳ್ಳಾರಿ ಜಿಲ್ಲೆಯ ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ ವಿದ್ಯಾರ್ಥಿನಿಯೊಬ್ಬಳಿಗೆ ಮರುಎಣಿಕೆಯಲ್ಲಿ 73 ಅಂಕ ಲಭಿಸಿದೆ ಎಂದು ವರದಿಯಾಗಿದೆ. ಇದರಿಂದ ಮೌಲ್ಯಮಾಪಕರ ಬೇಜವಾಬ್ದಾರಿ ವರ್ತನೆ ತಿಳಿದುಬರುತ್ತದೆ. ಶಿಕ್ಷಕರಾದವರು ಈ ರೀತಿ ಮಾಡುವುದು ಸರಿಯೇ? ಮೌಲ್ಯಮಾಪನ ಮಾಡಲು ಮನಸ್ಸಿಲ್ಲದಿದ್ದರೆ, ಅನಾರೋಗ್ಯ ಕಾಡುತ್ತಿದ್ದರೆ ಅಥವಾ ಅನಿವಾರ್ಯ ಕೆಲಸಗಳಿದ್ದರೆ ‘ಮೌಲ್ಯಮಾಪನ ಕಾರ್ಯ ಮಾಡುವುದಿಲ್ಲ’ ಎಂದು ಲಿಖಿತವಾಗಿ ಮನವಿ ಸಲ್ಲಿಸಲಿ. ಅದನ್ನು ಸರ್ಕಾರ ಪುರಸ್ಕರಿಸಲಿ. ಅಂತೆಯೇ ಸರ್ಕಾರ ಕೂಡ ಅಂತಹವರ ಮೇಲೆ ಒತ್ತಡ ಹಾಕದಿರಲಿ.

ಇಂತಹ ಪ್ರಕರಣಗಳಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾದೆವು ಎಂದು ಭಾವಿಸಿ ತೀವ್ರವಾಗಿ ಮನಸ್ಸಿಗೆ ಹಚ್ಚಿಕೊಂಡರೆ ಅದಕ್ಕೆ ಹೊಣೆ ಯಾರು? ಮೌಲ್ಯಮಾಪಕರ ಮೇಲೆ ಒತ್ತಡ ಹಾಕದೆ ಮೌಲ್ಯಮಾಪನಕ್ಕೆ ಹೆಚ್ಚು ಸಮಯ ನೀಡುವುದೂ ಅವಶ್ಯ. ಅಂತೆಯೇ ಬೇಜವಾಬ್ದಾರಿಯಿಂದ ವರ್ತಿಸುವ ಮೌಲ್ಯಮಾಪಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ತಪ್ಪು ಮಾಹಿತಿ ಬಿತ್ತರಿಸುವುದು ತರವಲ್ಲ

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ನಂತರದಲ್ಲಿ ಭಾರತ ಕೈಗೊಂಡ ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಕೆಲವು ಸುದ್ದಿಮಾಧ್ಯಮಗಳು ಸುಳ್ಳುಸುದ್ದಿಗಳನ್ನು ಹೆಚ್ಚು ಪ್ರಚಾರ ಮಾಡುವುದರಲ್ಲಿ ತೊಡಗಿಕೊಂಡಿವೆ. ಜನರಿಗೆ ಹೇಳಬೇಕಾದ ವಿಷಯವನ್ನು ಹೇಳದೆ, ಉತ್ಪ್ರೇಕ್ಷೆಯಿಂದ, ಊಹಾಪೋಹಗಳ ಆಧಾರದ ಮೇಲೆ, ದೃಢಪಡದ ಮಾಹಿತಿಯನ್ನು ತಾವು ಖುದ್ದು ಕಂಡಂತೆ ಪ್ರಸಾರ ಮಾಡುತ್ತಿರುವುದು ತಪ್ಪಲ್ಲವೇ? ಇದು ಸುದ್ದಿ ಮಾಧ್ಯಮಕ್ಕೆ ಮಾತ್ರ ಸೀಮೀತವಾಗಿರದೆ ವಿವಿಧ ಸಾಮಾಜಿಕ ಜಾಲತಾಣಗಳು ಸಹ ಲೈಕ್, ಶೇರ್, ಹೆಚ್ಚು ವ್ಯೂಸ್ ಪಡೆದುಕೊಳ್ಳುವ ಹುಚ್ಚಿನಲ್ಲಿ ತಪ್ಪು ಮಾಹಿತಿ ಹಂಚುವುದನ್ನೇ ಕಾಯಕವನ್ನಾಗಿಸಿಕೊಂಡಿವೆ.

ವಿದೇಶಾಂಗ ಕಾರ್ಯದರ್ಶಿ ತಮ್ಮ ಮೂರು ಪ್ರತಿಕಾಗೋಷ್ಠಿಗಳಲ್ಲೂ ಹಂಚಿಕೊಳ್ಳದ ಮಾಹಿತಿಗಳನ್ನು ಮಾಧ್ಯಮಗಳು ಸ್ವತಃ ಕಂಡಂತೆ, ತಾವೇ ಕಾರ್ಯಾಚರಣೆಯಲ್ಲಿ ಭಾಗವಹಿಸಿದಂತೆ ಬಿತ್ತರಿಸಿದವು. ಪಾಕಿಸ್ತಾನಕ್ಕೆ ಹೋಗದೆಯೂ ಅಲ್ಲಿಯ ಮಾಹಿತಿಯನ್ನು ಯಥಾವತ್ತಾಗಿ ಕಂಡಂತೆ ಬಿತ್ತರಿಸಲು ಹೇಗೆ ಸಾಧ್ಯ? ಜನ ಮೂರ್ಖರಲ್ಲ, ಯುದ್ಧವೆಂದರೆ ವಿಡಿಯೊ ಗೇಮ್ ಅಲ್ಲ. ಯುದ್ಧ ಮಾತ್ರವಲ್ಲ, ಇತ್ತೀಚೆಗೆ ಪ್ರತಿ ಸೂಕ್ಷ್ಮ ವಿಷಯವನ್ನೂ ಉದ್ವೇಗಭರಿತವಾಗಿ ಬಿತ್ತರಿಸಲಾಗುತ್ತಿದೆ. ಇದೊಂದು ಅಹಿತಕರ ಬೆಳವಣಿಗೆ. ಇಂತಹ ಮಾಧ್ಯಮಗಳು ಇನ್ನಾದರೂ ಈ ಪ್ರವೃತ್ತಿಯಿಂದ ಮುಕ್ತವಾಗಬೇಕಿದೆ.

ಸುರೇಂದ್ರ ಪೈ, ಭಟ್ಕಳ

ಅಕ್ರಮ ಗಣಿಗಾರಿಕೆ: ನಷ್ಟ ವಸೂಲಿ ಸೂಕ್ತ

‘ನಷ್ಟ ವಸೂಲಿ ಮುಖ್ಯ, ಇಲ್ಲದಿದ್ದರೆ ಜೈಲಿಗೆ ಹೋಗಿ ಬಂದರೆ ಆಯಿತು ಎಂಬ ಮನೋಭಾವ ಬರುತ್ತದೆ’ ಎಂದು, ಅಕ್ರಮ ಗಣಿಗಾರಿಕೆಗಾಗಿ ಜೈಲು ಶಿಕ್ಷೆಗೆ ಗುರಿಯಾಗಿರುವ ಜನಾರ್ದನ ರೆಡ್ಡಿ ಅವರಿಂದ ನಷ್ಟ ವಸೂಲಿ ಮಾಡಬೇಕೆಂಬ ಆಗ್ರಹಕ್ಕೆ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು ಪ್ರತಿಕ್ರಿಯಿಸಿರುವುದು (ಪ್ರ.ವಾ., ಮೇ 11) ಅಕ್ಷರಶಃ ಕಟುಸತ್ಯ ಮತ್ತು ಆಚರಣಾರ್ಹ.

ಸಾಮಾನ್ಯ ಜನ ಕಾನೂನು ಉಲ್ಲಂಘಿಸಿದರೆ ಅವರ ವಿರುದ್ಧ ಉಗ್ರ ಕ್ರಮ ಕೈಗೊಂಡು, ಸರ್ಕಾರಕ್ಕೆ ಆದ ನಷ್ಟವನ್ನು ಅವರಿಂದ ವಸೂಲಿ ಮಾಡಲು ಸರ್ಕಾರಗಳು ಹಿಂಜರಿಯುವುದಿಲ್ಲ. ಪ್ರಭಾವಿ ವ್ಯಕ್ತಿಗಳ ವಿಷಯದಲ್ಲೂ ಹಾಗೆಯೇ ಮಾಡಬೇಕು. ಆಗ ಮುಂದಿನ ದಿನಗಳಲ್ಲಿ ಅಂತಹ ತಪ್ಪುಗಳು ಮರುಕಳಿಸುವುದನ್ನು ತಡೆಯಬಹುದು. ಅಂತಹ ಪ್ರಭಾವಿಗಳು ಯಾವುದೇ ಜಾತಿ, ಮತ, ಧರ್ಮ, ವೃತ್ತಿ, ರಾಜಕೀಯ ಪಕ್ಷಕ್ಕೆ ಸೇರಿದವರಾಗಿದ್ದರೂ ಭೇದವಿಲ್ಲದೆ ಅವರ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಾದರೂ ಸರಿಯೇ ಸರ್ಕಾರಕ್ಕಾಗಿರುವ ನಷ್ಟವನ್ನು ಸರಿದೂಗಿಸಿಕೊಳ್ಳಬೇಕು. ಇಂತಹ ಇಚ್ಛಾಶಕ್ತಿಯನ್ನು ಸರ್ಕಾರದ ಮಂದಿ ಮೈಗೂಡಿಸಿಕೊಳ್ಳಬೇಕು. ಹಾಗಾದಲ್ಲಿ ಮಾತ್ರ ವಿವಿಧ ತನಿಖಾ ಸಂಸ್ಥೆಗಳು ಮತ್ತು ನ್ಯಾಯಾಲಯಗಳ ತೀರ್ಪುಗಳಿಗೆ ಮನ್ನಣೆ ಕೊಟ್ಟಂತೆ ಆಗುತ್ತದೆ.

ರಮೇಶ್, ಬೆಂಗಳೂರು

ಸೋನು ಪ್ರಕರಣ: ವೃತ್ತಿಪರ ಅಲ್ಲದ ನಿರ್ಧಾರ

ಗಾಯಕ ಸೋನು ನಿಗಮ್ ಹಾಡಿಗೆ ಕತ್ತರಿ (ಪ್ರ.ವಾ., ಮೇ 8) ಹಾಗೂ ‘ಕ್ಷಮೆ ಸಾಲದು, ಪರಿಣಾಮ ಎದುರಿಸಬೇಕು’ (ಪ್ರ.ವಾ., ಮೇ 9) ಎಂಬ ಸುದ್ದಿಗಳನ್ನು ಓದಿದಾಗ, ಈ ಪ್ರಕರಣದಲ್ಲಿ ಕ್ರಿಯೆ, ಪ್ರತಿಕ್ರಿಯೆ ಎರಡೂ ಅತಿ ಆಯಿತು ಎನಿಸಿತು. ಅದೊಂದು ಖಾಸಗಿ ಕಾರ್ಯಕ್ರಮ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಲ್ಲಿ ನಡೆದುದರ ಬಗೆಗೆ ನಿರ್ಣಯ ಕೈಗೊಂಡಿದ್ದು ಅನಗತ್ಯ ಹಾಗೂ ಅದರ ಕಾರ್ಯವ್ಯಾಪ್ತಿ ಮೀರಿದ್ದು. ಸೋನು ನಿಗಮ್ ಕನ್ನಡ ಹಾಡಿಗಾಗಿನ ಒತ್ತಾಯವನ್ನು ಪಹಲ್ಗಾಮ್ ಘಟನೆಗೆ ಹೋಲಿಸಿದ್ದು ತಪ್ಪು. ಅದಕ್ಕೆ ವಿವರಣೆ ಕೊಟ್ಟಿದ್ದಾರೆ. ಕನ್ನಡದ ಬಗ್ಗೆ ತಮ್ಮ ಅಭಿಮಾನವನ್ನು ಪುನರುಚ್ಚರಿಸಿದ್ದಾರೆ. ಆ ಕಾರ್ಯಕ್ರಮದಲ್ಲಿ ಒತ್ತಾಯಿಸಿದವರು ಎಲ್ಲ ಕನ್ನಡಿಗರನ್ನೂ ಪ್ರತಿನಿಧಿಸುತ್ತಾರೆ ಎನ್ನಲಾಗದು.

ಸೋನು ಕನ್ನಡದಲ್ಲಿ ಹಲವಾರು ಹಾಡುಗಳನ್ನು ಹಾಡಿದ್ದರೆ ಅದಕ್ಕೆ ಕನ್ನಡ ನಿರ್ಮಾಪಕ, ನಿರ್ದೇಶಕ, ಸಂಗೀತ ನಿರ್ದೇಶಕರು ಕಾರಣ. ಆ ಗಾಯಕರೇನೂ ಅವಕಾಶ ಕೇಳಿಕೊಂಡು ಬಂದಿರಲಿಲ್ಲ. ಶಿಕ್ಷೆ ನೀಡಲು ಹಾಡಿಗೆ ಕತ್ತರಿ ಹಾಕುತ್ತೇವೆ ಎನ್ನುವುದು ವೃತ್ತಿಪರ ನಿರ್ಧಾರ ಅಲ್ಲ. ಒಟ್ಟಾರೆ, ಕಡ್ಡಿಯನ್ನು ಗುಡ್ಡ ಮಾಡಿ ಕೆಲವರು ಪ್ರಚಾರ ಪಡೆಯುತ್ತಿದ್ದಾರೆ ಅಷ್ಟೇ. ಮಂಡಳಿ ತಾನು ಮಾಡಬೇಕಾದ ಕೆಲಸವನ್ನು ಮೊದಲು ಮಾಡಲಿ. ಉದಾಹರಣೆಗೆ, ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಸೌಲಭ್ಯಗಳನ್ನು ಉತ್ತಮಪಡಿಸಲಿ. ಬೆಂಗಳೂರಿನಲ್ಲಿ ಆಕರ್ಷಕ ಭವನ ಕಟ್ಟಿಕೊಂಡು ಕಾರ್ಯಕ್ರಮ ನಡೆಸಿದರೆ ಸಾಲದು. ಸಿನಿಮಾ ಬರೀ ಬಿಸಿನೆಸ್ ಅಲ್ಲ, ಒಂದು ಸಶಕ್ತ ಸಂವಹನ ಮಾಧ್ಯಮ ಕೂಡ ಎಂಬುದನ್ನು ಅದು ಮನಗಾಣಬೇಕಾಗಿದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರತ–ಬ್ರಿಟನ್ ಮಹತ್ವದ ಒಪ್ಪಂದ; ಬಹುತೇಕ ಸರಕು, ಸೇವೆಗಳ ಮೇಲಿನ ಸುಂಕ ಪರಸ್ಪರ ರದ್ದು

ಮುಕ್ತ ವ್ಯಾಪಾರಕ್ಕೆ ನಿರ್ಣಾಯಕ ಹೆಜ್ಜೆ



ಮೂರು ವರ್ಷಗಳ ಮಾತುಕತೆ ನಂತರ ಭಾರತ ಮತ್ತು ಬ್ರಿಟನ್ ನಡುವೆ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಅಂತಿಮಗೊಂಡಿದೆ. ಎರಡೂ ರಾಷ್ಟ್ರಗಳು ಇದನ್ನು ಚಾರಿತ್ರಿಕ ಎಂದು ಬಣ್ಣಿಸಿವೆ. ಜಗತ್ತಿನ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿರುವ ಭಾರತ ಮತ್ತು ಆರನೇ ದೊಡ್ಡ ಆರ್ಥಿಕತೆಯಾಗಿರುವ ಬ್ರಿಟನ್ ನಡುವಿನ ಈ ಒಪ್ಪಂದದಿಂದ ಸರಕು ಮತ್ತು ಸೇವೆಗಳ ದ್ವಿಪಕ್ಷೀಯ ವ್ಯಾಪಾರ ವೃದ್ಧಿಗೆ ಸಹಕಾರಿಯಾಗಲಿದೆ ಎಂದೂ ಹೇಳಲಾಗಿದೆ. ಬ್ರಿಟನ್‌ನ ಬಹುತೇಕ ವಸ್ತುಗಳು ಸುಂಕಮುಕ್ತವಾಗಿ ಭಾರತ ಪ್ರವೇಶಿಸುವುದಕ್ಕೆ ಅವಕಾಶ ನೀಡಲಾಗಿದೆ. ಕೆಲವು ಕೃಷಿ ಉತ್ಪನ್ನಗಳನ್ನು ಒಪ್ಪಂದದ ವ್ಯಾಪ್ತಿಯಿಂದ ಹೊರಗಿರಿಸಲಾಗಿದೆ

ಪ್ರಜಾವಾಣಿ ವಾರ್ತೆ

● **ಏನಿದು ಒಪ್ಪಂದ?**

ಬಹುತೇಕ ಸರಕು ಮತ್ತು ಸೇವೆಗಳನ್ನು ಸುಂಕರಹಿತವಾಗಿ ನಡೆಸುವ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಮಾಡಿಕೊಳ್ಳುವ ದಿಸೆಯಲ್ಲಿ ಭಾರತ ಮತ್ತು ಬ್ರಿಟನ್ ಮಾತುಕತೆ ಆರಂಭಿಸಿದ್ದು 2022ರ ಜನವರಿಯಲ್ಲಿ. ಮೂರು ವರ್ಷಗಳ ನಂತರ, 2025ರ ಮೇ 6ರಂದು ಮಾತುಕತೆ ಯಶಸ್ವಿಯಾಗಿದೆ ಎಂದು ಘೋಷಣೆ ಹೊರಬಿದ್ದಿದೆ. ಐರೋಪ್ಯ ಒಕ್ಕೂಟದಿಂದ ಹೊರಬಂದ ನಂತರದ ಅತಿದೊಡ್ಡ ಹಾಗೂ ಆರ್ಥಿಕವಾಗಿ ನಿರ್ಣಾಯಕವಾದ ವ್ಯಾಪಾರ ಒಪ್ಪಂದ ಇದು ಎಂದು ಬ್ರಿಟನ್ ಬಣ್ಣಿಸಿದೆ. ಪ್ರಸ್ತುತ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಅತಿ ಹೆಚ್ಚು ಸುಂಕ ವಿಧಿಸುವ ರಾಷ್ಟ್ರಗಳ ಪೈಕಿ ಭಾರತ ಒಂದಾಗಿದೆ. ಈ ಒಪ್ಪಂದದಿಂದ ಭಾರತಕ್ಕೆ ರಫ್ತಾಗುವ ಬ್ರಿಟನ್‌ನ ಶೇ 90ರಷ್ಟು ಉತ್ಪನ್ನಗಳ ಮೇಲಿನ ಸುಂಕ ಕಡಿತಗೊಳ್ಳಲಿದೆ. ಒಂದು ದಶಕದಲ್ಲಿ ಬ್ರಿಟನ್‌ನ ಶೇ 85ರಷ್ಟು ಉತ್ಪನ್ನಗಳು ಸುಂಕಮುಕ್ತವಾಗಲಿವೆ.

● **ಭಾರತದ ಉದ್ಯಮ ರಂಗಕ್ಕೆ ಏನು ಲಾಭವಾಗಲಿದೆ?**


ಭಾರತವು ರಫ್ತು ಮಾಡುವ ಎಲ್ಲ ಸರಕುಗಳಿಗೆ ಬ್ರಿಟನ್‌ನಲ್ಲಿ ಮಾರುಕಟ್ಟೆ ಲಭ್ಯವಾಗಲಿದೆ. ಭಾರತವು ಬ್ರಿಟನ್‌ಗೆ ರಫ್ತು ಮಾಡುವ ಶೇ 99ರಷ್ಟು ಉತ್ಪನ್ನಗಳು 'ಶೂನ್ಯ ಸುಂಕ'ದ ಮೂಲಕ ಆ ದೇಶ ತಲುಪಲಿವೆ. ಚರ್ಮ, ಪಾದರಕ್ಷೆ, ಸಿದ್ಧಉಡುಪು, ಜವಳಿ, ಆಭರಣ, ಪೀಠೋಪಕರಣ, ಕ್ರೀಡಾ ಸಾಮಗ್ರಿ, ರಾಸಾಯನಿಕಗಳು, ಯಾಂತ್ರಿಕ/ಎಲೆಕ್ಟ್ರಿಕಲ್ ವಸ್ತುಗಳು, ಖನಿಜಗಳು ಸೇರಿದಂತೆ ಸರಕುಗಳು ಶೂನ್ಯ ಸುಂಕದೊಂದಿಗೆ ಬ್ರಿಟನ್ ಪ್ರವೇಶಿಸಲಿವೆ. ಸದ್ಯ, ಇವುಗಳ ಮೇಲೆ ಶೇ 4–ಶೇ 16ರಷ್ಟು ಸುಂಕ ವಿಧಿಸಲಾಗುತ್ತಿದೆ. ಜತೆಗೆ, ದ್ವಿಪಕ್ಷೀಯ ವ್ಯಾಪಾರವನ್ನು ಅಭಿವೃದ್ಧಿಪಡಿಸಲು ಇದರಿಂದ ವಿಪುಲ ಅವಕಾಶಗಳು ಸಿಗಲಿವೆ. ಬ್ರಿಟನ್, ಭಾರತದ 16ನೇ ಅತಿ ದೊಡ್ಡ ವ್ಯಾಪಾರ ಪಾಲುದಾರನಾಗಿದ್ದರೆ, ಭಾರತವು ಬ್ರಿಟನ್‌ನ 11ನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ದೇಶ. ಎರಡೂ ರಾಷ್ಟ್ರಗಳ ನಡುವೆ ಪ್ರಸ್ತುತ ₹5 ಲಕ್ಷ ಕೋಟಿಯಷ್ಟು ದ್ವಿಪಕ್ಷೀಯ ವ್ಯಾಪಾರ ನಡೆಯುತ್ತಿದ್ದು, ಅದನ್ನು 2030ರ ಹೊತ್ತಿಗೆ ದ್ವಿಗುಣಗೊಳಿಸುವ ಉದ್ದೇಶ ಹೊಂದಲಾಗಿದೆ.


● **ಸೂಕ್ಷ್ಮ ವಲಯಗಳಿಗೆ ಭಾರತ ರಕ್ಷಣೆ ಒದಗಿಸಿದೆಯೇ?**

ಕೃಷಿ ಉತ್ಪನ್ನಗಳಾದ ಸೇಬು, ಚೀಸ್, ಓಟ್ಸ್, ಎಣ್ಣೆ, ಹಾಲಿನ ಉತ್ಪನ್ನಗಳು ಮುಂತಾದವನ್ನು ಒಪ್ಪಂದದಿಂದ ಹೊರಗಿಡಲಾಗಿದೆ. ಮುಕ್ತ ವ್ಯಾಪಾರ ಒಪ್ಪಂದದ 'ಶೂನ್ಯ ಸುಂಕ' ನೀತಿಯು ಇವುಗಳಿಗೆ ಅನ್ವಯಿಸುವುದಿಲ್ಲ. ಇದೇ ರೀತಿ ಕೈಗಾರಿಕಾ ಉತ್ಪನ್ನಗಳಾದ ಪ್ಲಾಸ್ಟಿಕ್, ವಜ್ರ, ಬೆಳ್ಳಿ, ಸ್ಮಾರ್ಟ್‌ಫೋನ್, ಟಿ.ವಿ.ಕ್ಯಾಮೆರಾ ಟ್ಯೂಬ್, ಆಪ್ಟಿಕಲ್ ಫೈಬರ್ಸ್ ಮುಂತಾದವನ್ನು ಕೂಡ ಒಪ್ಪಂದದಿಂದ ಹೊರಗಿಡಲಾಗಿದೆ.

ಸೇವಾ ವಲಯಕ್ಕೆ ಏನು ಲಾಭ?

ಎಫ್‌ಟಿಎಯಿಂದ ಸೇವಾ ವಲಯಕ್ಕೂ ಹಲವು ಅನುಕೂಲಗಳಾಗಲಿವೆ. ವ್ಯಾಪಾರದ ಉದ್ದೇಶಕ್ಕೆ ದೇಶಕ್ಕೆ ಭೇಟಿ ನೀಡುವವರು, ಕಾರ್ಪೊರೇಟ್ ಕ್ಷೇತ್ರದಲ್ಲಿ ತೊಡಗಿರುವವರು, ಗುತ್ತಿಗೆ ಸೇವೆಗಳ ಪೂರೈಕೆದಾರರು, ಸ್ವತಂತ್ರ ವೃತ್ತಿಪರರು ಮತ್ತು ಕಾರ್ಪೊರೇಟ್ ಉದ್ಯೋಗದ ಭಾಗವಾಗಿ ಭೇಟಿ ನೀಡುವ ಪಾಲುದಾರರು, ಹೂಡಿಕೆದಾರರು ಮತ್ತು ಅವರ ಮಕ್ಕಳಿಗೆ ಬ್ರಿಟನ್‌ಗೆ ಬಂದು ಹೋಗಲು ಅವಕಾಶ ನೀಡುವ ಬಗ್ಗೆ ಬ್ರಿಟನ್ ಭರವಸೆ ನೀಡಿದೆ. ಗುತ್ತಿಗೆ ಸೇವೆಗಳ ಪೂರೈಕೆಯ ಅಡಿಯಲ್ಲಿ ಬರುವ 36 ಉಪವಲಯಗಳು (ಯೋಗ ತರಬೇತುದಾರರು, ಶಾಸ್ತ್ರೀಯ ಸಂಗೀತಗಾರರು ಮತ್ತು ಪಾಕತಜ್ಞರು ಸೇರಿದಂತೆ ವರ್ಷಕ್ಕೆ 1,800 ಮಂದಿ) ಮತ್ತು ಸ್ವತಂತ್ರ ವೃತ್ತಿಪರರ ವಿಭಾಗದಲ್ಲಿ ಬರುವ 16 ಉಪವಲಯಗಳಲ್ಲಿ ತೊಡಗಿರುವವರ ಭೇಟಿಗೆ ಅನುಕೂಲ ಕಲ್ಪಿಸುವ ಭರವಸೆಯನ್ನೂ ಬ್ರಿಟನ್ ನೀಡಿದೆ.





ತನ್ನ ದೇಶದ ಉತ್ಪಾದಕರ ಹಿತ ಕಾಯುವ ಸಲುವಾಗಿ ಭಾರತವು ಮತ್ತಷ್ಟು ಕ್ರಮಗಳನ್ನು ಕೂಡ ಕೈಗೊಂಡಿದೆ. ತನ್ನ ಕೆಲವು ಸರಕುಗಳ ಮೇಲಿನ ಸುಂಕವನ್ನು ದೀರ್ಘಾವಧಿಯಲ್ಲಿ ನಿಧಾನಕ್ಕೆ ಕಡಿಮೆ ಮಾಡುವುದಕ್ಕೆ ಇಲ್ಲವೇ ರದ್ದು ಮಾಡುವುದಕ್ಕೆ ಸಮ್ಮತಿಸಿದೆ. ಇಂಥ ಸರಕುಗಳಲ್ಲಿ ಸೆರಾಮಿಕ್ಸ್, ಪೆಟ್ರೋಲಿಯಂ ಉತ್ಪನ್ನಗಳು, ಇಂಗಾಲ, ಫಾಸ್ಫರಸ್, ಕ್ಲೊರೊಸಲ್ಫ್ಯೂರಿಕ್ ಆ್ಯಸಿಡ್, ಸಲ್ಫ್ಯೂರಿಕ್ ಆ್ಯಸಿಡ್, ಬೋರಿಕ್ ಆ್ಯಸಿಡ್ ಮುಂತಾದ ರಾಸಾಯನಿಕಗಳು ಸೇರಿವೆ.

● **ಬ್ರಿಟನ್‌ಗೆ ಏನು ಲಾಭ?**

ಸ್ಕಾಚ್ ವಿಸ್ಕಿಯ ಮೇಲೆ ಪ್ರಸ್ತುತ ಶೇ 150ರಷ್ಟು ಸುಂಕ ವಿಧಿಸಲಾಗುತ್ತಿದ್ದು, ಆರಂಭದಲ್ಲಿ ಅದನ್ನು ಶೇ 75ಕ್ಕೆ ಮತ್ತು 10ನೇ ವರ್ಷದ ಹೊತ್ತಿಗೆ ಶೇ 40ಕ್ಕೆ ಇಳಿಸಲಾಗುವುದು. ವಿಸ್ಕಿ ಮಾರುಕಟ್ಟೆಯಲ್ಲಿ ಸ್ಕಾಚ್ ವಿಸ್ಕಿಯ ಪಾಲು ಶೇ 2.5 ಮಾತ್ರ. ಜತೆಗೆ, ಸುಂಕ ಇಳಿಕೆಯನ್ನು 10 ವರ್ಷಗಳಲ್ಲಿ ಮಾಡಲಾಗುತ್ತಿದೆ. ಹೀಗಾಗಿ ಇದು ದೇಶೀ ಮಾರುಕಟ್ಟೆಯ ಮೇಲೆ ಪರಿಣಾಮ ಬೀರುವುದಿಲ್ಲ ಎನ್ನಲಾಗುತ್ತಿದೆ. 2022ರ ದತ್ತಾಂಶದ ಪ್ರಕಾರ, ಭಾರತದ ಸುಂಕ ಕಡಿತದ ಮೌಲ್ಯವು ₹4,560 ಕೋಟಿ. ಹತ್ತು ವರ್ಷಗಳಲ್ಲಿ ಇದರ ಮೌಲ್ಯವು ದುಪ್ಪಟ್ಟಾಗಲಿದೆ ಎನ್ನಲಾಗಿದೆ. ಭಾರತವು ಜಗತ್ತಿನ ಅತಿ ಹೆಚ್ಚು ಜನಸಂಖ್ಯೆಯ ದೇಶವಾಗಿದ್ದು, ಬ್ರಿಟನ್‌ನ ಸರಕುಗಳಿಗೆ ಭಾರತ ಉತ್ತಮ ಮಾರುಕಟ್ಟೆಯಾಗಲಿದೆ ಎನ್ನುವುದು ಅದರ ಲೆಕ್ಕಾಚಾರ.

● **ಪೂರೈಕೆ ವಲಯವನ್ನೂ ಮುಕ್ತಗೊಳಿಸಲಾಗಿದೆಯೇ?**

ಹೌದು. ಆದರೆ, ಅದನ್ನು ಸೂಕ್ಷ್ಮವಲ್ಲದ, ಕೇಂದ್ರ ಮಟ್ಟದ ಸಂಸ್ಥೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ರಾಜ್ಯ ಮಟ್ಟದ ಮತ್ತು ಸ್ಥಳೀಯ ಸಂಸ್ಥೆಗಳನ್ನು ಇದರಿಂದ ಹೊರಗಿಡಲಾಗಿದೆ. ಸಾರ್ವಜನಿಕ ಸಂಸ್ಥೆಗಳಿಗೆ ಪೂರೈಕೆ ಮಾಡುವುದಕ್ಕೆ ಸಂಬಂಧಿಸಿದಂತೆ ₹200 ಕೋಟಿಗೂ ಹೆಚ್ಚು ಮೌಲ್ಯದ ದೇಶೀಯ ಟೆಂಡರ್‌ಗಳಲ್ಲಿ ಭಾಗವಹಿಸುವುದಕ್ಕೆ ಬ್ರಿಟನ್ ಪೂರೈಕೆದಾರರಿಗೆ ಅವಕಾಶ ನೀಡಲಾಗಿದೆ.

● **ಒಪ್ಪಂದ ಎಂದಿನಿಂದ ಜಾರಿಗೆ ಬರಲಿದೆ?**

ಒಪ್ಪಂದದ ಕಾನೂನು ಪ್ರಕ್ರಿಯೆ ಪೂರ್ಣಗೊಳ್ಳಲು ಇನ್ನೂ ಮೂರು ತಿಂಗಳು ಅಗತ್ಯವಿದೆ. ನಂತರ ಅದು ಭಾರತ ಮತ್ತು ಬ್ರಿಟನ್‌ನ ಸಂಸತ್‌ಗಳಲ್ಲಿ ಅಂಗೀಕಾರವಾಗಬೇಕು. ಅದಕ್ಕೆ ಸುಮಾರು ಒಂದು ವರ್ಷ ಹಿಡಿಸಬಹುದು ಎನ್ನಲಾಗುತ್ತಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಯುಕೆ ಪಾರ್ಲಿಮೆಂಟ್ ವೆಬ್‌ಸೈಟ್, ವಿಶ್ವ ಆರ್ಥಿಕ ವೇದಿಕೆ, ಸಂಸತ್ತಿನಲ್ಲಿ ಸಚಿವರ ಉತ್ತರ

14 ಒಪ್ಪಂದಗಳಿಗೆ ಸಹಿ

ಭಾರತವು ಈವರೆಗೆ 14 ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಿದೆ. ಇದರಲ್ಲಿ ನಿರ್ದಿಷ್ಟ ದೇಶ ಹಾಗೂ ಆಸಿಯಾನ್‌ನಂತಹ ರಾಷ್ಟ್ರಗಳ ಗುಂಪುಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳು ಸೇರಿವೆ

- ಭಾರತ–ಶ್ರೀಲಂಕಾ ಎಫ್‌ಟಿಎ
- ದಕ್ಷಿಣ ಏಷ್ಯಾ ಮುಕ್ತ ವ್ಯಾಪಾರ ಒಪ್ಪಂದ (ಎಸ್‌ಎಎಫ್‌ಟಿಎ) (ಇದರಲ್ಲಿ ಭಾರತ, ಪಾಕಿಸ್ತಾನ, ನೇಪಾಳ, ಶ್ರೀಲಂಕಾ, ಬಾಂಗ್ಲಾದೇಶ, ಭೂತಾನ್, ಮಾಲ್ದೀವ್ಸ್ ಮತ್ತು ಅಫ್ಗಾನಿಸ್ತಾನ ಸೇರಿವೆ)
- ಭಾರತ–ನೇಪಾಳ ವ್ಯಾಪಾರ ಒಪ್ಪಂದ
- ಭಾರತ–ಭೂತಾನ್ ವಾಣಿಜ್ಯ ಮತ್ತು ಸರಕು, ಸೇವೆಗಳ ವಿನಿಮಯ ಒಪ್ಪಂದ
- ಭಾರತ–ಥಾಯ್ಲೆಂಡ್ ಎಫ್‌ಟಿಎ
- ಭಾರತ- ದಕ್ಷಿಣ ಕೊರಿಯಾ ಸಿಇಪಿಎ
- ಭಾರತ–ಸಿಂಗಪುರ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ (ಸಿಇಸಿಎ)
- ಭಾರತ–ಏಷಿಯಾನ್ ಸಿಇಸಿಎ– ಸರಕುಗಳು, ಸೇವೆಗಳ ವ್ಯಾಪಾರ ಮತ್ತು ಬಂಡವಾಳ ಹೂಡಿಕೆ ಒಪ್ಪಂದ (ಬ್ರೂನೈ, ಕಾಂಬೋಡಿಯಾ, ಇಂಡೊನೇಷ್ಯಾ, ಲಾವೊಸ್, ಮಲೇಷ್ಯಾ, ಮ್ಯಾನ್ಮಾರ್, ಫಿಲಿಪ್ಪೀನ್ಸ್, ಸಿಂಗಪುರ, ಥಾಯ್ಲೆಂಡ್ ಮತ್ತು ವಿಯೆಟ್ನಾಂ)
- ಭಾರತ–ಜಪಾನ್ ಸಿಇಪಿಎ
- ಭಾರತ–ಮಾರಿಷಸ್ ಸಿಸಿಪಿಎ
- ಭಾರತ–ಯುಎಇ ಸಿಇಪಿಎ
- ಭಾರತ–ಆಸ್ಟ್ರೇಲಿಯಾ ಆರ್ಥಿಕ ಸಹಕಾರ ಮತ್ತು ವ್ಯಾಪಾರ ಒಪ್ಪಂದ (ಇಸಿಟಿಎ)
- ಭಾರತ- ಯುರೋಪಿನ ಮುಕ್ತ ವ್ಯಾಪಾರ ಒಕ್ಕೂಟ (ಇಎಫ್‌ಟಿಎ) ವ್ಯಾಪಾರ ಮತ್ತು ಆರ್ಥಿಕ ಪಾಲುದಾರಿಕೆ ಒಪ್ಪಂದ (ಟಿಇಪಿಎ)

ಮಾತುಕತೆ

ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಭಾರತ ಮಾತುಕತೆ ನಡೆಸುತ್ತಿದೆ. ಚಿಲಿಯೊಂದಿಗಿನ ಮಾತುಕತೆ ಅಂತಿಮ ಹಂತ ತಲುಪಿದೆ. ಐರೋಪ್ಯ ಒಕ್ಕೂಟ, ಒಮಾನ್, ಪೆರು, ನ್ಯೂಜಿಲೆಂಡ್ ಜೊತೆಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು, ಆಸ್ಟ್ರೇಲಿಯಾದೊಂದಿಗೆ ಸಿಇಸಿಎ ಮತ್ತು ಶ್ರೀಲಂಕಾದೊಂದಿಗೆ ಈಗಾಗಲೇ ಜಾರಿಯಲ್ಲಿರುವ ಒಪ್ಪಂದವನ್ನು ಇನ್ನಷ್ಟು ವಿಸ್ತರಿಸಲು ಚರ್ಚೆ ನಡೆಯುತ್ತಿದೆ.

ಕಾರುಗಳ ಬೆಲೆ ತಕ್ಷಣಕ್ಕೆ ಕಡಿಮೆಯಾಗದು

ಬ್ರಿಟನ್‌ನಲ್ಲಿ ತಯಾರಾಗುವ ಕಾರುಗಳ ಮೇಲಿನ ಸುಂಕವನ್ನು ಒಪ್ಪಂದದಲ್ಲಿ ಶೇ 100ರಿಂದ ಶೇ 10ಕ್ಕೆ ಇಳಿಸಲಾಗಿದೆ. ಇದು ಟಾಟಾ–ಜಾಗ್ವಾರ್ ಆ್ಯಂಡ್ ಲ್ಯಾಂಡ್‌ರೋವರ್‌ನಂತಹ (ಜೆಎಲ್‌ಆರ್) ಕಂಪನಿಗಳಿಗೆ ಅನುಕೂಲ ಕಲ್ಪಿಸಲಿದೆ. ಜೆಎಲ್‌ಆರ್, ರೋಲ್ಸ್–ರಾಯ್ಸ್, ಆಸ್ಟನ್ ಮಾರ್ಟಿನ್ ಮತ್ತು ಬೆಂಟ್ಲೆಯಂತಹ ಐಷಾರಾಮಿ ಕಾರುಗಳ ಬೆಲೆ ಕಡಿಮೆಯಾಗಲಿದೆ ಎಂದು ಹೇಳಲಾಗುತ್ತಿದೆ.

ಆದರೆ, ವಾಹನಗಳ ಮೇಲಿನ ಸುಂಕದ ಕಡಿತವು 10ರಿಂದ 15 ವರ್ಷಗಳಲ್ಲಿ ಕಡಿತಗೊಳ್ಳಲಿದೆ. ಪೆಟ್ರೋಲ್ ಮತ್ತು ಡೀಸೆಲ್ ಎಂಜಿನ್ ವಾಹನಗಳ ಮೇಲಿನ ಸುಂಕ ರಿಯಾಯಿತಿ ಮೊದಲೇ ನಿಗದಿಪಡಿಸಿದ ಕೋಟಾಕ್ಕೆ ಮಾತ್ರ ಅನ್ವಯವಾಗಲಿದೆ ಎಂದು ಮೂಲಗಳು ತಿಳಿಸಿವೆ. ಹಾಗಾಗಿ, ತಕ್ಷಣಕ್ಕೆ ಅಲ್ಲಿ ತಯಾರಾಗುವ ವಿಲಾಸಿ ಕಾರುಗಳ ಬೆಲೆ ಕಡಿಮೆಯಾಗದು ಎಂದು ಹೇಳಲಾಗುತ್ತಿದೆ. ಬ್ಯಾಟರಿಚಾಲಿತ ಕಾರುಗಳ ಕೋಟಾದ ಅಡಿಯಲ್ಲಿ ಆಮದು ಮಾಡುವ ಕಾರುಗಳಿಗೆ ನೀಡಲಾಗುವ ಸುಂಕದ ರಿಯಾಯಿತಿಯು ಕೆಲವು ಸಾವಿರ ಕಾರುಗಳಿಗೆ ಮಾತ್ರ ಸೀಮಿತವಾಗಿದೆ.

ರಾಷ್ಟ್ರೀಯ

ವಿಶ್ವ ಸುಂದರಿ ಸ್ಪರ್ಧೆ: ಈ ಬಾರಿಯೂ ಪಾಕ್ ಗೈರು



ಆಕರ್ಷಕ ಮೆರವಣಿಗೆ ಮತ್ತು ಸಾಂಪ್ರದಾಯಿಕ ಮೇಳದಲ್ಲಿ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಭಾರತ ಪ್ರತಿನಿಧಿಸುತ್ತಿರುವ ರಾಜಸ್ಥಾನದ ನಂದಿನಿ ಗುಪ್ತಾ ಅವರು ತ್ರಿವರ್ಣ ಧ್ವಜ ಹಿಡಿದು ಹೆಜ್ಜೆ ಹಾಕಿದರು

ಹೈದರಾಬಾದ್ (ಪಿಟಿಐ): ಜಾಗತಿಕ ಪ್ರಾತಿನಿಧ್ಯ ಬಿಂಬಿಸುವ 72ನೇ ವಿಶ್ವ ಸುಂದರಿ ಸ್ಪರ್ಧೆಗೆ ನಯನ ಮನೋಹರವಾದ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅಧಿಕೃತ ಚಾಲನೆ ಸಿಕ್ಕಿದೆ.

ಆಕರ್ಷಕ ಮೆರವಣಿಗೆ ಮತ್ತು ಸಾಂಪ್ರದಾಯಿಕ ಮೇಳದಲ್ಲಿ ವಿಶ್ವ ಸುಂದರಿಯರು ವಿಶಿಷ್ಟವಾದ ಉಡುಗೆ ತೊಟ್ಟು ಹೆಜ್ಜೆ ಹಾಕಿದರು. ಈ ಬಾರಿಯ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸುತ್ತಿರುವ ರಾಜಸ್ಥಾನದ ನಂದಿನಿ ಗುಪ್ತಾ ಅವರು ತ್ರಿವರ್ಣ ಧ್ವಜ ಹಿಡಿದು ಹೆಜ್ಜೆ ಹಾಕಿದ್ದು, ವಿಶಿಷ್ಟವಾಗಿತ್ತು.

ಈ ಸ್ಪರ್ಧೆಯಲ್ಲಿ ವಿಶ್ವ ಸುಂದರಿ ಪಟ್ಟವನ್ನು ತಮ್ಮದಾಗಿಸಿಕೊಳ್ಳಲು ಭಾರತ, ಶ್ರೀಲಂಕಾ, ನೇಪಾಳ ಹಾಗೂ ಬಾಂಗ್ಲಾದೇಶ ಸೇರಿದಂತೆ 110 ರಾಷ್ಟ್ರಗಳ ಸುಂದರಿಯರು ಪರಸ್ಪರ ಪೈಪೋಟಿಗೆ ಇಳಿದಿದ್ದಾರೆ. ಆದರೆ, ಈ ಬಾರಿಯೂ ಪಾಕಿಸ್ತಾನ ಭಾಗಿಯಾಗಿಲ್ಲ.

ಭಾರತ ಮತ್ತು ಪಾಕ್ ನಡುವಿನ ಬಿಕ್ಕಟ್ಟಿಗೂ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಪಾಕಿಸ್ತಾನದ ಪ್ರತಿನಿಧಿಗಳ ಗೈರಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಪಾಕಿಸ್ತಾನವು ಎಂದಿಗೂ ಭಾಗವಹಿಸಿಲ್ಲ. 72 ವರ್ಷಗಳ ವಿಶ್ವ ಸುಂದರಿ ಸ್ಪರ್ಧೆಯ ಇತಿಹಾಸದಲ್ಲಿ 2023ರಲ್ಲಿ ಎರಿಕಾ ರಾಬಿನ್ ಪಾಕಿಸ್ತಾನವನ್ನು ಪ್ರತಿನಿಧಿಸಿದ್ದರು. ಇದಕ್ಕೆ ಪಾಕ್‌ನಲ್ಲಿ ಭಾರಿ ವಿರೋಧ ವ್ಯಕ್ತವಾಗಿತ್ತು. ಜೊತೆಗೆ ಪಾಕಿಸ್ತಾನದ ಪ್ರತಿನಿಧಿ ಭಾಗವಹಿಸಿರುವುದು ನಾಚಿಕೆಗೇಡಿನ ಸಂಗತಿ ಎಂದು ಹಲವರು ಟೀಕಿಸಿದ್ದರು ಎಂದು ವಿಶ್ವ ಸುಂದರಿ ಸ್ಪರ್ಧೆಯ ಸಂಘಟಕರಲ್ಲೊಬ್ಬರು ಹೇಳಿದ್ದಾರೆ.

ಇಸ್ರೊ ನಿರ್ಮಿತ ರಾಕೆಟ್ ಬಳಕೆಗೆ ಅಮೆರಿಕ ಕಂಪನಿ ಒಲವು



ನವದೆಹಲಿ (ಪಿಟಿಐ): ಅಮೆರಿಕದ ಕಂಪನಿ ವ್ಯಾಸ್ಟ್, ಭೂ ಕಕ್ಷೆಯಲ್ಲಿ ತಾನು ನಿರ್ಮಿಸಲಿರುವ ಬಾಹ್ಯಾಕಾಶ ನಿಲ್ದಾಣಕ್ಕೆ ಗಗನಯಾನಿಗಳನ್ನು ಒಯ್ಯಲು ಭಾರತದ ರಾಕೆಟ್ ಬಳಸುವುದಕ್ಕೆ ಆಸಕ್ತಿ ವ್ಯಕ್ತಪಡಿಸಿದೆ.

ಇಲ್ಲಿ ನಡೆಯುತ್ತಿರುವ ಜಾಗತಿಕ ಬಾಹ್ಯಾಕಾಶ ಅನ್ವೇಷಣಾ ಸಮಾವೇಶದ ಸಂದರ್ಭದಲ್ಲಿ, ಕಂಪನಿಯ ಸಿಇಒ ಮ್ಯಾಕ್ಸ್ ಹೋಟ್ ಅವರು ಇಸ್ರೊ ವಿಜ್ಞಾನಿಗಳನ್ನು ಭೇಟಿ ಮಾಡಿ ಈ ಕುರಿತು ಚರ್ಚಿಸಿದ್ದಾರೆ.

ಕ್ಯಾಲಿಫೋರ್ನಿಯಾ ಮೂಲದ ಈ ಕಂಪನಿಯು ವಾಣಿಜ್ಯ ಉದ್ದೇಶದ ಬಾಹ್ಯಾಕಾಶ ನಿಲ್ದಾಣ ನಿರ್ಮಾಣ ಮಾಡುತ್ತಿರುವ ಜಗತ್ತಿನ ಮೊದಲ ಕಂಪನಿಯಾಗಿದೆ. ಸದ್ಯದ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವು (ಐಎಸ್‌ಎಸ್) 2031ರಲ್ಲಿ ತನ್ನ ಕಾರ್ಯಾಚರಣೆ ಸ್ಥಗಿತಗೊಳಿಸಲಿದೆ. ಆ ಬಳಿಕ, ವ್ಯಾಸ್ಟ್ ನಿರ್ಮಿಸುವ ಬಾಹ್ಯಾಕಾಶ ನಿಲ್ದಾಣವೇ ಪ್ರಮುಖವಾಗಲಿದೆ.

ಸುದ್ದಿಸಂಸ್ಥೆಗೆ ಸಂದರ್ಶನ ನೀಡಿರುವ ಹೋಟ್, 'ಮುಂದಿನವರ್ಷ ಮೇ ವೇಳೆಗೆ ಸ್ಪೇಸ್‌ಎಕ್ಸ್‌ನ 'ಫಾಲ್ಕನ್–9' ರಾಕೆಟ್ ಬಳಸಿ 'ಹೆವೆನ್–1' ಹೆಸರಿನ ಬಾಹ್ಯಾಕಾಶ ನಿಲ್ದಾಣ ಉಡ್ಡಯನ ಮಾಡುವ ಯೋಜನೆ ಹೊಂದಲಾಗಿದೆ' ಎಂದು ಹೇಳಿದ್ದಾರೆ.

'ಭಾರತ ಕೈಗೊಳ್ಳುತ್ತಿರುವ ಗಗನಯಾನ ಕಾರ್ಯಕ್ರಮದಿಂದ ಆಕರ್ಷಿತನಾಗಿದ್ದೇನೆ. ನಮ್ಮ ಬಾಹ್ಯಾಕಾಶ ನಿಲ್ದಾಣಕ್ಕೆ ಗಗನಯಾತ್ರಿಗಳನ್ನು ಕರೆದೊಯ್ಯಲು ಗಗನಯಾನ ಕಾರ್ಯಕ್ರಮದ ರಾಕೆಟ್‌ಗಳನ್ನು ಬಳಸಿಕೊಳ್ಳುವ ಸಾಧ್ಯತೆ ಕುರಿತು ಪರಿಶೀಲಿಸುತ್ತಿದ್ದೇವೆ' ಎಂದು ಹೇಳಿದ್ದಾರೆ.

ಇಸ್ರೊ ನಿರ್ಮಿತ ರಾಕೆಟ್ 'ಎಲ್‌ಎಂವಿ–3', ಗಗನಯಾನ ಕಾರ್ಯಕ್ರಮದ ನೌಕೆಯನ್ನು ಹೊತ್ತೊಯ್ಯಲಿದೆ. ಈ ಕಾರ್ಯಕ್ರಮವನ್ನು 2027ರ ಮೊದಲ ತ್ರೈಮಾಸಿಕದಲ್ಲಿ ಕಾರ್ಯಗತಗೊಳಿಸಲು ನಿಗದಿ ಮಾಡಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಭಾರತ–ಪಾಕಿಸ್ತಾನ ಸಂಘರ್ಷದಲ್ಲಿ ಕಾರಿ ಮೊಹಮ್ಮದ್ ಇಕ್ಬಾಲ್ ಎನ್ನುವವರು ಕಾಶ್ಮೀರದಲ್ಲಿ ಮೇ 7ರ ಬೆಳಿಗ್ಗೆ ಮೃತಪಟ್ಟಿದ್ದರು. ಅವರು ಮೋಸ್ಟ್ ವಾಂಟೆಡ್ ಟೆರರಿಸ್ಟ್ ಆಗಿದ್ದರು ಎಂದೂ 'ಲಷ್ಕರ್ ಎ ತಯಬಾ'ದ ಮುಖ್ಯ ಕಮಾಂಡರ್ ಆಗಿದ್ದರು; 'ಆಪರೇಷನ್ ಸಿಂಧೂರ' ಭಾಗವಾಗಿ ಭಾರತದ ಸೇನೆಯು ಅವರನ್ನು ಕೊಂದುಹಾಕಿದೆ ಎಂದೂ ರಿಪಬ್ಲಿಕ್ ಟಿ.ವಿ. ಸೇರಿದಂತೆ ಹಲವು ಭಾಷೆಗಳ ಹಲವು ಮುಖ್ಯವಾಹಿನಿ ಮಾಧ್ಯಮಗಳು ಚಿತ್ರಸಮೇತ ಸುದ್ದಿ ಪ್ರಸಾರ ಮಾಡಿದವು. ಆದರೆ, ಇದು ಸುಳ್ಳು ಸುದ್ದಿ.



✓ ಕಾರಿ ಮೊಹಮ್ಮದ್ ಇಕ್ಬಾಲ್ ಹೆಸರಿನ ಆಧಾರದಲ್ಲಿ ಹುಡುಕಾಟ ನಡೆಸಿದಾಗ, ಸಯೀದ್ ಅಹ್ಮದ್ ಹಬೀಬ್ ಎನ್ನುವವರು ಈ ಬಗ್ಗೆ ಮೇ 7ರಂದು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದು ಕಂಡುಬಂತು. 'ಪೂಂಛ್‌ನ ಜಾಮಿಯಾ ಜಿಯಾ–ಉಲ್–ಉಲೂಂನಲ್ಲಿ ಶಿಕ್ಷಕರಾಗಿದ್ದ ನಮ್ಮ ಪ್ರೀತಿಯ ಮೌಲಾನಾ ಕಾರಿ ಮೊಹಮ್ಮದ್ ಅವರು ಇತ್ತೀಚಿನ ಗಡಿ ಸಂಘರ್ಷಕ್ಕೆ ಬಲಿಯಾಗಿದ್ದಾರೆ. ಸಾವು ಸಂಭವಿಸಿದಾಗ ಅವರು ತಮ್ಮ ಕೊಠಡಿಯಲ್ಲಿದ್ದರು' ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದರು. ಮತ್ತಷ್ಟು ಹುಡುಕಾಟ ನಡೆಸಿದಾಗ, ಈ ಬಗ್ಗೆ ಜಿಲ್ಲಾ ಪೊಲೀಸರು ಕೂಡ ಸ್ಪಷ್ಟನೆ ನೀಡಿದ್ದು ಕಂಡಿತು. ಇಕ್ಬಾಲ್ ಅವರು ಸ್ಥಳೀಯ ಧಾರ್ಮಿಕ ಮುಖಂಡರಾಗಿದ್ದು, ಯಾವುದೇ ಉಗ್ರ ಸಂಘಟನೆಯೊಂದಿಗೆ ನಂಟು ಹೊಂದಿರಲಿಲ್ಲ ಎಂದು ಪ್ರಕಟಣೆ ನೀಡಿದ್ದಾರೆ. ಅವರ ಕುಟುಂಬದವರನ್ನೂ ಮಾತನಾಡಿಸಿರುವ ಆಲ್ಟ್ ನ್ಯೂಸ್ ಈ ಬಗ್ಗೆ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ಗುಂಡಣ್ಣ



ಮಣ್ಣಿನಿಂದ ಮಣ್ಣಿನೆಡೆಗೆ ಪಯಣ

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

192

ಏಕಕೋಶ ಅಮೀಬಾದಿಂದ ಹಿಡಿದು ಡೈನೋಸಾರ್‌ವರೆಗೆ, ಮಂಗನಿಂದ ಮಾನವನವರೆಗೆ ಸಕಲ ಚರಾಚರ ಜಗತ್ತು ಏನಿದೆ, ಎಲ್ಲವೂ ಮಣ್ಣಿನ ವಿಸ್ತಾರ. ಮಣ್ಣಿನ ವಿಸ್ತಾರವೇ ಜಗತ್ತು. ಜಗತ್ತಿನ ಸಂಕ್ಷಿಪ್ತ ರೂಪವೇ ಮಣ್ಣು. ಜಗತ್ತು ನಿರ್ಮಾಣ ಆಗಿದ್ದು ಐದು ತತ್ವಗಳಿಂದ: ಮಣ್ಣು, ನೀರು, ಅಗ್ನಿ, ಗಾಳಿ ಮತ್ತು ಬಯಲು. ಈ ಐದೇ ಐದು ತತ್ವಗಳಿಂದ ಜಗತ್ತು ನಿರ್ಮಾಣವಾಗಿದೆ. ನಮ್ಮ ದೇಹ ನಿರ್ಮಾಣ ಆಗಿದ್ದು ಇದೇ ಮಣ್ಣಿನಿಂದ. ನಮ್ಮ ಕಾಯದ ಕಣ್ಣು, ಕೈ ಕಾಲು ಎಲ್ಲವೂ ಮಣ್ಣಿನಿಂದಲೇ ನಿರ್ಮಾಣವಾಗಿದೆ. ನಮ್ಮ ಕೈ ಮುಟ್ಟುವ ವಿಷಯ ವಸ್ತುಗಳೂ ಮಣ್ಣು, ನಮ್ಮ ಕಾಲು ಮಣ್ಣು, ಕಾಲಿಡುವ ನೆಲ ಅದೂ ಮಣ್ಣು, ನಾವು ಉಣ್ಣುವ ಅನ್ನ ಮಣ್ಣು, ಕುಡಿಯುವ ನೀರೂ ಮಣ್ಣಿನಿಂದ ಆಗಿದ್ದೇ ಆಗಿದೆ. ನಮಗೆ ಕಾಣುವ ಬೆಳಕು ಮಣ್ಣು, ನಮ್ಮ ಬದುಕು ಮಣ್ಣು, ಜೀವನ ಅಂದರೆ ಮಣ್ಣಿನಿಂದ ಮಣ್ಣಿಗೆ ಪಯಣ ಅಷ್ಟೆ. ನಾವು ಹುಟ್ಟಿದ್ದು ಮಣ್ಣಿನಿಂದ. ಮಣ್ಣಿನಿಂದ ಮಣ್ಣಿಗೆ ಬಂದೆ. ಮಣ್ಣಿನಲ್ಲೇ ಬೆಳೆದೆ. ಮಣ್ಣಿಗಾಗಿ ಬಡಿದಾಡಿದೆ. ಕೊನೆಗೊಂದು ದಿನ ಮಣ್ಣಿನಲ್ಲೇ ಒಂದಾದೆ. ಅದಕ್ಕೆ ಅಲ್ಲಮ ಪ್ರಭು 'ಭೂತ ಭೂತವ ಕೂಡಿ ಅದ್ಭುತವಾಯಿತು' ಎಂದರು. ಐದೂ ತತ್ವಗಳು ಜಡ. ಅದರೆ ಅದರಿಂದ ಚೈತನ್ಯ ಉತ್ಪತ್ತಿ ಆಯಿತಲ್ಲ ಅದಕ್ಕೆ ಅಲ್ಲಮ ಪ್ರಭು ಅದ್ಭುತ ಎಂದು ಕರೆದರು.

ಇದು ಬರೀ ಮಣ್ಣಲ್ಲ. ನಾವು ಬರೀ ಮಣ್ಣು ಎಂದರೆ ಅದಕ್ಕೆ ಅರ್ಥವೇ ಇಲ್ಲ. ವಿಷ ಹಾಕಿದರೂ ಭೂಮಿ ಅಮೃತದಂತಹ ಹಣ್ಣು ಕೊಡುತ್ತದಲ್ಲ, ಅದು ಪವಾಡ. ಇದು ಬರೀ ಮಣ್ಣಲ್ಲವೋ, ಇದು ಬರೀ ಕಲ್ಲಲ್ಲವೋ, ಇದು ಬರೀ ಬಿಸಲಲ್ಲವೋ, ದೇವರ ಹೃದಯ. ಆನಂದಮಯ ಈ ಜಗ ಹೃದಯ ಎಂದು ಕವಿ ಹೇಳುತ್ತಾರೆ. ಜಗತ್ತಿನ ತುಂಬಾ ಭಗವಂತ ಆನಂದ ತುಂಬಿಟ್ಟಿದ್ದಾನೆ. ಆದರೆ, ಮನುಷ್ಯನಿಗೆ ಬದುಕಲು ಬರೋದಿಲ್ಲ. ಇದೇ ಮಣ್ಣು, ಇದೇ ಗಾಳಿ, ಇದೇ ಬೆಳಕು, ಇದೇ ನೀರು. ಪಶು ಪಕ್ಷಿ ಪ್ರಾಣಿಗಳು ಸಂತೋಷದಿಂದ ಬದುಕಿವೆ. ನಮಗೂ ಇದೇ ಆದರೂ ಅವು ಹೇಗೆ ಬದುಕಿವೆ, ನಾವು ಹೇಗೆ ಬದುಕಿದ್ದೇವೆ ನೋಡಿ. ಅವು ಜಗತ್ತನ್ನು ಅನುಭವಿಸಿವೆ. ಮನುಷ್ಯನಿಗೆ ಜಗತ್ತನ್ನು ಅನುಭವಿಸುವುದು ಗೊತ್ತಿಲ್ಲ. ಜೇನು ಹುಳುಗಳು ಹೂವಿನಿಂದ ಹೂವಿಗೆ ಹಾರಿ ಮಧು ತಯಾರಿಸುತ್ತವೆ. ಜೇನುಗಳು ಎಲ್ಲಿಯೇ ಮಧು ತಯಾರಿಸಿದರೂ ಮನುಷ್ಯ ಅದನ್ನು ಕಿತ್ತು ತಿನ್ನುತ್ತಾನೆ. ಒಂದು ಗಿಡ ಜೇನು ಹುಳವನ್ನು 'ಈ ಮನುಷ್ಯ ಎಲ್ಲ ಕಿತ್ತುಕೊಂಡು ತಿನ್ನುತ್ತಾನಲ್ಲ. ಆದರೂ ನೀನು ಯಾಕೆ ಮಧು ತಯಾರು ಮಾಡುತ್ತಿ' ಎಂದು ಕೇಳಿತು. ಅದಕ್ಕೆ ಜೇನು ನೊಣ 'ನಾನು ಮಾಡಿದ ಮಧುವನ್ನು ಮನುಷ್ಯ ಕಿತ್ತು ತಿನ್ನಬಹುದು. ಆದರೆ ಮಧು ತಯಾರಿಸುವ ಕಲೆ ನನ್ನೊಳಗೆ ಇದೆಯಲ್ಲ, ಅದನ್ನು ಕದಿಯಲು ಮನುಷ್ಯನಿಗೆ ಸಾಧ್ಯವಿಲ್ಲ' ಎಂದು ಉತ್ತರಿಸಿತು.

ನಿಸರ್ಗ ಅಷ್ಟು ಅದ್ಭುತ. ಇದೇ ಮಣ್ಣು, ಇದೇ ಗಾಳಿ, ಇದೇ ಬೆಳಕು ಉಳಿದೆಲ್ಲ ಪ್ರಾಣಿಗಳ ಬದುಕು ಸ್ವರ್ಗ. ನಮ್ಮದು ನರಕ. ನಮಗೆ ಬದುಕಲು ಬಂದಿಲ್ಲ. ನಿಸರ್ಗ ಏನು ಕೊಟ್ಟಿದೆ ಅದನ್ನು ಸಂತೋಷವಾಗಿ ಅನುಭವಿಸಲು ಬಂದಿಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮೇ 12, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಪೂರ್ಣಿಮಾ ಗಂ.22-26 ನಕ್ಷತ್ರ: ಸ್ವಾತಿ ಗಂ. 6-17 ಯೋಗ: ವರಿಯಾನ್ ಅಹೋರಾತ್ರ ಕರಣ: ವಿಷ್ಟಿ ಗಂ. 9-16, ಮೇಷ ಮಾಸದ 29 ನೇ ದಿನ.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-09 ಸೂರ್ಯಾಸ್ತ : 06-45
ಮುಸ್ಲಿಂ ದಿನಾಂಕ : 13 ಜುಲ್ಖಾಯದ್
ದಿನ ವಿಶೇಷ : ವೈಶಾಖಿ ಪೂರ್ಣಿಮಾ, ಬುದ್ಧ ಪೂರ್ಣಿಮಾ ,ಅದೃಷ್ಟ ಸಂಖ್ಯೆ : 9

ಮೇಷ: ಅದೃಷ್ಟ ದೇವತೆ ಕೈ ಹಿಡಿದಿದ್ದಾಳೆ. ನಿಮ್ಮ ವ್ಯಾಪಾರ ವ್ಯವಹಾರಗಳು ಅಧಿಕ ವರಮಾನ ತರಲಿವೆ. ಮಾತಿಗಿಂತ ಕೃತಿ ಮುಖ್ಯ ಎನ್ನುವ ರೀತಿಯಲ್ಲಿ ಸಾಮರ್ಥ್ಯ ತೋರಿಬರಲಿದೆ.

ವೃಷಭ: ಮಗನ ಮುಂದಿನ ಭವಿಷ್ಯಕ್ಕಾಗಿ ಸೈಟು ಕೊಳ್ಳುವ ಬಗ್ಗೆ ಮನೆಯವರ ಜತೆ ಮಾತುಕತೆ ಅಗತ್ಯ ಎನಿಸುವುದು. ಸಾರ್ವಜನಿಕ ಸಂಘ-ಸಂಸ್ಥೆಗಳ ಸಂಬಂಧಿಸಿದ ವ್ಯವಹಾರ ಬುದ್ಧಿವಂತಿಕೆಯಿಂದ ಪ್ರಾಪ್ತಿಯಾಗಲಿದೆ.

ಮಿಥುನ: ರಾಜಕೀಯ ವಲಯದಲ್ಲಿ ಪ್ರಮುಖ ಸ್ಥಾನ ಪಡೆಯಲು ತಯಾರಿ ನಡೆಸಬೇಕಾಗುವುದು. ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ ಕಾಣಲಿದೆ. ವ್ಯವಹಾರದಲ್ಲಿ ಸೋದರನನ್ನು ಸೇರಿಸಿಕೊಳ್ಳುವ ಬಗ್ಗೆ ಮೊದಲೇ ಯೋಚಿಸಿ.

ಕರ್ಕಾಟಕ: ಯಂತ್ರಗಳ ತಯಾರಿಕೆ ಮಾಡುವ ಕಂಪನಿಯ ಅಧಿಕಾರಿಗಳು ನೂತನ ಘಟಕಗಳನ್ನು ಆರಂಭಿಸುವ ಲಕ್ಷಣಗಳಿವೆ. ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಅಧ್ಯಯನಕ್ಕೆ ಆಸ್ಪದ ಸಿಗುತ್ತದೆ.

ಸಿಂಹ: ಕಾರ್ಯದೊತ್ತಡ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳ. ಹಿರಿಯ ಅಧಿಕಾರಿಗಳೊಬ್ಬರ ಭೇಟಿಯಿಂದ ಕಾರ್ಯಗಳು ಸರಾಗವಾಗಿ ನಡೆಯುವುದು. ಶ್ರೀಕ್ಷೇತ್ರಕ್ಕೆ ಹೋಗುವ ಯೋಜನೆ ಕಾರ್ಯರೂಪಕ್ಕೆ ತನ್ನಿರಿ.

ಕನ್ಯಾ: ವೃತ್ತಿಯಲ್ಲಿನ ಸ್ಪರ್ಧಾತ್ಮಕ ಪೈಪೋಟಿಯಲ್ಲಿ ಸಿಕ್ಕ ಗೆಲುವಿನಿಂದ ಹೆಚ್ಚಿನ ತೃಪ್ತಿ ಉಂಟಾಗಲಿದೆ. ಹೆಸರಾಂತ ಶಿಕ್ಷಣ ಸಂಸ್ಥೆಯಲ್ಲಿ ಬಹಳ ಸುಲಭವಾಗಿ ಅಧ್ಯಾಪಕ ವೃತ್ತಿ ದೊರೆಯುವ ಸಂಭವವಿದೆ.

ತುಲಾ: ಎಲ್ಲಾ ಕೆಲಸಗಳೂ ಉತ್ತಮ ಉದ್ದೇಶವನ್ನೇ ಹೊಂದಿರುವುದು. ಉದ್ಯಮಗಳಲ್ಲಿ ಹೆಚ್ಚಿನ ಶ್ರಮ ಅಗತ್ಯವೆನಿಸಲಿದೆ. ತೋಟದ ಕೆಲಸಗಳು ಯಾವುದೇ ಅಡೆತಡೆಗಳಿಲ್ಲದೆ ಸರಾಗವಾಗಿ ಮುಂದುವರಿಯುವುದು.

ವೃಶ್ಚಿಕ: ಈ ದಿನದ ಆರಂಭದಿಂದಲೂ ಯೋಚನೆಯಂತೆಯೇ ಕೆಲಸ ಕಾರ್ಯಗಳು ನಡೆಯುವುದು. ಸ್ವಯಂ ಸಾಮರ್ಥ್ಯದ ಬಗ್ಗೆ ಹೆಚ್ಚಿನ ವಿಶ್ವಾಸವಿರಲಿ. ಮಾನಸಿಕ ವ್ಯಥೆಗಳು ನಿವಾರಣೆಯಾಗುತ್ತವೆ.

ಧನು: ಸತತ ಪ್ರಯತ್ನದಿಂದ ಪರಸ್ಥಳದಲ್ಲಿ ವೃತ್ತಿಪರವಾಗಿ ಹೆಸರು, ಕೀರ್ತಿ ಸಂಪಾದಿಸಬಹುದು. ಸ್ವಯಂ ತೀರ್ಮಾನದಿಂದ ತೆಗೆದುಕೊಳ್ಳುವ ಔಷಧದಿಂದಲೇ ಆರೋಗ್ಯದಲ್ಲಿ ಏರುಪೇರುಗಳಾಗುವ ಸಾಧ್ಯತೆ ಇದೆ.

ಮಕರ: ರಾಸಾಯನಿಕ ವಸ್ತುಗಳನ್ನು ಬಳಸುವವರತ್ತ ಗಮನವಿರಲಿ. ಆತ್ಮೀಯರೊಂದಿಗಿನ ದೀರ್ಘಕಾಲದ ವಿವಾದಗಳು ಸಂಬಂಧವನ್ನು ಹಾಳುಮಾಡಬಹುದು. ದಲ್ಲಾಳಿಗಳಾಗುವ ಯೋಚನೆ ಸರಿಯಲ್ಲ.

ಕುಂಭ: ಸಕಾಲದಲ್ಲಿ ಕೆಲಸವನ್ನು ಮುಗಿಸುವತ್ತ ಮುತುವರ್ಜಿ ವಹಿಸಿ. ಅರ್ಧಕ್ಕೆ ನಿಂತಿರುವ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಶ್ರಮಿಸುವುದರಿಂದ ಒತ್ತಡ ಕಡಿಮೆಯಾಗುವುದು. ದೂರ ಪ್ರಯಾಣ ಮುಂದೂಡಿ.

ಮೀನ: ಸಂಗಾತಿಯೊಂದಿಗಿನ ಸಂಬಂಧವನ್ನು ಗಟ್ಟಿಮಾಡಿಕೊಳ್ಳಲು ಬಿಡುವಿಲ್ಲದ ಸಮಯದಲ್ಲಿ ಸಮಯ ನೀಡುವ ಪ್ರಯತ್ನ ಮಾಡಿ. ಬಂಧುಗಳಿಂದ ಉಡುಗೊರೆಯ ರೂಪದಲ್ಲಿ ದ್ರವ್ಯಲಾಭ.

ಪದಬಂಧ 6040

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚುಂಬನದೊಂದಿಗೆ ದೊರೆತ ರತ್ನ! (2)
2.ಆಯುಧಗಳನ್ನಿಡುವ ಕಟ್ಟಡ (4)
4.ಕಣದಲ್ಲಿ ಸಿಕ್ಕಿರುವ ಹತೋಟಿ (4)
6.ಕಾಲಸೂಚಕ ಯಂತ್ರ (4)
8.ಕುದುರೆ ಸವಾರ ಇಲ್ಲಿದ್ದಾನೆ (3)
9.ವಿಶೇಷವಾದ ಜ್ಞಾನ (3)
11.ಇದು ಸೂಕ್ತವಾದುದು (4)
13.ಮರದ ಹತ್ತಿರ ಸುತ್ತುತ್ತಿರುವ ದುಂಬಿ (4)
15.ಅತಿಶಯವಾದುದು ಮರದೊಳಗಿದೆ! (4)
16.ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ

1.ದುಮುಗುಟ್ಟುತ್ತಿರುವ ಅಜ್ಜ (3)
2.ಬಾಣ ಹಿಡಿದಿರುವ ಶೈವ ಭಕ್ತ (3)
3.ಗಾಣದಿಂದ ಎಣ್ಣೆ ತೆಗೆಯುವವನು (3)
5.ಕಾವು ಬಡಿದರೂ ತೋರಿಸಿದ ಡೌಲು! (3)
7.ರಸ ಒಸರುವ ಜಿಹ್ವೆ (3)
8.ರಾಯರಿಂದ ಬಂದಿರುವ ನಿರೂಪ (3)
10.ಪಕ ಪಕ ನಕ್ಕಾಗ ಬಂದ ನೆನಪು (3)
12.ಸಹನೀಯವೆನಿಸಿದ್ದಕ್ಕೇ ಇಷ್ಟು ಹತ್ತಿರ (3)
13.ಕನ್ನಡಿಗನ ಲೆನ್ಸು! (3)
14.ಮಣಿ ಧರಿಸಿದ ಚೆಲುವೆ (3)

1		■	2		3		■	■
	■	■		■		■	■	■
4	5			■	6			7
■		■	■	■	■	■	■	
8			■	■	■	9	10	
	■	■	■	■	■	■		■
11			12	■	13			14
■	■	■		■		■	■	
■	■	15				■	16	

6039ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಕವಾಡಿಗ 4.ಸಹಾಯ 5.ಜಾಡು 6.ಯೋಗ 7.ಕೋಲಾಹಲ 9.ಪ್ರತಿ 10.ಜ್ಞಾನ 11.ಬಾಚಣಿಕೆ 13.ತಿದಿ 14.ರಂಗು 15.ಓಲಗ 16.ಹಡಪಿಗ

ಮೇಲಿಂದ ಕೆಳಕ್ಕೆ: 1.ಸಹಾನುಭೂತಿ 2.ಕಡುದಾಹ 3.ಗಜಗಮನ 8.ಲಾವಣಿ 9.ಪ್ರಸೂತಿಗೃಹ 10.ಜ್ಞಾತಿಕಲಹ 12.ಚದುರಂಗ

ಸುಡೊಕು 6424

				5		7		2
		3	6		7			
		7		3		6		9
	6			1		8		7
7		9	5				1	
	8			9		3		5
	7		3		1			
5							7	3
	3		9		5		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6423 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ಠೇವಣಿ ಅಭಿಯಾನ ಫಲಪ್ರದ

10 ವಾರದಲ್ಲಿ ₹16,700 ಕೋಟಿ ಸಂಗ್ರಹ: ಕೆನರಾ ಬ್ಯಾಂಕ್

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ತನ್ನ ಉದ್ಯೋಗಿಗಳನ್ನು ಬಳಸಿಕೊಂಡು 10 ವಾರದಲ್ಲಿ ₹16,700 ಕೋಟಿ ಠೇವಣಿ ಸಂಗ್ರಹಿಸುವಲ್ಲಿ ಯಶಸ್ವಿಯಾಗಿದೆ.

ಬ್ಯಾಂಕ್‌ನಲ್ಲಿ 82 ಸಾವಿರ ಉದ್ಯೋಗಿಗಳಿದ್ದಾರೆ. ಪ್ರತಿಯೊಬ್ಬರಿಗೂ ಠೇವಣಿ ಸಂಗ್ರಹಿಸುವ ಗುರಿ ನೀಡಲಾಗಿತ್ತು. ಜನವರಿ 26ರಂದು ಈ ಅಭಿಯಾನಕ್ಕೆ ಚಾಲನೆ ನೀಡಲಾಗಿತ್ತು ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆ. ಸತ್ಯನಾರಾಯಣ ರಾಜು ಅವರು, ಪಿಟಿಐಗೆ ತಿಳಿಸಿದ್ದಾರೆ.

ಪ್ರತಿ ಉದ್ಯೋಗಿಯು ತನ್ನ ಸಂಬಂಧಿಕರು ಹಾಗೂ ತನ್ನ ಬಳಗದವರನ್ನು ಸಂಪರ್ಕಿಸಿ ₹10 ಲಕ್ಷ ಠೇವಣಿ ಸಂಗ್ರಹಿಸಬೇಕು. ಚಾಲ್ತಿ ಮತ್ತು ಉಳಿತಾಯ ಖಾತೆ ಅಥವಾ ಸ್ಥಿರ ಠೇವಣಿ ರೂಪದಲ್ಲಿ ಇಷ್ಟು ಮೊತ್ತ ಸಂಗ್ರಹಿಸುವಂತೆ ಸೂಚಿಸಲಾಗಿತ್ತು. ಹಾಗಾಗಿ, ಈ ಗುರಿ ಸಾಧನೆ ಆಗಿದೆ ಎಂದು ವಿವರಿಸಿದ್ದಾರೆ.


ಸತ್ಯನಾರಾಯಣ ರಾಜು

ಬ್ಯಾಂಕ್‌ನ ಆಡಳಿತ ಮಂಡಳಿಯು ಕೈಗೊಂಡ ಈ ಅಭಿಯಾನಕ್ಕೆ ಎಲ್ಲಾ ಉದ್ಯೋಗಿಗಳು ಸಹಕರಿಸಿದ್ದಾರೆ ಎಂದು ಹೇಳಿದ್ದಾರೆ.

ಕಳೆದ ಎರಡು, ಮೂರು ವರ್ಷಗಳಲ್ಲಿ ಉದ್ಯೋಗಿಗಳಿಗೆ ಬಡ್ತಿ, ಅವರ ಸಾಮರ್ಥ್ಯ ಗುರುತಿಸುವಿಕೆ, ವರ್ಗಾವಣೆ ವಿಷಯದಲ್ಲಿ ಪಾರದರ್ಶಕತೆ ಕಾಯ್ದುಕೊಂಡಿದ್ದೇವೆ. ಹಾಗಾಗಿ, ಠೇವಣಿ ಸಂಗ್ರಹ ಅಭಿಯಾನದ ಬಗ್ಗೆ ಅವರಿಗೆ ಮನವರಿಕೆ ಮಾಡಲಾಯಿತು. ಇದಕ್ಕೆ ನೌಕರರ ಸಂಘಟನೆಗಳು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿವೆ ಎಂದು ವಿವರಿಸಿದ್ದಾರೆ.

ಠೇವಣಿ ಸಂಗ್ರಹ ಅಭಿಯಾನದ ಫಲವಾಗಿ ಬ್ಯಾಂಕ್‌ನ ಸಾಲ ಮತ್ತು ಠೇವಣಿ ಅನುಪಾತವು (ಸಿ.ಡಿ) 2024–25ನೇ ಮಾರ್ಚ್ ತ್ರೈಮಾಸಿಕದಲ್ಲಿ ಶೇ 76ರಿಂದ ಶೇ 73ಕ್ಕೆ ತಗ್ಗಿದೆ ಎಂದು ಹೇಳಿದ್ದಾರೆ.

ಸಣ್ಣ ಮೊತ್ತದ ಠೇವಣಿ ಸಂಗ್ರಹಿಸುವ ಈ ಅಭಿಯಾನ ಫಲಪ್ರದಗೊಂಡಿದೆ. ಹಾಗಾಗಿ, ಬೃಹತ್ ಮೊತ್ತದ ಠೇವಣಿ ಸಂಗ್ರಹದ ಗುರಿ ಕಡಿಮೆಯಾಗಿದೆ. ಬ್ಯಾಂಕ್‌ನ ಒಟ್ಟು ಮೊತ್ತದ ಪ್ರಮಾಣವು ಶೇ 25ರಿಂದ ಶೇ 23ಕ್ಕೆ ತಗ್ಗಿದೆ ಎಂದಿದ್ದಾರೆ. ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲು ಬ್ಯಾಂಕ್ ಬದ್ಧವಾಗಿದೆ. ಮುಂದಿನ ಹಂತದಲ್ಲಿ ನಿಶ್ಚಿತ ಠೇವಣಿ (ಆರ್‌.ಡಿ) ಸಂಗ್ರಹಕ್ಕೆ ಒತ್ತು ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

100 ವಿಮಾನ ಹಾರಾಟ ರದ್ದು

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ನಡುವೆ ತಲೆದೋರಿರುವ ಸಂಘರ್ಷದಿಂದಾಗಿ ಸುರಕ್ಷತೆ ದೃಷ್ಟಿಯಿಂದ ದೆಹಲಿಯ ವಿಮಾನ ನಿಲ್ದಾಣದಲ್ಲಿ ಭಾನುವಾರ 100 ವಿಮಾನಗಳ ಹಾರಾಟವನ್ನು ರದ್ದುಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈಗಾಗಲೇ, ಭದ್ರತೆ ದೃಷ್ಟಿಯಿಂದ 32 ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ದೆಹಲಿ ವಿಮಾನ ನಿಲ್ದಾಣದ ಕಾರ್ಯಾಚರಣೆಗೆ ಯಾವುದೇ ಅಡ್ಡಿಯಾಗಿಲ್ಲ. ಆದರೆ, ಭದ್ರತೆ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ದೆಹಲಿ ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಡಿಐಎಎಲ್) 'ಎಕ್ಸ್'ನಲ್ಲಿ ತಿಳಿಸಿದೆ.

ಎಫ್‌ಪಿಐ: ₹14,167 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿಕೆಯನ್ನು ಮುಂದುವರಿಸಿದ್ದಾರೆ.

ಮೇ 9ರಂದು ಕೊನೆಗೊಂಡ ವಾರದಲ್ಲಿ ₹14,167 ಕೋಟಿ ಹೂಡಿಕೆ ಮಾಡಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷದ ಹೊರತಾಗಿಯೂ ಈಕ್ವಿಟಿ ಮಾರುಕಟ್ಟೆಯಲ್ಲಿ ಬಂಡವಾಳ ಒಳಹರಿವು ಪ್ರಮಾಣ ಹೆಚ್ಚಳವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಏಪ್ರಿಲ್‌ನಲ್ಲಿ ₹4,223 ಕೋಟಿ ಹೂಡಿಕೆಯಾಗಿತ್ತು.

ನಿವೃತ್ತಿ ಜೀವನಕ್ಕೆ ಸಜ್ಜಾಗಿದ್ದೀರಾ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ನೀವು ಉದ್ಯೋಗದಲ್ಲಿದ್ದೀರಾ? ನಿವೃತ್ತಿ ಜೀವನದ ಬಗ್ಗೆ ಆಲೋಚನೆ ಮಾಡಿದ್ದೀರಾ? ನೆಮ್ಮದಿಯ ನಿವೃತ್ತಿಗೆ ಎಷ್ಟು ಹಣದ ಅಗತ್ಯ ಅನ್ನೋ ಲೆಕ್ಕಾಚಾರ ಇದೆಯೇ? ನೀವು ಹೇಳಿ, ನಿವೃತ್ತಿ ಅಂತ ಅಲ್ಲಲ್ಲ ಹಣಕಾಸಿನ ಸ್ವಾತಂತ್ರ್ಯದ ಉಳಿಸಿದ್ದೀರಾ? ವಯಸ್ಸು 40ರ ಆಸುಪಾಸಿನಲ್ಲಿದ್ದರೆ ಪ್ರತಿಯೊಬ್ಬರು ಕೇಳಿಕೊಳ್ಳಬೇಕಾದ ಪ್ರಶ್ನೆಗಳಿವು.

ಹೌದು, ಇಲ್ಲಿಯವರೆಗೆ ನಿವೃತ್ತಿಗಾಗಿ ಉಳಿತಾಯ ಮಾಡಿಲ್ಲ ಅಂತಾದರೆ ಎಚ್ಚೆತ್ತುಕೊಂಡು ಅದನ್ನು ತಿದ್ದಿಕೊಳ್ಳಲು ಇದು ಸರಿಯಾದ ಸಮಯ. ಬನ್ನಿ, ನಿವೃತ್ತಿ ಜೀವನಕ್ಕೆ ಆರ್ಥಿಕವಾಗಿ ಸಜ್ಜಾಗುವುದು ಹೇಗೆ ಎಂಬ ಬಗ್ಗೆ ತಿಳಿಯೋಣ.

ನಿವೃತ್ತಿಗೆ ಎಷ್ಟು ಹಣ ಬೇಕು?: ಭಾರತದಲ್ಲಿ ಉದ್ಯೋಗಿಗಳ ಸಾಮಾನ್ಯ ನಿವೃತ್ತಿ ವಯಸ್ಸು 60 ವರ್ಷ. ನಿಮಗೆ ಈಗಾಗಲೇ 40 ವರ್ಷ ತುಂಬಿದ್ದು, ಇಲ್ಲಿಯವರೆಗೆ ನಿವೃತ್ತಿಗಾಗಿ ಯಾವುದೇ ಹೂಡಿಕೆ ಮಾಡಿಲ್ಲ ಅಂತಾದರೆ ಇನ್ನೂ 15 ವರ್ಷಗಳು ನಿಮ್ಮ ಮುಂದಿವೆ. ಸರಿಯಾಗಿ ಯೋಜನೆ ರೂಪಿಸಿದರೆ ಈಗಲೂ ನೆಮ್ಮದಿಯ ನಾಳೆಗಳಿಗೆ ನೀವು ಸಜ್ಜಾಗಬಹುದು.

ಒಮ್ಮೆ ಆಲೋಚನೆ ಮಾಡಿ. ನಿಮ್ಮ 25 ಅಥವಾ 30ನೇ ವಯಸ್ಸಿನಲ್ಲಿ ಬರುವ ಸಂಬಳಕ್ಕೂ 40ರ ಆಸುಪಾಸಿನಲ್ಲಿರುವ ಸಂಬಳಕ್ಕೂ ಸಾಕಷ್ಟು ವ್ಯತ್ಯಾಸವಿರುತ್ತದೆ ಅಲ್ಲವೇ? ಬಹುತೇಕರು 40ನೇ ವಯಸ್ಸಿನಲ್ಲಿ ಸಾಮಾನ್ಯವಾಗಿ ವೃತ್ತಿ ಜೀವನದ ಉನ್ನತ ಸ್ಥಾನದಲ್ಲಿದ್ದು, ಉತ್ತಮ ಸಂಬಳ ಪಡೆಯುತ್ತಿರುತ್ತಾರೆ. ಅದನ್ನು ಬಳಸಿಕೊಂಡು ಇನ್ನು ಹದಿನೈದರಿಂದ ಇಪ್ಪತ್ತು ವರ್ಷದವರೆಗೆ ಹೂಡಿಕೆ ಮಾಡಿದರೆ ನಿವೃತ್ತಿ ಜೀವನ ಸರಾಗವಾಗಿ ಸಾಗುತ್ತದೆ.

ನಿವೃತ್ತಿ ಜೀವನಕ್ಕೆ ಎಷ್ಟು ಹಣ ಬೇಕಾಗುತ್ತದೆ ಎನ್ನುವುದನ್ನು ಲೆಕ್ಕ ಮಾಡುವಾಗ ನಿಮ್ಮ ಸದ್ಯದ ವಾರ್ಷಿಕ ಖರ್ಚು ಎಷ್ಟು ಎನ್ನುವುದರ ಅಂದಾಜು ಮುಖ್ಯವಾಗುತ್ತದೆ. ಉದಾಹರಣೆಗೆ ನಿಮ್ಮ ವಯಸ್ಸು 40 ವರ್ಷ ಆಗಿದ್ದು, ಸದ್ಯದ ನಿಮ್ಮ ವಾರ್ಷಿಕ ಖರ್ಚು ₹12 ಲಕ್ಷ ಎಂದಿಟ್ಟುಕೊಳ್ಳೋಣ. ಇನ್ನು 20 ವರ್ಷದಲ್ಲಿ ನೀವು ನಿವೃತ್ತಿಯಾಗಲು ಬಯಸಿದ್ದು, ಅದಕ್ಕಾಗಿ ವಾರ್ಷಿಕ ಖರ್ಚು 20ರಿಂದ 25 ಪಟ್ಟು ಹಣ ಬಯಸಿದರೆ ನಿಮ್ಮ ನಿವೃತ್ತಿಗಾಗಿ ₹9.62 ಕೋಟಿ ಬೇಕಾಗುತ್ತದೆ.

ಏಕೆಂದರೆ ವಾರ್ಷಿಕ ಬೆಲೆ ಏರಿಕೆ (ಹಣದುಬ್ಬರ) ಪ್ರಮಾಣ ಶೇ 6ರಷ್ಟು ಎಂದು ಅಂದಾಜು ಮಾಡಿದಾಗ ನಿಮ್ಮ ನಿವೃತ್ತಿ ಜೀವನದ ವಾರ್ಷಿಕ ವೆಚ್ಚ ಸುಮಾರು ₹12 ಲಕ್ಷದಿಂದ ₹38 ಲಕ್ಷಕ್ಕೆ ಏರಿಕೆಯಾಗುತ್ತದೆ. ಆ ಪ್ರಕಾರ ನಿವೃತ್ತಿ ಜೀವನಕ್ಕೆ ₹9.62 ಕೋಟಿ ಬೇಕಾಗುತ್ತದೆ. ಏನಪ್ಪಾ, ಇಷ್ಟೊಂದು ಹಣ ಅಗತ್ಯವೇ ಅಂತ ನಿಮಗನಿಸಿದರೆ ಒಮ್ಮೆ ಅಂದಾಜು ಮಾಡಿ ನೋಡಿ. ಅಗತ್ಯ ವಸ್ತುಗಳ ಬೆಲೆ, ಆಸ್ಪತ್ರೆ ಖರ್ಚು, ಪ್ರಯಾಣ ವೆಚ್ಚ, ಬಾಡಿಗೆ ವೆಚ್ಚ ಎಲ್ಲವೂ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇದೆ. ಆರೋಗ್ಯ ಖರ್ಚುಗಳನ್ನು ಸುಗಮವಾಗಿ ನಿಭಾಯಿಸಿ ನೆಮ್ಮದಿಯ ಜೀವನ ನಡೆಸಬೇಕಾದರೆ ದೊಡ್ಡ ಮೊತ್ತ ಬೇಕೇ ಬೇಕಲ್ಲವೇ. ಆದರೆ, ನೆನಪಿರಲಿ. ಈ ಅಂದಾಜು ಸದ್ಯ ನಿಮ್ಮ ವಾರ್ಷಿಕ ಖರ್ಚು ಎಷ್ಟಿದೆ ಎನ್ನುವುದರ ಮೇಲೆ ನಿಂತಿದೆ.

ಎಲ್ಲಿ ಹೂಡಿಕೆ ಮಾಡಬೇಕು?: ನಿವೃತ್ತಿಗಾಗಿ ಎಲ್ಲಿ ಹೂಡಿಕೆ ಮಾಡಬೇಕು ಎನ್ನುವುದು ನೀವು ಎಷ್ಟು ರಿಸ್ಕ್ ತೆಗೆದುಕೊಳ್ಳಲು ಸಿದ್ಧರಿದ್ದೀರಿ ಎನ್ನುವುದನ್ನು ಅವಲಂಬಿಸಿದೆ. ನಿಮ್ಮ ವಯಸ್ಸು 40ರ ಆಸುಪಾಸಿನಲ್ಲಿದ್ದಾಗ ಹೂಡಿಕೆಗೆ 15ರಿಂದ 20 ವರ್ಷ ಸಮಯ ಸಿಗುವ ಕಾರಣ ಷೇರು ಮಾರುಕಟ್ಟೆ ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಗಳನ್ನು ಪರಿಗಣಿಸಬಹುದು.

ಆದರೆ, ನಿವೃತ್ತಿ ಜೀವನ ಹತ್ತಿರಕ್ಕೆ ಬರುತ್ತಿದ್ದಂತೆ ಷೇರು ಮಾರುಕಟ್ಟೆ ಆಧರಿತ ಹೂಡಿಕೆಗಳನ್ನು ಫಿಕ್ಸೆಡ್ ಡೆಪಾಸಿಟ್, ಹಿರಿಯ ನಾಗರಿಕರ ಉಳಿತಾಯ ಯೋಜನೆ, ಅಂಚೆ ಕಚೇರಿಯ ಮಾಸಿಕ ಯೋಜನೆಯಂತಹ ನಿಶ್ಚಿತ ಆದಾಯದ ಕಡೆಗೆ ವರ್ಗಾಯಿಸಿಕೊಳ್ಳುವುದು ಉತ್ತಮ.

ಹೂಡಿಕೆಗೆ ನಿರ್ಲಕ್ಷ್ಯ ಬೇಡ: ನಿವೃತ್ತಿಗೆ ಕೋಟಿಗಳಲ್ಲಿ ಹಣ ಪೇರಿಸಲು ಸಾಧ್ಯವೇ ಎಂದು ನಿಮಗೆ ಅನಿಸಬಹುದು. ಆದರೆ ಶಿಸ್ತಿನಿಂದ, ಶಿಸ್ತುಬದ್ಧವಾಗಿ ಹೂಡಿಕೆ ಮಾಡುತ್ತಾ ಸಾಗಿದರೆ ದೊಡ್ಡ ಮೊತ್ತ ಪೇರಿಸಬಹುದು. ನಿವೃತ್ತಿಗಾಗಿ ಮೊದಲು ಹೂಡಿಕೆ ಶುರು ಮಾಡಿ. ಕ್ರಮೇಣ ನಿಮ್ಮ ಆದಾಯ ಹೆಚ್ಚಾದಂತೆ ಹೂಡಿಕೆಯನ್ನೂ ಹೆಚ್ಚಿಸುತ್ತಾ ಸಾಗಿ.

ನಿವೃತ್ತಿಗಾಗಿ ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್), ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಮತ್ತು ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಉತ್ತಮ ಆಯ್ಕೆಗಳಾಗಿವೆ. ಇದರ ಜೊತೆ ಕ್ರಮಬದ್ಧವಾದ ಹೂಡಿಕೆಗೆ ಮ್ಯೂಚುವಲ್ ಫಂಡ್ ಎಸ್‌ಐಪಿಗಳನ್ನು ಪರಿಗಣಿಸಿ. ಮಾರುಕಟ್ಟೆ ಏರಿಳಿತಗಳಿಗೆ ತಲೆಕೆಡಿಸಿಕೊಳ್ಳದೆ ನಿವೃತ್ತಿ ಜೀವನಕ್ಕಾಗಿ ಹೂಡಿಕೆ ಮಾಡಲು ಎಸ್‌ಐಪಿ ಮೂಲಕ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವುದು ನೆರವಾಗುತ್ತದೆ.

ಕೊಂಚ ರಿಸ್ಕ್ ತೆಗೆದುಕೊಳ್ಳಲು ಸಿದ್ಧರಿದ್ದೀರಿ ಎನ್ನುವವರು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳನ್ನು ಪರಿಗಣಿಸಿ. ರಿಸ್ಕ್ ಹೆಚ್ಚಿಗೆ ಇರಬಾರದು ಎನ್ನುವವರು ಹೈಬ್ರೀಡ್ ಫಂಡ್‌ಗಳನ್ನು ಗಣನೆಗೆ ತೆಗೆದುಕೊಳ್ಳಬಹುದು. ನೆನಪಿರಲಿ ಹೈಬ್ರೀಡ್ ಫಂಡ್‌ಗಳಲ್ಲೂ ಅಗ್ರೆಸಿವ್ ಮತ್ತು ಕನ್ಸರ್ವೇಟಿವ್ ಎನ್ನುವ ಮಾದರಿಗಳಿರುತ್ತವೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)



ಭಾರತ–ಪಾಕ್ ಸಂಘರ್ಷ; ಕುಸಿದ ಸೂಚ್ಯಂಕಗಳು

ಸತತ ಮೂರು ವಾರದ ಗಳಿಕೆಯ ಓಟವನ್ನು ಷೇರು ಸೂಚ್ಯಂಕಗಳು ನಿಲ್ಲಿಸಿವೆ. ಮೇ 9ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಕುಸಿತ ದಾಖಲಿಸಿವೆ. 79,454 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.3ರಷ್ಟು ತಗ್ಗಿದೆ. 24,008 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.39ರಷ್ಟು ಇಳಿಕೆಯಾಗಿದೆ.

ಇನ್ನು ನಿಫ್ಟಿ ಮಿಡ್‌ಕ್ಯಾಪ್ ಸೂಚ್ಯಂಕ ಶೇ 0.9ರಷ್ಟು ಕುಸಿದಿದ್ದರೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 2.17ರಷ್ಟು ಇಳಿಕೆಯಾಗಿದೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷವೇ ಮಾರುಕಟ್ಟೆ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ.

ವಾರದ ಲೆಕ್ಕಾಚಾರದಲ್ಲಿ ವಲಯವಾರು ಪ್ರಗತಿ ನೋಡಿದಾಗ ನಿಫ್ಟಿ ರಿಯಲ್ ಎಸ್ಟೇಟ್ ಶೇ 2.38, ಫೈನಾನ್ಸ್ ಶೇ 1.84, ಬ್ಯಾಂಕ್ ಶೇ 1.42, ಅನಿಲ ಮತ್ತು ತೈಲ ಶೇ 0.78, ಎಫ್‌ಎಂಸಿಜಿ ಶೇ 0.69, ಎನರ್ಜಿ ಶೇ 0.59, ಐ.ಟಿ ಶೇ 0.34, ಫಾರ್ಮಾ ಶೇ 0.21, ಆಟೊ ಶೇ 0.2 ಮತ್ತು ಲೋಹ ಶೇ 0.09ರಷ್ಟು ಕುಸಿದಿವೆ. ನಿಫ್ಟಿ ಡಿಫೆನ್ಸ್ ಸೂಚ್ಯಂಕ ಶೇ 3.04ರಷ್ಟು ಜಿಗಿದಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.59 ಮತ್ತು ಮಾಧ್ಯಮ ಶೇ 0.92ರಷ್ಟು ಗಳಿಸಿಕೊಂಡಿವೆ.


ಇಳಿಕೆ–ಏರಿಕೆ: ನಿಫ್ಟಿಯಲ್ಲಿ ಏಷ್ಯನ್ ಪೇಂಟ್ಸ್ ಶೇ 4.42, ಸನ್ ಫಾರ್ಮಾ ಶೇ 4.36, ಜಿಯೊ ಫೈನಾನ್ಶಿಯಲ್ ಶೇ 4.1, ಇಂಡಸ್ ಇಂಡ್ ಬ್ಯಾಂಕ್ ಶೇ 4.08, ಎನ್‌ಟಿಪಿಸಿ ಶೇ 4.07, ಒಎನ್‌ಜಿಸಿ ಶೇ 3.76, ಟಾಟಾ ಕನ್ಸ್ಯೂಮರ್ ಶೇ 3.64, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 3.54ರಷ್ಟು ಕುಸಿದಿವೆ.

ಟಾಟಾ ಮೋಟರ್ಸ್ ಶೇ 8.69, ಟೈಟನ್ ಶೇ 5.13, ಅದಾನಿ ಪೋರ್ಟ್ ಶೇ 3.16, ಎಲ್ ಆ್ಯಂಡ್ ಟಿ ಶೇ 3.13, ಹೀರೊ ಮೋಟೊಕಾರ್ಪ್ ಶೇ 3.12, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 1.79, ಭಾರತ್ ಎಲೆಕ್ಟ್ರಾನಿಕ್ಸ್ ಶೇ 1.45 ಮತ್ತು ಟಾಟಾ ಸ್ಟೀಲ್ ಶೇ 1.03ರಷ್ಟು ಹೆಚ್ಚಳ ಕಂಡಿವೆ.

ಮುನ್ನೋಟ: ಈ ವಾರ ಟಾಟಾ ಸ್ಟೀಲ್, ಪಿವಿಆರ್ ಐನಾಕ್ಸ್, ಜ್ಯೋತಿ ಲ್ಯಾಬ್ಸ್, ಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಏಥರ್ ಎನರ್ಜಿ, ರೇಮಂಡ್ ಲೈಫ್ ಸ್ಟೈಲ್, ಸಿಪ್ಲಾ, ಏರ್‌ಟೆಲ್, ಟಾಟಾ ಮೋಟರ್ಸ್, ಹೀರೊ ಮೋಟೊಕಾರ್ಪ್, ಸೀಮನ್ಸ್, ಗೇಲ್ ಇಂಡಿಯಾ, ಮ್ಯಾಕ್ಸ್ ಫೈನಾನ್ಶಿಯಲ್ ಸರ್ವಿಸಸ್, ಆದಿತ್ಯ ಬಿರ್ಲಾ ಕ್ಯಾಪಿಟಲ್, ಎಚ್‌ಎಎಲ್, ಐಷರ್ ಮೋಟರ್ಸ್, ವಿಗಾರ್ಡ್, ಹುಂಡೈ ಮೋಟರ್ಸ್, ಬಿಎಲ್‌ಇಎಲ್, ಇಮಾಮಿ, ಹೆರಿಟೇಜ್ ಫುಡ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ವರದಿ ಪ್ರಕಟಿಸಲಿವೆ.

ಭಾರತ–ಪಾಕ್ ಸಂಘರ್ಷ ಯಾವ ದಿಕ್ಕಿನಲ್ಲಿ ಸಾಗಲಿದೆ ಎನ್ನುವುದು ಮಾರುಕಟ್ಟೆಯ ಗತಿ ನಿರ್ಧರಿಸಲಿದೆ. ಸದ್ಯದ ಪರಿಸ್ಥಿತಿಯಲ್ಲಿ ಹೂಡಿಕೆದಾರರು ಎಚ್ಚರಿಕೆಯ ಹೆಜ್ಜೆಗಳನ್ನು ಇಡಬೇಕಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	100ಕ್ಕೆ	₹555
	12 ಕ್ಕೆ	₹73
ಮೈಸೂರು	100ಕ್ಕೆ	₹570

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹272-508
ದ್ವಿತಳಿ (ಬಿ.ವಿ)	₹280-671

ಬ್ರಿಟನ್ ವೈನ್‌ಗೆ ಸುಂಕ ವಿನಾಯಿತಿ ಇಲ್ಲ

ನವದೆಹಲಿ (ಪಿಟಿಐ): ಬ್ರಿಟನ್‌ನಿಂದ ಆಮದಾಗುವ ವೈನ್‌ಗೆ ಭಾರತವು ಸುಂಕ ವಿನಾಯಿತಿ ನೀಡಿಲ್ಲ. ಬಿಯರ್ ಮೇಲಿನ ಸುಂಕ ಕಡಿತಕ್ಕೂ ಕೋಟಾ ಮಿತಿ ನಿಗದಿಪಡಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಅಂತಿಮಗೊಂಡಿದ್ದು, ಕೆಲವು ಸರಕುಗಳಿಗೆ ಎರಡು ದೇಶಗಳು ಸುಂಕ ಕಡಿತ ಮಾಡಿವೆ.

ಈಗಾಗಲೇ, ಭಾರತವು ಐರೋಪ್ಯ ಒಕ್ಕೂಟದ ಜೊತೆಗೂ ಮುಕ್ತ ವ್ಯಾಪಾರ ಒಪ್ಪಂದ ಕುರಿತು ಮಾತುಕತೆ ಆರಂಭಿಸಿದೆ. ವೈನ್ ತಯಾರಿಕೆಯಲ್ಲಿ ಐರೋಪ್ಯ ಒಕ್ಕೂಟ ಮುಂಚೂಣಿಯಲ್ಲಿದೆ. ಬ್ರಿಟನ್ ವೈನ್‌ಗೆ ಸುಂಕ ವಿನಾಯಿತಿ ನೀಡಿದರೆ, ಐರೋಪ್ಯ ಒಕ್ಕೂಟವು ಸುಂಕ ವಿನಾಯಿತಿಯ ಪ್ರಸ್ತಾವ ಮುಂದಿಡುವ ಸಾಧ್ಯತೆಯಿದೆ. ಹಾಗಾಗಿ, ಭಾರತವು ವೈನ್‌ಗೆ ಸುಂಕ ವಿನಾಯಿತಿ ನೀಡಿಲ್ಲ ಎಂದು ಹೇಳಲಾಗಿದೆ.

ಎಫ್‌ಟಿಎ ಮಾತುಕತೆ

ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸಂಬಂಧಿಸಿದಂತೆ ಭಾರತ ಮತ್ತು ಐರೋಪ್ಯ ಒಕ್ಕೂಟದ ಮುಖ್ಯ ಸಮಾಲೋಚಕರು ಸೋಮವಾರ ಮತ್ತೊಂದು ಸುತ್ತಿನ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಫ್‌ಟಿಎ ಸಂಬಂಧ ಎರಡು ಹಂತದಲ್ಲಿ ಒಪ್ಪಂದಕ್ಕೆ ಅಂಕಿತ ಹಾಕಲಾಗುತ್ತದೆ. ಹಾಗಾಗಿ, ಮಾತುಕತೆಯನ್ನು ತ್ವರಿತವಾಗಿ ಪೂರ್ಣಗೊಳಿಸುವ ಮೂಲಕ ಮೊದಲ ಹಂತದ ಒಪ್ಪಂದಕ್ಕೆ ಸಹಿ ಹಾಕಲು ಎರಡೂ ಕಡೆಯಿಂದ ಒಪ್ಪಿಗೆ ನೀಡಲಾಗಿದೆ ಎಂದು ಹೇಳಿವೆ. 2023-24ರಲ್ಲಿ ಭಾರತ– ಐರೋಪ್ಯ ಒಕ್ಕೂಟದ ನಡುವಿನ ದ್ವಿಪಕ್ಷೀಯ ವ್ಯಾಪಾರದ ಮೌಲ್ಯ ₹11.73 ಲಕ್ಷ ಕೋಟಿ ಆಗಿದೆ.

ಅವಾಮಿ ಲೀಗ್ ಪಕ್ಷ ನಿಷೇಧ

ಢಾಕಾ (ಪಿಟಿಐ): ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ನೇತೃತ್ವದ ಅವಾಮಿ ಲೀಗ್ ಪಕ್ಷವನ್ನು ಇಲ್ಲಿನ ಮಧ್ಯಂತರ ಸರ್ಕಾರವು ಶನಿವಾರ ನಿಷೇಧಿಸಿದೆ.

'ಭಯೋತ್ಪಾದಕ ನಿಗ್ರಹ ಕಾಯ್ದೆಯಡಿ ಅವಾಮಿ ಲೀಗ್ ಪಕ್ಷದ ಎಲ್ಲ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ. ಈ ಪಕ್ಷದ ಚಟುವಟಿಕೆಗಳು ಮತ್ತು ನಾಯಕರ ವಿಚಾರಣೆ ಮುಕ್ತಾಯವಾಗುವವರೆಗೆ ನಿಷೇಧ ಮುಂದುವರಿಯಲಿದೆ' ಎಂದು ಸರ್ಕಾರದ ಕಾನೂನು ಸಲಹೆಗಾರ ಆಸಿಫ್ ನಜ್ರುಲ್ ತಿಳಿಸಿದ್ದಾರೆ.


ದೇಶದ ಸಾರ್ವಭೌಮ ಮತ್ತು ಭದ್ರತೆ ಹಾಗೂ ಪ್ರತಿಭಟನಕಾರರ ಭದ್ರತೆ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದಿದ್ದಾರೆ.

ಮಹಾರಾಷ್ಟ್ರ: ಶಿವಾಜಿ ಮಹಾರಾಜರ ನೂತನ ಪ್ರತಿಮೆ ಅನಾವರಣ

ಮುಂಬೈ: ಮಹಾರಾಷ್ಟ್ರದ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ರಾಜಕೀಯ ವಿಷಯವಾಗಿದ್ದ ಸಿಂಧುದುರ್ಗ ಜಿಲ್ಲೆ ಮಲ್ವಾನ್ ತಾಲ್ಲೂಕಿನ ರಾಜಕೋಟ್ ಕೋಟೆಯ ಛತ್ರಪತಿ ಶಿವಾಜಿ ಮಹಾರಾಜರ ನೂತನ ಪ್ರತಿಮೆಯನ್ನು ಒಂಬತ್ತು ತಿಂಗಳ ನಂತರ ಭಾನುವಾರ ಅನಾವರಣಗೊಳಿಸಲಾಯಿತು.

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಪ್ರತಿಮೆಯನ್ನು ಅನಾವರಣ ಮಾಡಿದರು. ಉಪಮುಖ್ಯಮಂತ್ರಿ ಏಕನಾಥ ಶಿಂಧೆ, ಸಂಸದರು, ಸಚಿವರು, ಶಾಸಕರು ಮತ್ತು ಮುಖಂಡರು ಹಾಜರಿದ್ದರು.

2023ರ ಡಿಸೆಂಬರ್ 4ರಂದು ಪ್ರಧಾನಿ ನರೇಂದ್ರ ಮೋದಿ ಅವರು ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಯನ್ನು ಲೋಕಾರ್ಪಣೆ ಮಾಡಿದ್ದರು. ವಿಧಾನಸಭೆ ಚುನಾವಣೆ ಹತ್ತಿರವಿದ್ದಾಗಲೇ 2024ರ ಆಗಸ್ಟ್ 4ರಂದು ಭಾರಿ ಗಾಳಿಗೆ 35 ಅಡಿ ಎತ್ತರದ ಪ್ರತಿಮೆ ಉರುಳಿ-ಬಿದ್ದಿತ್ತು. ಕಳಪೆ ಕಾಮಗಾರಿಯ ಪರಿಣಾಮ ಎಂದು ಆರೋಪಿಸಿ ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳು ಇದನ್ನು ಚುನಾವಣಾ ಅಸ್ತ್ರ ಮಾಡಿಕೊಂಡಿದ್ದವು.


ಸಿಂಧುದುರ್ಗ ಜಿಲ್ಲೆಯ ರಾಜಕೋಟ್ ಕೋಟೆಯಲ್ಲಿ ಭಾನುವಾರ ಅನಾವರಣಗೊಂಡ ಛತ್ರಪತಿ ಶಿವಾಜಿ ಮಹಾರಾಜರ ನೂತನ ಪ್ರತಿಮೆ ಪಿಟಿಐ ಚಿತ್ರ

ಇದೇ ವೇಳೆ ಪಾಲ್ಘಾರ್‌ನ ಕಾರ್ಯ-ಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ಮೋದಿ ಅವರು ಶಿವಾಜಿ ಪ್ರತಿಮೆ ಭಗ್ನಗೊಂಡಿದ್ದಕ್ಕಾಗಿ ಮಹಾರಾಷ್ಟ್ರದ ಜನರ ಕ್ಷಮೆಯನ್ನೂ ಕೋರಿದ್ದರು.

ಆನಂತರ ಹೊಸ ಪ್ರತಿಮೆ ನಿರ್ಮಾಣ ಕಾರ್ಯ ಶುರುವಾಗಿತ್ತು. ನೂತನ ಪ್ರತಿಮೆಯು ನೆಲಮಟ್ಟದಿಂದ 91 ಅಡಿ ಎತ್ತರವಿದ್ದು 10 ಅಡಿ ಪಾದಪೀಠ ಒಳಗೊಂಡಿದೆ. ಖಡ್ಗದ ಉದ್ದವೇ 29 ಅಡಿ ಇದೆ. 'ಏಕತಾ ಪ್ರತಿಮೆ' ನಿರ್ಮಿಸಿದ್ದ ಪ್ರಖ್ಯಾತ ಶಿಲ್ಪಿ ರಾಮ ಸುತಾರ್ ಈ ಪ್ರತಿಮೆಯನ್ನು ನಿರ್ಮಿಸಿದ್ದಾರೆ.

15ರಂದು ರಷ್ಯಾ–ಉಕ್ರೇನ್ ಮಾತುಕತೆ

ಮಾಸ್ಕೊ/ಕೀವ್ (ಎಪಿ/ಪಿಟಿಐ): ಇಸ್ತಾಂಬುಲ್‌ನಲ್ಲಿ ಮೇ 15ರಂದು ಉಕ್ರೇನ್ ಜೊತೆ ಪೂರ್ವಷರತ್ತು ರಹಿತ ನೇರ ಶಾಂತಿ ಮಾತುಕತೆ ನಡೆಸುವ ಬಗ್ಗೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಭಾನುವಾರ ಪ್ರಸ್ತಾವ ಮಾಡಿದ್ದಾರೆ. ಇದನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸ್ವಾಗತಿಸಿದ್ದಾರೆ.

ಆದರೆ ಮಾತುಕತೆಗೆ ಮೊದಲು ಪೂರ್ಣ, ತಾತ್ಕಾಲಿಕ ಕದನವಿರಾಮವಿರಬೇಕು ಎಂದು ಝೆಲೆನ್‌ಸ್ಕಿ ಒತ್ತಾಯಿಸಿದ್ದಾರೆ. 30 ದಿನಗಳ ಷರತ್ತುರಹಿತ ಕದನವಿರಾಮಕ್ಕೆ ಒಪ್ಪದಿದ್ದರೆ ಒತ್ತಡ ಹೇರುವುದಾಗಿ ಯೂರೋಪ್‌ನ ನಾಲ್ಕು ಪ್ರಮುಖ ರಾಷ್ಟ್ರಗಳ ನಾಯಕರು ಎಚ್ಚರಿಕೆ ನೀಡಿದ ಬೆನ್ನಲ್ಲೇ ಪುಟಿನ್ ಮಾತುಕತೆಯ ಪ್ರಸ್ತಾವ ಮಾಡಿದ್ದಾರೆ.

'ಕದನವಿರಾಮದ ಹೊರತಾಗಿ ಮಾತುಕತೆ ನಡೆಸಲು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಮುಂದಾಗಿರುವುದು ಸಕಾರಾತ್ಮಕ ಬೆಳವಣಿಗೆ. ಸಂಪೂರ್ಣ ಜಗತ್ತು ಬಹುಸಮಯದಿಂದ ಇದಕ್ಕಾಗಿ ಕಾಯುತ್ತಿದೆ. ಯಾವುದೇ ಯುದ್ಧವನ್ನು ಕೊನೆಗೊಳಿಸುವ ಪ್ರಕ್ರಿಯೆಯ ಮೊದಲ ಹೆಜ್ಜೆ ಕದನವಿರಾಮ' ಎಂದು ಝೆಲೆನ್‌ಸ್ಕಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

30 ದಿನಗಳ ಕದನವಿರಾಮ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಝೆಲೆನ್‌ಸ್ಕಿ ಸೋಮವಾರ ಪ್ರಸ್ತಾವ ಮಾಡಿದ್ದರು. 'ಪ್ರತಿದಿನವೂ ಹತ್ಯೆಯನ್ನು ನಡೆಸುವುದರಲ್ಲಿ ಅರ್ಥವಿಲ್ಲ. ನಾಳೆಯಿಂದ (ಮೇ 12) ಪೂರ್ಣ, ಶಾಶ್ವತ ಮತ್ತು ವಿಶ್ವಾಸಾರ್ಹ ಕದನವಿರಾಮಕ್ಕೆ ರಷ್ಯಾ ಒಪ್ಪಿಗೆ ನೀಡುತ್ತದೆ ಎಂಬ ಭರವಸೆ ಇದೆ. ಮಾತುಕತೆಗೆ ಉಕ್ರೇನ್ ಸಿದ್ಧವಿದೆ' ಎಂದು ಝೆಲೆನ್‌ಸ್ಕಿ ಹೇಳಿದ್ದಾರೆ.

30 ದಿನಗಳ ಕದನವಿರಾಮ ಒಪ್ಪಂದವನ್ನು ತಕ್ಷಣ ಜಾರಿಗೊಳಿಸುವ ಪ್ರಸ್ತಾವವನ್ನು ಪುಟಿನ್ ತಿರಸ್ಕರಿಸಿದರು.

ರಷ್ಯಾ ದಾಳಿ: ರಷ್ಯಾ ಘೋಷಿಸಿದ್ದ ಮೂರು ದಿನಗಳ ವಿರಾಮ ಮುಗಿದ ಬೆನ್ನಲ್ಲೇ ಉಕ್ರೇನ್ ಮೇಲೆ ಭಾನುವಾರ ನೂರಾರು ಡ್ರೋನ್‌ಗಳು ದಾಳಿ ನಡೆಸಿವೆ.

ಐಸಿಎಆರ್ ಕಾರ್ಯವೈಖರಿ ಪ್ರಶ್ನಿಸಿ ಮೋದಿಗೆ ಪತ್ರ ಬರೆದ ಮಾಜಿ ಸದಸ್ಯ


ಅಯ್ಯಪ್ಪನ್ ಸಾವು: ಸಿಬಿಐ ತನಿಖೆಗೆ ಆಗ್ರಹ

ನವದೆಹಲಿ (ಪಿಟಿಐ): ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ನಿವೃತ್ತ ನಿರ್ದೇಶಕ ಪ್ರೊ. ಸುಬ್ಬಣ್ಣ ಅಯ್ಯಪ್ಪನ್ ಅವರ ನಿಗೂಢ ಸಾವಿನ ಬಗ್ಗೆ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಸಿಬಿಐ ತನಿಖೆ ನಡೆಸಬೇಕಿದೆ ಎಂದು ಐಸಿಎಆರ್‌ನ ಮಾಜಿ ಸದಸ್ಯ ವೇಣುಗೋಪಾಲ್ ಬಾದರವಾಡ ಒತ್ತಾಯಿಸಿದ್ದಾರೆ.

ಈ ಕುರಿತು ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪ್ರತ್ಯೇಕವಾಗಿ ಪತ್ರ ಬರೆದಿದ್ದಾರೆ.

ಅಯ್ಯಪ್ಪನ್ ಅವರ ಸಾವು ತೀವ್ರ ದುಃಖ ತರಿಸಿದೆ. ನದಿ ದಡದಲ್ಲಿ ಅವರ ಸ್ಕೂಟರ್ ಸಿಕ್ಕಿದೆ. ಹಾಗಾಗಿ, ಅವರ ಸಾವು ನಿಗೂಢ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಸಿಬಿಐ ತನಿಖೆಯ ಮೂಲಕ ಸತ್ಯವನ್ನು ಬಯಲಿಗೆಳೆ-ಯಬೇಕಿದೆ ಎಂದು ಕೋರಿದ್ದಾರೆ.

ಅವರ ಸಾವಿನ ದುರಂತವು ಐಸಿಎಆರ್, ಎಎಸ್‌ಆರ್‌ಬಿ (ಕೃಷಿ ವಿಜ್ಞಾನಿಗಳ ನೇಮಕಾತಿ ಮಂಡಳಿ) ಮತ್ತು ಸಂಯೋಜಿತ ಸಂಸ್ಥೆಗಳಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರ, ಅಕ್ರಮ ನೇಮಕಾತಿ ಮತ್ತು ಅಧಿಕಾರ ದುರುಪಯೋಗಕ್ಕೆ ಕನ್ನಡಿ ಹಿಡಿದಿದೆ ಎಂದು ಆರೋಪಿಸಿದ್ದಾರೆ.


ಪ್ರೊ. ಸುಬ್ಬಣ್ಣ ಅಯ್ಯಪ್ಪನ್

ಸಾಂಸ್ಥಿಕ ಸಂಸ್ಥೆಗಳಲ್ಲಿನ ಹಗೆತನವು ಅವರ ಸಾವಿಗೆ ಕಾರಣವಾಗಿರಬಹುದು ಎಂದು ಕೃಷಿ ಸಮುದಾಯಗಳು ಆರೋಪಿಸುತ್ತಿವೆ. ಹಾಗಾಗಿ, ತನಿಖೆಯಿಂದ ಮಾತ್ರವೇ ಸತ್ಯ ಹೊರಬರಲು ಸಾಧ್ಯ ಎಂದು ಹೇಳಿದ್ದಾರೆ.

ಐಸಿಎಆರ್‌ನ ಕೆಲವು ನಿರ್ಧಾರ ಕಾನೂನುಬಾಹಿರವಾಗಿವೆ. ಮೇ 5ರಂದು ಅಯ್ಯಪ್ಪನ್ ಅವರನ್ನು ಆಡಳಿತ ಮಂಡಳಿಯಿಂದ ಯಾವುದೇ ತನಿಖೆ ನಡೆಸದೆ ಆದೇಶದ ಮೂಲಕ ಏಕಪಕ್ಷೀಯವಾಗಿ ತೆಗೆದು ಹಾಕಲಾಗಿತ್ತು ಎಂದು ದೂರಿದ್ದಾರೆ.

ಐಸಿಎಆರ್ ಕೈಗೊಂಡಿರುವ ಈ ಕಾನೂನುಬಾಹಿರ ಕ್ರಮವು ಮಂಡಳಿಯೊಳಗಿನ ಅಪಾಯಕಾರಿ ಪ್ರವೃತ್ತಿಗೆ ಸಾಕ್ಷಿಯಾಗಿದೆ. ಭ್ರಷ್ಟಾಚಾರದ ಬಗ್ಗೆ ಮಾತನಾಡುವವರ ಧ್ವನಿಯನ್ನು ಅಡಗಿಸುತ್ತದೆ. ಆ ಮೂಲಕ ಮಂಡಳಿಯಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರವನ್ನು ರಕ್ಷಿಸುತ್ತದೆ ಎಂದು ಆರೋಪಿಸಿದ್ದಾರೆ.

ಕೃಷಿ ವಿಜ್ಞಾನಿ ಅಯ್ಯಪ್ಪನ್ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಮೈಸೂರು: ಕೃಷಿ ವಿಜ್ಞಾನಿ ಸುಬ್ಬಣ್ಣ ಅಯ್ಯಪ್ಪನ್ ಅವರ ಅಂತ್ಯಕ್ರಿಯೆಯು ಇಲ್ಲಿನ ಬಂಬೂಬಜಾರ್ ಬಳಿಯ ಜೋಡಿ ತೆಂಗಿನಮರ ಮುಕ್ತಿಧಾಮದಲ್ಲಿ ಭಾನುವಾರ ಸಂಜೆ ನಡೆಯಿತು.

ಕೆ.ಆರ್. ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಮುಗಿಸಿ, ವಿಶ್ವೇಶ್ವರ ನಗರದ ಅಕ್ಕಮಹಾದೇವಿ ರಸ್ತೆಯಲ್ಲಿರುವ ಮನೆಗೆ (ಸಂಕಲ್ಪ ಬಸಂತ್ ಅಪಾರ್ಟ್‌ಮೆಂಟ್) ಪಾರ್ಥಿವ ಶರೀರವನ್ನು ತರಲಾಯಿತು. ಅಲ್ಲಿ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಮಧ್ಯಾಹ್ನ 1.15ಕ್ಕೆ ಹೆಚ್ಚುವರಿ ಜಿಲ್ಲಾಧಿಕಾರಿ ಪಿ. ಶಿವರಾಜು ನೇತೃತ್ವದಡಿ ಸಕಲ ಸರ್ಕಾರಿ ಗೌರವ ಸಲ್ಲಿಸಲಾಯಿತು. ತ್ರಿವರ್ಣ ಧ್ವಜವನ್ನು ಹೊದಿಸಿ, ರಾಷ್ಟ್ರಗೀತೆ ನುಡಿಸಿ, ಗಾಳಿಯಲ್ಲಿ 3 ಸುತ್ತು ಗುಂಡು ಹಾರಿಸಿ ಗೌರವ ಸಲ್ಲಿಸಲಾಯಿತು.

ವಿವಿಧ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು, ವಿಶ್ರಾಂತ ಕುಲಪತಿಗಳು, ಮೀನುಗಾರಿಕೆ ವಿಜ್ಞಾನ ಸಂಸ್ಥೆಗಳ ನಿರ್ದೇಶಕರು, ಕೃಷಿ, ಪಶು ಸಂಗೋಪನೆ ಸಂಸ್ಥೆಗಳ ಪ್ರಮುಖರು, ವಿಜ್ಞಾನಿಗಳು ಅಂತಿಮ ದರ್ಶನ ಪಡೆದರು. ಪತ್ನಿ, ಪುತ್ರಿಯರು, ಅಳಿಯಂದಿರು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಬಳಿ ಕಾವೇರಿ ನದಿಯಲ್ಲಿ ಶನಿವಾರ ಮಧ್ಯಾಹ್ನ ಮೃತದೇಹ ಪತ್ತೆಯಾಗಿತ್ತು. ಮೇ 7ರಂದು ಮನೆಯಿಂದ ತೆರಳಿದ್ದ ಅವರು ಕಾಣೆಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಅವರ ನಿಗೂಢ ಸಾವು ಕುಟುಂಬದವರು ಹಾಗೂ ಪರಿಚಯದವರಿಗೆ ಆಘಾತ ತಂದಿದೆ.

ಬುದ್ಧ: ಅರಿವಿನ ಪೂರ್ಣಚಂದ್ರ

• ಎಸ್. ಸೂರ್ಯಪ್ರಕಾಶ ಪಂಡಿತ್

ಬುದ್ಧ ಪೂರ್ಣಿಮೆ ಇಂದು

'ಬುದ್ಧ' ಎನ್ನುವುದು ವ್ಯಕ್ತಿಯೊಬ್ಬನ ಹೆಸರಲ್ಲ, ಅದು ಮಹಾತತ್ತ್ವವೊಂದರ ಹೆಸರು. ಬೋಧಿಯನ್ನು, ಎಂದರೆ ಅರಿವನ್ನು ಸಂಪಾದಿಸಿದವನೇ 'ಬುದ್ಧ'.


ಜಗತ್ತಿನ ಹಲವು ಸಮಸ್ಯೆಗಳಿಗೆ ಮೂಲ ಎಂದರೆ ನಮ್ಮಲ್ಲಿ 'ಅರಿವು' ಇಲ್ಲದಿರುವುದು. ಹೀಗಾಗಿ ನಾವು ಬುದ್ಧನನ್ನು ದಕ್ಕಿಸಿಕೊಂಡರೆ, ಆಗ ಅರಿವನ್ನೂ ದಕ್ಕಿಸಿಕೊಂಡಂತೆಯೇ ಆಗುತ್ತದೆ. ನಮಗೆ ಅರಿವಿನ ಪರಿಚಯ ಇಲ್ಲ – ಎನ್ನುವ ಮಾತು ನಮಗೆ ವಿಚಿತ್ರವಾಗಿ ಕಾಣುವುದು ಸಹಜ. 'ನಾವು ಎಷ್ಟೆಲ್ಲ ಸಾಧನೆಗಳನ್ನು ಮಾಡಿದ್ದೇವೆ, ಎಷ್ಟೆಲ್ಲ ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದೇವೆ. ಹೀಗಿರುವಾಗ ನಮಗೆ ಅರಿವು, ಎಂದರೆ ತಿಳಿವಳಿಕೆ ಇಲ್ಲ ಎಂಬ ಮಾತನ್ನು ಹೇಗೆ ಒಪ್ಪುವುದು' ಎಂಬ ತರ್ಕ ನಮ್ಮದು. ದಿಟವೇ, ನಮಗೆ ಏನೇನೋ ವಿದ್ಯೆಗಳು ಗೊತ್ತಿವೆ. ಆದರೆ ಹೇಗೆ ಬದುಕಬೇಕೆಂಬ ವಿದ್ಯೆ ಮಾತ್ರ ಗೊತ್ತಿಲ್ಲ! ಹೌದು, ನಮ್ಮಲ್ಲಿ ಎಂತೆಂಥವೋ ಅರಿವುಗಳ ಖಜಾನೆಯೇ ಇದೆ. ಆದರೆ ಜೀವನ ಎಂದರೆ ಏನು ಎಂಬ ಅರಿವಿನ ಕೋಶವೇ ಇಲ್ಲವಾಗಿದೆ. ಎಂದರೆ, ವಾಸ್ತವವಾಗಿ ಯಾವ ಅರಿವು ಬೇಕಾಗಿದೆಯೋ ಅದು ನಮಲ್ಲಿ ಇಲ್ಲವಾಗಿದೆ. ಆದರೂ ನಮ್ಮನ್ನು ನಾವು ಬುದ್ಧಿವಂತರು ಎಂದುಕೊಂಡು ಬೀಗುತ್ತಿದ್ದೇವೆ, ಅನಾರೋಗ್ಯವನ್ನೇ ಆರೋಗ್ಯ ಎಂದು ಸಂತೋಷಪಡುವಂತೆ! ಇದನ್ನು ಬುದ್ಧ ಸೊಗಸಾಗಿ ಹೇಳಿದ್ದಾನೆ: 'ಯಾವ ಮೂರ್ಖನಿಗೆ ತಾನು ಮೂರ್ಖ ಎಂದು ತಿಳಿದಿದೆಯೋ, ಅವನು ಲೋಕದ ದೃಷ್ಟಿಯಿಂದ ಮೂರ್ಖನಾಗಿದ್ದರೂ ಜೀವನದ ದೃಷ್ಟಿಯಿಂದ ಬುದ್ಧಿವಂತನೇ ಹೌದು. ಆದರೆ ಯಾವ ಮೂರ್ಖನಿಗೆ ತಾನು ಮೂರ್ಖನೆಂದು ಗೊತ್ತಾಗದೆ, ತನ್ನನ್ನು ತಾನು ಜಾಣ ಎಂದು ತಿಳಿದುಕೊಂಡಿದ್ದಾನೋ ಅವನು ದಿಟವಾಗಿಯೂ ಮೂರ್ಖನೇ ಹೌದು.'


ನಮ್ಮ ಜೀವನವನ್ನು ಅರ್ಥಪೂರ್ಣವಾಗಿಸಬಲ್ಲ, ನೆಮ್ಮದಿಯ ನೆಲೆಯಾಗಿಸಬಲ್ಲ ವಿದ್ಯೆಗಳನ್ನು ಉಪದೇಶಿಸಿದ ಮಹಾಗುರು ಗೌತಮ ಬುದ್ಧ. ಜೀವನ ಎಂದರೆ ಏನು – ಎಂಬ ಅರಿವನ್ನು ಮೊದಲಿಗೆ ಅವನು ಸಂಪಾದಿಸಿದ; ಹೀಗೆ ಸಂಪಾದಿಸಿದ ಅರಿವನ್ನು ಅವನು ತನ್ನಲ್ಲಿಯೇ ಉಳಿಸಿಕೊಳ್ಳಲಿಲ್ಲ; ಜಗತ್ತಿನ ಒಳಿತಿಗಾಗಿ ಅದನ್ನು ಜನರಿಗೆ ನಿರಂತರವಾಗಿ ಉಪದೇಶಿಸಿದ.

ಜೀವನದ ಈ ಅರಿವನ್ನೇ ಅವನು ಸನಾತನಧರ್ಮ ಎಂದು ಒಕ್ಕಣಿಸಿದ. 'ಸನಾತನಧರ್ಮ' ಎಂದ ಕೂಡಲೇ ಕೆಲವರಿಗೆ ವಿಪರೀತವಾದ ಅರ್ಥಗಳು ಸ್ಫುರಿಸಿ, ಅವರಲ್ಲಿ ಉದ್ವೇಗವನ್ನು ಮೂಡಿಸುವುದುಂಟು! ಎಂದೆಂದಿಗೂ ಇರುವ, ಎಲ್ಲರ ಹಿತವನ್ನೂ ಕಾಪಾಡಬಲ್ಲ ರೀತಿ–ನೀತಿಗಳ ಸಂಹಿತೆಯೇ ಸನಾತನಧರ್ಮ; ಇದು ಯಾವುದೋ ಒಂದು ಮತ ಅಥವಾ ನಂಬಿಕೆಗೆ ಸೀಮಿತವಾದ ಪದ ಅಲ್ಲ.

ನಾಲ್ಕು ಆರ್ಯಸತ್ಯಗಳು ಮತ್ತು ಆರ್ಯ ಅಷ್ಟಾಂಗಿಕಮಾರ್ಗ – ಎಂಬ ಎರಡು ಮಹಾಪ್ರಸ್ಥಾನಗಳ ಮೂಲಕ ಬುದ್ಧ ನಮಗೆ ಅರಿವಿನ ಉಪಾಯಗಳನ್ನು ಸೂಚಿಸಿದ. ಜೀವನದ ಸತ್ಯ ಏನು? ನಿಜವಾದ ಜೀವನವನ್ನು ನಡೆಸಲು ಬೇಕಾದ ಸಿದ್ಧತೆಗಳೇನು? ಈ ಎರಡು ಪ್ರಮುಖ ಪ್ರಶ್ನೆಗಳಿಗೆ ಉತ್ತರವಾಗಿ ಈ ಎರಡು ಮಹಾತತ್ತ್ವಗಳನ್ನು ಉಪದೇಶಿಸಿದ್ದಾನೆ. ಜೀವನದಲ್ಲಿ ದುಃಖ ಇದೆ; ಆದರೆ ಆ ದುಃಖದಿಂದ ಪಾರಾಗುವ ದಾರಿಯೂ ಇದೆ – ಎಂಬುದೇ ಅವನ ಎಲ್ಲ ಉದೇಶಗಳ ಸಾರ ಎಂದು ಹೇಳಿದರೆ, ಅದೇನೂ ತಪ್ಪಾಗದು.

ಇಂದು ನಾವೆಲ್ಲರೂ 'ನಾವು ಕಂಡಿದ್ದೇ ಸತ್ಯ; ನಮ್ಮ ಮತ ಹೇಳಿದ್ದೇ ಸತ್ಯ; ನಮ್ಮ ಮತಗ್ರಂಥ ಹೇಳುತ್ತಿರುವುದೇ ಸತ್ಯ' – ಎಂಬ ಹೋರಾಟಗಳಲ್ಲಿ ತೊಡಗಿದ್ದೇವೆ. ಆದರೆ ನಾವು ಸತ್ಯ ಎಂದು ಹಟಮಾಡುತ್ತಿರುವುದು ಸತ್ಯದ ಒಂದು ಅಂಶ ಮಾತ್ರವೇ ಎಂಬುದನ್ನು ಬುದ್ಧ ಪ್ರತಿಪಾದಿಸಿದ. ಹುಟ್ಟುಗುರುಡರು ಆನೆಯ ಯಾವುದಾದರೊಂದು ಭಾಗವನ್ನು ಸ್ಪರ್ಶಿಸಿ, 'ಆನೆ ಎಂದರೆ ಇದೇ' ಎಂದು ತಿಳಿದುಕೊಳ್ಳುವಂತೆ ನಮ್ಮ 'ಸತ್ಯಸಾಕ್ಷಾತ್ಕಾರ'ದ ಪಾಡು ಕೂಡ ಎಂಬುದನ್ನು ಅವನು ಪ್ರತಿಪಾದಿಸಿದ. ಕುರುಡರು ವರ್ಣಿಸಿದ ವಿವರಗಳು ಆನೆಯ ವಿವರಗಳೇ ಆದರೂ, ಅವೇನೂ ಆನೆಯ ಸಮಗ್ರ ಚಿತ್ರಣವಲ್ಲ. ಹೀಗೆಯೇ ನಾವೆಲ್ಲರೂ ಹೇಳುತ್ತಿರುವುದು ಸತ್ಯವೇ ಆದರೂ, ಯಾರದ್ದೂ ಪೂರ್ಣಸತ್ಯವಲ್ಲವಷ್ಟೆ! ಇಂಥ ಅರಿವಿನ ವಿನಯ, ವಿನಯದ ಅರಿವು ಮಾತ್ರವೇ ನಮ್ಮ ಜೀವನವನ್ನು ನೆಮ್ಮದಿಯಾಗಿಡಬಹುದು. ಇಂಥ ಅರಿವಿನ ಪೂರ್ಣಚಂದ್ರನೇ ಬುದ್ಧ ಎಂಬ ಮಹಾಗುರು.





‘ಮಿಷನ್ ಇಂಪಾಸಿಬಲ್‌ಗೆ’ ಭಾರಿ ಬೇಡಿಕೆ

‘ಮಿಷನ್ ಇಂಪಾಸಿಬಲ್: ದಿ ಫೈನಲ್ ರೆಕನಿಂಗ್’ ಚಿತ್ರ ಮೇ 17ರಂದು ಭಾರತದಲ್ಲಿ ಬಿಡುಗಡೆ ಆಗುತ್ತಿದ್ದು, ಚಿತ್ರದ ಟಿಕೆಟ್‌ಗೆ ಭಾರಿ ಬೇಡಿಕೆ ಉಂಟಾಗಿದೆ. ‘ಹಾಲಿವುಡ್ ನಟ ಟಾಮ್ ಕ್ರೂಸ್ ಅಭಿನಯದ ಈ ಚಿತ್ರ ವಿಶ್ವದ ಬೇರೆ ದೇಶಗಳಿಗಿಂತ ಒಂದು ವಾರ ಮೊದಲೇ ಭಾರತದಲ್ಲಿ ತೆರೆ ಕಾಣುತ್ತಿದ್ದು, ಈಗಾಗಲೇ 11,000 ಟಿಕೆಟ್‌ಗಳು ಮುಂಗಡ ಬುಕ್ಕಿಂಗ್ ಆಗಿವೆ’ ಎಂದು ಚಿತ್ರತಂಡ ಹೇಳಿದೆ.



ಮಲೆನಾಡಿನ ಸುಂದರ ಕಥನ

ವಿನಾಯಕ ಕೆ.ಎಸ್

ನಾವು ನೋಡಿದ ಸಿನಿಮಾ

ಚಿತ್ರದ ಹೆಸರು: ನಾಳೆ ರಜಾ ಕೋಳಿ ಮಜಾ
- ನಿರ್ಮಾಣ, ನಿರ್ದೇಶನ: ಅಭಿಲಾಷ್ ಶೆಟ್ಟಿ
- ತಾರಾಗಣ: ಸಮೃದ್ಧಿ ಕುಂದಾಪುರ, ಸನ್ನಿಧಿ ಆಚಾರ್ಯ, ಪ್ರಭಾಕರ್ ಕುಂದರ್ ಮತ್ತಿತರರು

‘ನಾಳೆ ರಜಾ ಕೋಳಿ ಮಜಾ’ ಮಲೆನಾಡು ಭಾಗದ ಶಾಲಾ ಮಕ್ಕಳ ಬಾಯಲ್ಲಿ ಸಾಮಾನ್ಯವಾಗಿ ಕೇಳಿಬರುವ ಪದ. ಶಾಲೆಗೆ ರಜೆ ಸಿಕ್ಕರೆ ಮಕ್ಕಳಿಗೆ ಮಜಾ ಎಂಬುದನ್ನು ಈ ರೀತಿ ಹೇಳುತ್ತಾರೆ. ಆವತ್ತು ಗಾಂಧಿಜಯಂತಿ, ಜತೆಗೆ ಭಾನುವಾರ ಕೂಡ. ನಾನ್‌ವೆಜ್ ತಿನ್ನುವವರ ಮನೆಗಳಲ್ಲಿ ಭಾನುವಾರ, ರಜಾ ದಿನಗಳಲ್ಲಿ ಬಾಡೂಟ ಸಾಮಾನ್ಯ. ಹೀಗಾಗಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಸ್ನೇಹಾಳಿಗೆ ಕೋಳಿ ಸಾರು ತಿನ್ನಬೇಕೆಂಬ ತೀವ್ರ ಬಯಕೆ. ಆದರೆ ಶಾಂತಿ, ಅಹಿಂಸೆಯ ಪ್ರತೀಕವಾದ ಗಾಂಧಿಜಯಂತಿಯಂದು ಎಲ್ಲಿಯೂ ಸಾರಿಗೆ ಕೋಳಿ ಸುಲಭವಾಗಿ ಸಿಗುವುದಿಲ್ಲ. ಆಕೆ ಸಾರಿಗಾಗಿ ಕೋಳಿ ಹುಡುಕಿಕೊಂಡು ಹೋಗುವುದೇ ಚಿತ್ರಕಥೆ!

ಚಿಕ್ಕ ಮಕ್ಕಳಿಗೆ ಏನಾದರೂ ಬೇಕು ಎನಿಸಿದರೆ ಸಿಗುವವರೆಗೂ ಬಿಡುವುದಿಲ್ಲ. ಅದೇ ರೀತಿಯ ವ್ಯಕ್ತಿತ್ವ ನಾಲ್ಕನೆ ತರಗತಿಯಲ್ಲಿ ಓದುತ್ತಿರುವ ಸ್ನೇಹಾಳದ್ದು.ಚಿತ್ರದ ಕಥೆ ಪ್ರಾರಂಭವಾಗುವುದು ಪಶ್ಚಿಮಘಟ್ಟದ ಹಳ್ಳಿಯೊಂದರಲ್ಲಿ. ಇಡೀ ಸಿನಿಮಾದ ಶಕ್ತಿಯೇ ಸಹಜತೆ. ಎಲ್ಲರ ಮನೆಯ ಅಂಗಳದಲ್ಲಿ ನಡೆಯುವ ಸರಳ ಕಥೆಯಿದು. ಅದಕ್ಕೆ ಯಾವುದೇ ರೀತಿಯ ನಾಟಕ, ಮಸಾಲೆ, ತಿರುವುಗಳನ್ನು ಬೆರೆಸದೆ ಸಹಜವಾಗಿಯೇ ಪ್ರಸ್ತುತಪಡಿಸಿದ್ದಾರೆ ನಿರ್ದೇಶಕರು. ಶಾಲೆ, ಅಲ್ಲಿ ಗಾಂಧಿಜಯಂತಿ ಆಚರಣೆ, ಮಕ್ಕಳು ಹಾಡುವ ದೇಶಭಕ್ತಿಗೀತೆ ನಮ್ಮ ಶಾಲಾದಿನಗಳನ್ನೊಮ್ಮೆ ನೆನಪಿಸುತ್ತದೆ.

ಸಿನಿಮಾದಲ್ಲಿ ಕುಂದಗನ್ನಡ ಬಳಸಲಾಗಿದೆ. ಭಾನುವಾರ ಗಾಂಧಿಜಯಂತಿ ಮುಗಿಸಿ ಬಂದ ಸ್ನೇಹಾ ಕೋಳಿ ಸಾರಿಗೆ ಹಠ ಹಿಡಿಯುತ್ತಾಳೆ. ಅವರು ಇರುವುದು ಬ್ರಹ್ಮಾವರದಂಥ ಸಣ್ಣ ಪೇಟೆಯಲ್ಲಿ. ಅಪ್ಪ ರಮೇಶ್‌ನನ್ನು ಕರೆದುಕೊಂಡು ಕೋಳಿ ಹುಡುಕಲು ಹೊರಡುತ್ತಾಳೆ. ಒಂದೆರಡು ಕಡೆ ಬ್ಲಾಕ್‌ನಲ್ಲಿ ಕೋಳಿ ಸಿಗುತ್ತದೆ. ದರ ದುಬಾರಿ ಎಂದು ಅಪ್ಪ ಆ ಕೋಳಿ ಬೇಡ ಎನ್ನುತ್ತಾನೆ. ಆದರೆ ಅದೇ ಅಪ್ಪ ಎಣ್ಣೆಯನ್ನು ಎರಡು ಪಟ್ಟು ಹಣ ನೀಡಿ ತರುತ್ತಾನೆ. ಇದರಿಂದ ಕೋಪಗೊಳ್ಳುವ ಸ್ನೇಹಾ ಅಜ್ಜಿ ಮನೆಗೆ ಹೊರಡುತ್ತಾಳೆ. ಆಕೆ ಮನೆಯಿಂದ ಹೋದ ನಂತರ ಪಕ್ಕದ ಮನೆಯವರ್ಯಾರೊ ಕೋಳಿ ಸಾರು ಉಳಿದಿತ್ತು ಎಂದು ತಂದುಕೊಡುತ್ತಾರೆ. ಈ ರೀತಿ ಸಾಕಷ್ಟು ಸಹಜ ಘಟನೆಗಳಿಂದಲೇ ಚಿತ್ರ ಇಷ್ಟವಾಗುತ್ತದೆ.

ಆಕೆಯ ಅಜ್ಜಿ ಮನೆ ಸಾಗರ. ಅಲ್ಲಿನ ತೋಟ, ಊರು, ಗ್ರಾಮೀಣ ಭಾಗದ ಬದುಕು ಎಲ್ಲವೂ ಮುದ ನೀಡುವಂತಿವೆ. ಮುಗ್ಧ ಮಗುವಿನ ದೃಷ್ಟಿಯಲ್ಲಿ ಗಾಂಧಿಜೀಯವರ ಅಹಿಂಸಾ ತತ್ವ ಮತ್ತು ಅದನ್ನು ಸಮಾಜ ಹೇಗೆ ಸ್ವೀಕರಿಸುತ್ತದೆ ಎಂಬುದನ್ನು ನಿರ್ದೇಶಕರು ಕಟ್ಟಿಕೊಡುತ್ತ ಹೋಗುತ್ತಾರೆ. ಸ್ನೇಹಾ ಪ್ರಾತಧಾರಿಯಾಗಿ ಸಮೃದ್ಧಿ ಕುಂದಾಪುರ ಇಷ್ಟವಾಗುತ್ತಾರೆ. ಎಲ್ಲ ಪಾತ್ರಧಾರಿಗಳು ಸಹಜವಾಗಿ ಅಭಿನಯಿಸಿದ್ದಾರೆ. ತಾಂತ್ರಿಕವಾಗಿ ಬಹಳ ಇತಿಮಿತಿಯಲ್ಲಿ ಸಿನಿಮಾ ಸಿದ್ಧಗೊಂಡಿರುವುದು ತೆರೆಯ ಮೇಲೂ ಅನುಭವಕ್ಕೆ ಬರುತ್ತದೆ. ಮಕ್ಕಳ ಮುಗ್ಧ ಪ್ರಪಂಚವನ್ನಿಟ್ಟುಕೊಂಡು ಚಿತ್ರಕಥೆಯನ್ನು ಇನ್ನಷ್ಟು ಉತ್ತಮಗೊಳಿಸುವ, ಸಹಜವಾಗಿಯೇ ನಡೆಯುವ ಕೆಲವಷ್ಟು ಹಾಸ್ಯ ಸನ್ನಿವೇಶಗಳನ್ನು ಸೃಷ್ಟಿಸುವ ಅವಕಾಶ ನಿರ್ದೇಶಕರಿಗಿತ್ತು. ಚಿತ್ರದ ಸಂಕಲನ ಇನ್ನಷ್ಟು ಉತ್ತಮವಾಗಬೇಕಿತ್ತು. ಮಲೆನಾಡಿನ ಪ್ರಾಕೃತಿಕ ಸೊಬಗಿನ ಒಂದಷ್ಟು ಸಿನಿಮ್ಯಾಟಿಕ್ ಫ್ರೇಮ್‌ಗಳನ್ನು ಕಟ್ಟಿಕೊಡಲು ಛಾಯಾಚಿತ್ರಗ್ರಹಣದಲ್ಲಿ ಅವಕಾಶವಿತ್ತು.

ನೋಡಬಹುದಾದ ಚಿತ್ರ

ಸಂಚಿತ್ ಧ್ವನಿಯಲ್ಲಿ ಮುತ್ತಣ್ಣನ ಹಾಡು

ಪ್ರಣಮ್ ದೇವರಾಜ್ ನಾಯಕನಾಗಿ ನಟಿಸಿರುವ ‘S\O ಮುತ್ತಣ್ಣ’ ಚಿತ್ರದ ‘ಒನ್ ಅಂಡ್ ಓನ್ಲಿ ಸುಖ’ ಗೀತೆಗೆ ಸಂಚಿತ್ ಹೆಗಡೆ ಧ್ವನಿಯಾಗಿದ್ದಾರೆ. ಪುರಾತನ ಫಿಲ್ಮ್ಸ್ ನಿರ್ಮಾಣದ ಚಿತ್ರಕ್ಕೆ ಶ್ರೀಕಾಂತ್ ಹುಣಸೂರು ನಿರ್ದೇಶನವಿದೆ.

‘ಗೀತೆಗೆ ಯೋಗರಾಜ್ ಭಟ್ ಸಾಹಿತ್ಯವಿದೆ. ಸಚಿನ್ ಬಸ್ರೂರ್ ಸಂಗೀತ ನೀಡಿರುವ ಈ ಹಾಡು ಸದ್ಯದಲ್ಲೇ ಬಿಡುಗಡೆಯಾಗಲಿದೆ. ಈಗಾಗಲೇ ಬಿಡುಗಡೆಯಾಗಿರುವ ಟೀಸರ್ ಹಾಗೂ ಹಾಡುಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿವೆ. ಶೀಘ್ರದಲ್ಲೇ ಚಿತ್ರ ತೆರೆಗೆ ಬರಲಿದೆ’ ಎಂದಿದೆ ಚಿತ್ರತಂಡ.

ತಂದೆ - ಮಗನ ಬಾಂಧವ್ಯದ ಕಥಾಹಂದರ ಹೊಂದಿರುವ ಚಿತ್ರವಿದು. ‘ದಿಯಾ’ ಖ್ಯಾತಿಯ ಖುಷಿ ರವಿ ನಾಯಕಿ. ರಂಗಾಯಣ ರಘು ನಾಯಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸುಚೇಂದ್ರ ಪ್ರಸಾದ್, ಗಿರೀಶ್ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ ಮುಂತಾದವರು ತಾರಾಗಣದಲ್ಲಿದ್ದಾರೆ. ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ, ಪ್ರಮೋದ್ ಮರವಂತೆ ಸಾಹಿತ್ಯವಿದೆ. ಸ್ಕೇಟಿಂಗ್ ಕೃಷ್ಣ ಛಾಯಾಚಿತ್ರಗ್ರಹಣ ಹಾಗೂ ಹರೀಶ್ ಕೊಮ್ಮೆ ಸಂಕಲನವಿದೆ.


ಖುಷಿ ರವಿ, ಪ್ರಣಮ್ ದೇವರಾಜ್


ಮೇಘಶ್ರೀ

ತೆರೆಗೆ ಬರಲು ಸಜ್ಜಾದ ಕುಂಟೆಬಿಲ್ಲೆ

ಗ್ರಾಮೀಣ ಸೊಗಡಿನ ಕಥೆಯನ್ನು ಹೊಂದಿರುವ ‘ಕುಂಟೆಬಿಲ್ಲೆ’ ಚಿತ್ರ ತೆರೆಗೆ ಬರಲು ಸಿದ್ಧವಿದೆ. ಜಿ.ಬಿ.ಎಸ್ ಸಿದ್ದೇಗೌಡ ಚಿತ್ರದ ನಿರ್ದೇಶಕ.

‘ಮೈಸೂರು ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ. ಪೋಸ್ಟ್‌ಪ್ರೊಡಕ್ಷನ್ ಕೆಲಸ ಮುಗಿಸಿ ಸೆನ್ಸಾರ್‌ಗೆ ಸಿದ್ಧವಿದೆ. ಮುಂದಿನ ತಿಂಗಳು ಬಿಡುಗಡೆ ಆಲೋಚನೆಯಿದೆ. ಮನುಷ್ಯ ಜೀವನದ ಮೌಲ್ಯ, ಪ್ರೀತಿ, ತಾರತಮ್ಯ, ಘರ್ಷಣೆಯನ್ನು ಹೇಳುವ ಕಥಹಂದರವಿದೆ. ಹಳ್ಳಿ ಜನಜೀವನ, ಸಂಸ್ಕೃತಿ ಜತೆಗೆ ಪ್ರೇಮಕಥೆಯಿದೆ’ ಎನ್ನುತ್ತಾರೆ ನಿರ್ದೇಶಕರು.

ನಾಯಕ ಯದುವಿಗೆ ನಾಯಕಿಯಾಗಿ ಮೇಘಶ್ರೀ ಜತೆಯಾಗಿದ್ದಾರೆ. ಎಸ್.ಬಿ.ಶಿವು,ಕುಮಾರ್ ಗೌಡ ಬಂಡವಾಳ ಹೂಡಿದ್ದಾರೆ. ಹರಿಕಾವ್ಯ ಸಂಗೀತ,ಮುಂಜಾನೆ ಮಂಜು ಛಾಯಾಚಿತ್ರಗ್ರಹಣ, ಸುಜಿತ್ ಸಂಕಲನ ಚಿತ್ರಕ್ಕಿದೆ.ಸುಚೇಂದ್ರ ಪ್ರಸಾದ್. ಶಂಕರ್ ಅಶ್ವಥ್. ಸುಧಾ ಬೆಳವಾಡಿ ಮುಂತಾದವರು ತಾರಾಗಣದಲ್ಲಿದ್ದಾರೆ.

‘ತಾಯವ್ವ’ನಿಗೆ ಶ್ರೀನಾಥ್ ಸಾಥ್

‘ತಾಯವ್ವ’ ನಟ ಸುದೀಪ್ ಮೊದಲ ಬಾರಿಗೆ ಮುಖ್ಯಭೂಮಿಕೆಯಲ್ಲಿ ಅಭಿನಯಿಸಿದ್ದ ಚಿತ್ರ. ನಟಿ ಉಮಾಶ್ರೀ ‘ತಾಯವ್ವ’ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಚಿತ್ರ ಎರಡು ದಶಕಗಳ ಹಿಂದೆ ತೆರೆ ಕಂಡಿತ್ತು. ಈಗ ಅದೇ ಹೆಸರಿನ ಮತ್ತೊಂದು ಚಿತ್ರ ಸಿದ್ಧವಾಗಿದ್ದು, ಇತ್ತೀಚೆಗಷ್ಟೇ ಟ್ರೇಲರ್ ಬಿಡುಗಡೆಗೊಂಡಿದೆ. ಹಿರಿಯ ನಟ ಶ್ರೀನಾಥ್ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

‘ಈ ಸಿನಿಮಾದ ಕಥೆ ಮತ್ತು ತುಣುಕುಗಳನ್ನು ನೋಡಿದಾಗ ಇದೊಂದು ಸಾಮಾಜಿಕ ಕಥಾಹಂದರದ ಚಿತ್ರ ಎಂಬುದು ಗೊತ್ತಾಗುತ್ತದೆ. ಸೂಲಗಿತ್ತಿಯ ಕಾರ್ಯ, ಹೆಣ್ಣಿನ ಮಹತ್ವ ಎರಡನ್ನೂ ಈ ಸಿನಿಮಾ ಹೇಳುತ್ತಿದೆ. ಇದರಲ್ಲಿ ಒಂದು ಸಂದೇಶವಿದೆ. ಇಂಥ ಸಿನಿಮಾಗಳು ಹೆಚ್ಚಾಗಬೇಕು. ‘ತಾಯವ್ವ’ ಎಂಬ ಹೆಸರಿನಲ್ಲೇ ಒಂದು ಭಾವನಾತ್ಮಕ ಸೆಳೆತವಿದೆ’ ಎಂದರು ಶ್ರೀನಾಥ್.

ಸಾತ್ವಿಕ್ ಪವನ್ ಕುಮಾರ್ ನಿರ್ದೇಶನದ ಈ ಚಿತ್ರದಲ್ಲಿ ‘ತಾಯವ್ವ’ನಾಗಿ ಗೀತಪ್ರಿಯ ಕಾಣಿಸಿಕೊಂಡಿದ್ದಾರೆ. ‘ಹೆಣ್ಣುಮಕ್ಕಳನ್ನು ಉಳಿಸಿ, ಬೆಳೆಸಿ ಎಂಬ ಕಥೆಯನ್ನು ಈ ಚಿತ್ರಹೊಂದಿದೆ. ಇದೊಂದು ಅಪ್ಪಟ ಗ್ರಾಮೀಣ ಸೊಗಡಿನ ಸಿನಿಮಾ. ಸೂಲಗಿತ್ತಿ ನರಸಮ್ಮ ಅವರಂಥ ನೂರಾರು ಸೂಲಗಿತ್ತಿಯರು ಈ ಸಿನಿಮಾ ಮಾಡಲು ನಮಗೆ ಪ್ರೇರಣೆ’ ಎಂದರು ನಿರ್ದೇಶಕರು.

ಚಿತ್ರಕ್ಕೆ ಅನಂತ ಆರ್ಯನ್ ಸಂಗೀತವಿದೆ. ಪದ್ಮಾವತಿ ಚಂದ್ರಶೇಖರ್ ಬಂಡವಾಳ ಹೂಡಿದ್ದಾರೆ.


ಭಾ.ಮಾ.ಹರೀಶ್, ಪದ್ಮಾವತಿ ಚಂದ್ರಶೇಖರ್, ಶ್ರೀನಾಥ್, ಲಹರಿ ವೇಲು

ಪದ್ಮನಾಭ ದೇಗುಲದ ಚಿನ್ನ ಪತ್ತೆ

ತಿರುವನಂತಪುರ: ಕೇರಳದ ಪದ್ಮನಾಭಸ್ವಾಮಿ ದೇಗುಲದಲ್ಲಿ ನಾಪತ್ತೆಯಾಗಿದ್ದ 103 ಗ್ರಾಂ ಚಿನ್ನ ದೇಗುಲದ ಆವರಣದಲ್ಲೇ ಪತ್ತೆಯಾಗಿದೆ.

ದೇಗುಲದ ನೆಲಮಹಡಿಯ ರಹಸ್ಯ ಕೋಣೆಗಳಲ್ಲಿ ಬೆಲೆ ಕಟ್ಟಲಾಗದ ಅಪಾರ ಚಿನ್ನಾಭರಣ ಇದೆ ಎಂಬ ಮಾಹಿತಿ ನಂತರ ಬಿಗಿ ಭದ್ರತೆ ಕಲ್ಪಿಸಿದ್ದರೂ ಚಿನ್ನ ನಾಪತ್ತೆ ಭಾರಿ ಅನುಮಾನ ಮೂಡಿಸಿತ್ತು.

‘ದೇಗುಲದ ಗರ್ಭಗುಡಿಗೆ ಸ್ವರ್ಣ ಲೇಪನ ಮಾಡಲು ಈ ಚಿನ್ನವನ್ನು ಬಳಕೆ ಮಾಡಲಾಗುತ್ತಿತ್ತು. ದೇಗುಲದ ಭದ್ರತಾ ಕೊಠಡಿಯಿಂದ ಚಿನ್ನವನ್ನು ತಗೆದುಕೊಂಡಿದ್ದೆವು. ಇದರಲ್ಲಿ 103 ಗ್ರಾಂ ಚಿನ್ನ ಶನಿವಾರ ತೂಗುವಾಗ ಕಡಿಮೆ ಬಂದಿದೆ’ ಎಂದು ದೇಗುಲದ ಸಿಬ್ಬಂದಿ ಪೊಲೀಸರಿಗೆ ತಿಳಿಸಿದ್ದರು.

ಶನಿವಾರ ಇಡೀ ದೇಗುಲ ಹುಡುಕಿದ್ದರೂ ಚಿನ್ನ ಸಿಕ್ಕಿರಲಿಲ್ಲ. ಪೊಲೀಸರು, ಬಾಂಬ್ ಪತ್ತೆ ದಳದ ಸಿಬ್ಬಂದಿ ಶೋಧ ಆರಂಭಿಸಿದ್ದರು. ಈ ಮಧ್ಯೆ ದೇಗುಲ ಆವರಣದ ಮರಳಿನ ಮೇಲೆ ಭಾನುವಾರ ಚಿನ್ನ ಪತ್ತೆಯಾಗಿದೆ.

ಭಾರಿ ಭದ್ರತೆ ನಡುವೆಯೂ ಗರ್ಭಗುಡಿ ಸ್ಥಳದಿಂದ ಚಿನ್ನ ಬೇರೆ ಸ್ಥಳಕ್ಕೆ ಹೋಗಿದ್ದು ಹೇಗೆ ಎಂಬುದು ಇನ್ನೂ ನಿಗೂಢವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಖನೌ: ಕ್ಷಿಪಣಿ ತಯಾರಿಕಾ ಘಟಕ ಉದ್ಘಾಟನೆ

ಬ್ರಹ್ಮೋಸ್: ಶಕ್ತಿಯ ಸಂದೇಶ

ಮುಖ್ಯಾಂಶಗಳು
- ಮೂರೂವರೆ ವರ್ಷದಲ್ಲಿ ಘಟಕ ಸ್ಥಾಪನೆ: ರಾಜನಾಥ್ ಸಿಂಗ್
- ರಾಷ್ಟ್ರೀಯ ತಂತ್ರಜ್ಞಾನ ದಿನವೇ ಉದ್ಘಾಟನೆ

ಲಖನೌ(ಪಿಟಿಐ): ‘ಬ್ರಹ್ಮೋಸ್ ಕೇವಲ ಒಂದು ಆಯುಧವಷ್ಟೇ ಅಲ್ಲ, ಇದು ಭಾರತೀಯ ಸಶಸ್ತ್ರ ಪಡೆಗಳ ಸಾಮರ್ಥ್ಯ ಕುರಿತು ಸಂದೇಶ ಸಾರುವ ಕ್ಷಿಪಣಿ’ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಲಖನೌ ಬಳಿಯ ‘ಉತ್ತರ ಪ್ರದೇಶ ರಕ್ಷಣಾ ಕೈಗಾರಿಕೆ ಕಾರಿಡಾರ್’ನಲ್ಲಿ ಸ್ಥಾಪಿಸಲಾಗಿರುವ ಬ್ರಹ್ಮೋಸ್ ಏರೋಸ್ಪೇಸ್ ಇಂಟಗ್ರೇಶನ್ ಅಂಡ್ ಟೆಸ್ಟಿಂಗ್ ಫೆಸಿಲಿಟಿಯನ್ನು (ಬಿಎಐಟಿಎಫ್) ವರ್ಚುವಲ್ ಆಗಿ ಉದ್ಘಾಟಿಸಿದ ಅವರು, ‘ಪ್ರಸ್ತುತ ನಮ್ಮ ಸುತ್ತ ಸೃಷ್ಟಿಯಾಗಿರುವ ಸನ್ನಿವೇಶ ಅವಲೋಕಿಸಿದಾಗ, ನಮ್ಮ ಗುರಿಗಳನ್ನು ನಿಗದಿತ ಗಡುವಿನೊಳಗೆ ಸಾಧಿಸಿರುವುದು ಮಹತ್ವದ್ದಾಗಿದೆ’ ಎಂದು ಹೇಳಿದ್ದಾರೆ.

‘1998ರ ಮೇ 11ರಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ನಾಯಕತ್ವದಲ್ಲಿ, ಪೋಖರಣ್‌ನಲ್ಲಿ ನಮ್ಮ ವಿಜ್ಞಾನಿಗಳು ಅಣ್ವಸ್ತ್ರ ಪರೀಕ್ಷೆ ನಡೆಸುವ ಮೂಲಕ ವಿಶ್ವಕ್ಕೆ ಭಾರತದ ಶಕ್ತಿಯನ್ನು ತೋರಿಸಿದ್ದರು. ಅದರ ನೆನಪಿಗಾಗಿ ಮೇ 11 ಅನ್ನು ರಾಷ್ಟ್ರೀಯ ತಂತ್ರಜ್ಞಾನ ದಿನವನ್ನಾಗಿ ಆಚರಿಸಲಾಗುತ್ತದೆ’ ಎಂದೂ ಹೇಳಿದರು.

‘ಆಪರೇಷನ್ ಸಿಂಧೂರ’ ಕುರಿತು ಪ್ರಸ್ತಾಪಿಸಿದ ಅವರು, ‘ಈ ಕಾರ್ಯಾಚರಣೆಯು ಭಾರತದ ಆತ್ಮವಿಶ್ವಾಸ, ಮಿಲಿಟರಿ ಸಾಮರ್ಥ್ಯದ ಪ್ರತೀಕವಾಗಿದೆ. ನಮ್ಮ ಪಡೆಗಳ ಸಾಮರ್ಥ್ಯವು ಪಾಕಿಸ್ತಾನ ಮಿಲಿಟರಿಯ ಕೇಂದ್ರ ಕಚೇರಿ ಇರುವ ರಾವಲ್ಪಿಂಡಿವರೆಗೂ ಅನುಭವಕ್ಕೆ ಬಂದಿದೆ ’ ಎಂದು ಹೇಳಿದರು.

‘ಉಗ್ರವಾದದ ವಿರುದ್ಧ ಕ್ರಮ ಕೈಗೊಳ್ಳದೇ ಇದ್ದಲ್ಲಿ ಗಡಿಗೆ ಹೊಂದಿಕೊಂಡಿರುವ ಪ್ರದೇಶಗಳು ಸುರಕ್ಷಿತವಾಗಿ ಇರಲು ಸಾಧ್ಯವಿಲ್ಲ ಎಂಬುದನ್ನು ಭಾರತ ಈ ಕಾರ್ಯಾಚರಣೆ ಮೂಲಕ ಸ್ಪಷ್ಟಪಡಿಸಿದೆ’ ಎಂದೂ ಹೇಳಿದ್ದಾರೆ.



ಉತ್ತರ ಪ್ರದೇಶದ ಲಖನೌನಲ್ಲಿ ಸ್ಥಾಪನೆಯಾದ ಬ್ರಹ್ಮೋಸ್ ಏರೋಸ್ಪೇಸ್ ಇಂಟಿಗ್ರೇಶನ್ ಅಂಡ್ ಟೆಸ್ಟಿಂಗ್ ಫೆಸಿಲಿಟಿಯನ್ನು (ಬಿಎಐಟಿಎಫ್) ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಭಾನುವಾರ ವರ್ಚುವಲ್ ಆಗಿ ಉದ್ಘಾಟಿಸಿದರು —ಪಿಟಿಐ ಚಿತ್ರ

> ಜಗತ್ತು ಬಲಿಷ್ಠರನ್ನು ಮಾತ್ರ ಗೌರವಿಸುತ್ತದೆ. ವಿಶ್ವದ ಬಲಿಷ್ಠ ರಾಷ್ಟ್ರಗಳ ಪೈಕಿ ಈಗ ಭಾರತವೂ ಒಂದಾಗಿದೆ
> **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

> ಬ್ರಹ್ಮೋಸ್ ಕ್ಷಿಪಣಿ ಅತ್ಯಂತ ಶಕ್ತಿಶಾಲಿ. ಇದರ ಸಾಮರ್ಥ್ಯ ಕುರಿತು ಹೆಚ್ಚು ಮಾಹಿತಿ ಬೇಕಾದಲ್ಲಿ ಪಾಕಿಸ್ತಾನವನ್ನು ಕೇಳಿ
> **ಯೋಗಿ ಆದಿತ್ಯನಾಥ,** ಉತ್ತರ ಪ್ರದೇಶ ಸಿ.ಎಂ

ಜನಗಣತಿಗೆ ‘ರಾಜ್ಯದ ಆ್ಯಪ್’?

ಒಂದನೇ ಪುಟದಿಂದ...

ರಾಜ್ಯದಲ್ಲಿ ಒಳ ಮೀಸಲಾತಿ ಸಮೀಕ್ಷೆಯನ್ನು ಯಾವ ರೀತಿ ನಡೆಸಲಾಗುತ್ತಿದೆ, ಪ್ರಕ್ರಿಯೆಯ ಈವರೆಗಿನ ಪ್ರಗತಿ, ಮೊಬೈಲ್ ತಂತ್ರಾಂಶದ ಅಭಿವೃದ್ಧಿ ಸೇರಿದಂತೆ ವಿವರವಾದ ಮಾಹಿತಿಯನ್ನು ಕೇಂದ್ರ ಸರ್ಕಾರ ಕೇಳಿದೆ. ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸುವ ಸಂಬಂಧ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್ ಆಯೋಗ ಸರ್ಕಾರಕ್ಕೆ ಸಲ್ಲಿಸಿದ್ದ ಶಿಫಾರಸು, ಅದರ ಆಧಾರದಲ್ಲಿ ಸಮೀಕ್ಷೆ ನಡೆಸಲು ಮೊಬೈಲ್ ತಂತ್ರಾಂಶದ ವಿನ್ಯಾಸ ಸೇರಿದಂತೆಈವರೆಗೆಏನೇನುಕ್ರಮಗಳನ್ನು ತೆಗೆದುಕೊಳ್ಳಲಾಗಿದೆ, ಗಣತಿದಾರರು ಎಷ್ಟು? ಪ್ರಶ್ನಾವಳಿಗಳೇನು ಮತ್ತಿತರ ಎಲ್ಲ ಮಾಹಿತಿಯನ್ನು ರಾಜ್ಯ ಸರ್ಕಾರ ನೀಡಿದೆ ಎಂದೂ ಮೂಲಗಳು ಹೇಳಿವೆ.

10.04 ಲಕ್ಷ ಕುಟುಂಬಗಳ ಸಮೀಕ್ಷೆ: ರಾಜ್ಯದಲ್ಲಿ ಮೇ 5ರಿಂದ ಪರಿಶಿಷ್ಟ ಜಾತಿಯ ಕುಟುಂಬಗಳ ದತ್ತಾಂಶ ಸಂಗ್ರಹ ನಡೆಯುತ್ತಿದೆ. ಗಣತಿದಾರರು ಈವರೆಗೆ ಪರಿಶಿಷ್ಟ ಜಾತಿಯ 10.04 ಲಕ್ಷ ಕುಟುಂಬಗಳ ಸಮೀಕ್ಷೆ ಪೂರ್ಣಗೊಳಿಸಿದ್ದಾರೆ. ಅಲ್ಲದೆ, ಪರಿಶಿಷ್ಟ ಜಾತಿಯೇತರ 67.77 ಲಕ್ಷ ಮನೆಗಳಿಗೆ ಭೇಟಿ ನೀಡಿದ್ದಾರೆ. ಈ ಮನೆ ಮನೆ ಸಮೀಕ್ಷೆಯು ಇದೇ 17ರವರೆಗೆ ನಡೆಯಲಿದೆ.

ಮತಗಟ್ಟೆ ಮಟ್ಟದಲ್ಲಿ ಮತದಾರರ ಪಟ್ಟಿಯ ಆಧಾರದಲ್ಲಿ ಸಮೀಕ್ಷೆ ನಡೆಸಲಾಗುತ್ತಿದೆ. ಪರಿಶಿಷ್ಟ ಜಾತಿಯವರ ಯಾವುದೇ ಮನೆ ಸಮೀಕ್ಷೆಯಿಂದ ಹೊರಗೆ ಉಳಿಯಬಾರದೆಂಬ ಕಾರಣಕ್ಕೆ ಪ್ರತಿ ಮನೆಗೂ ಗಣತಿದಾರರು ಭೇಟಿ ನೀಡುತ್ತಿದ್ದಾರೆ. ಪರಿಶಿಷ್ಟ ಜಾತಿಯವರ ಮನೆಯಿಂದ ಸಮಗ್ರ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ. ಪರಿಶಿಷ್ಟ ಜಾತಿಯೇತರರ ಮನೆಯಾಗಿದ್ದರೆ, ಆ ಮನೆಯಲ್ಲಿರುವ ಒಟ್ಟು ಜನರ ಸಂಖ್ಯೆಯನ್ನು ಮಾತ್ರ ಮೊಬೈಲ್ ಆ್ಯಪ್‌ನಲ್ಲಿ ನಮೂದಿಸುತ್ತಾರೆ. ಇದರಿಂದ ರಾಜ್ಯದಲ್ಲಿರುವ ಒಟ್ಟು ಜನಸಂಖ್ಯೆಯೂ ಲಭ್ಯವಾಗಲಿದೆ.

ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ (ಜಾತಿ ಜನಗಣತಿ) ರಾಜ್ಯದಲ್ಲಿ ಪರಿಶಿಷ್ಟ ಜಾತಿಯ 23 ಲಕ್ಷ ಮನೆಗಳನ್ನು ಗುರುತಿಸಲಾಗಿತ್ತು. ಈಗ ಪರಿಶಿಷ್ಟ ಜಾತಿಯವರ ಕುಟುಂಬಗಳ ಸಂಖ್ಯೆ 25 ಲಕ್ಷಕ್ಕೆ ಹೆಚ್ಚಳ ಆಗಿರಬಹುದು ಎಂದು ಅಂದಾಜಿಸಲಾಗಿದೆ. ಸಮೀಕ್ಷೆಗಾಗಿ ಎಲ್ಲ ಗಣತಿದಾರರು ಏಕಕಾಲಕ್ಕೆ ಮೊಬೈಲ್ ಆ್ಯಪ್‌ನಲ್ಲಿ ಲಾಗ್ ಇನ್ ಮಾಡುವುದರಿಂದ ತಾಂತ್ರಿಕ ಸಮಸ್ಯೆಗಳು ಕಾಣಿಸಿಕೊಂಡಿವೆ. ಅಲ್ಲದೆ, ಆಧಾರ್ ಮತ್ತು ಪಡಿತರ ಚೀಟಿಯ ಅಧಿಕೃತತೆಯನ್ನು ವೆಬ್‌ಸೈಟ್‌ನಿಂದ ದೃಢೀಕರಿಸಿಕೊಳ್ಳಬೇಕಿದೆ. ಈ ಸಂದರ್ಭದಲ್ಲಿಯೂ ತಾಂತ್ರಿಕ ದೋಷಗಳು ಕಂಡುಬಂದಿವೆ. ಸದ್ಯ ಎಲ್ಲ ಸಮಸ್ಯೆಗಳನ್ನು ಸರಿಪಡಿಸಲಾಗಿದೆ ಎಂದು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಆಯೋಗದ ಮೂಲಗಳು ತಿಳಿಸಿವೆ.

ಸಮೀಕ್ಷೆಯಲ್ಲಿ ಸಂಗ್ರಹಿಸಿದ ದತ್ತಾಂಶಗಳನ್ನು ದಾಖಲಿಸಲು ಪ್ರತ್ಯೇಕ ವೆಬ್‌ಸೈಟ್ ರೂಪಿಸಲಾಗುತ್ತಿದೆ. ಈ ವೆಬ್‌ಸೈಟ್‌ನಲ್ಲಿ ತಮ್ಮ ಮೊಬೈಲ್ ಸಂಖ್ಯೆ ನಮೂದಿಸಿದಾಗ ಬರುವ ಒಟಿಪಿ ದಾಖಲಿಸಿ, ಪ್ರತಿಯೊಬ್ಬರೂ ಸಮೀಕ್ಷೆಯ ವೇಳೆ ನೀಡಿದ್ದ ತಮ್ಮ ಮಾಹಿತಿಯನ್ನು ವೈಯಕ್ತಿಕವಾಗಿ ಪರಿಶೀಲಿಸಬಹುದು. ಆಕ್ಷೇಪಗಳಿದ್ದರೆ ಸರಿಪಡಿಸಲು ಅರ್ಜಿ ಕೊಡಬಹುದು. ಆ ಮೂಲಕ ತಿದ್ದುಪಡಿಗೂ ಅವಕಾಶವಿದೆ. ಎರಡನೇ ಹಂತದ ಸಮೀಕ್ಷೆಯು ಮೇ 19ರಿಂದ 21ರವರೆಗೆ ಮತಗಟ್ಟೆ ಪ್ರದೇಶವಾರು ವಿಶೇಷ ಶಿಬಿರಗಳನ್ನು ಏರ್ಪಡಿಸಿ ನಡೆಯಲಿದೆ. ಆನ್‌ಲೈನ್ ಮೂಲಕ ಸ್ವಯಂ ಘೋಷಣೆಗೆ ಮೇ 19ರಿಂದ 23ರವರೆಗೆ ಅವಕಾಶ ಸಿಗಲಿದೆ ಎಂದೂ ಮೂಲಗಳು ತಿಳಿಸಿವೆ.



ತಾಯಿಯ ಮಮತೆ

ಪಶ್ಚಿಮ ಬಂಗಾಳದ ನಾದಿಯಾದಲ್ಲಿ ತಾಯಂದಿರ ದಿನಾಚರಣೆಯಾದ ಭಾನುವಾರ ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ಇಟ್ಟಿಗೆ ಭಟ್ಟಿಯಲ್ಲಿ ಮಹಿಳೆಯರು ಕೆಲಸ ಮಾಡಿದರು –ಪಿಟಿಐ ಚಿತ್ರ

ಸಂಘರ್ಷ ಶಮನ: ಗಡಿ ಶಾಂತ

ಒಂದನೇ ಪುಟದಿಂದ...

‘ತಡರಾತ್ರಿಯಲ್ಲಿ ರಾಕೆಟ್‌ಗಳು ಮತ್ತು ಡ್ರೋನ್‌ಗಳ ದಾಳಿ ಕಂಡುಬಂದಿದೆ. ಇದು ಯಾವ ರೀತಿಯ ಸಂಘರ್ಷ ವಿರಾಮ’ ಎಂದು ಬಾರಾಮುಲ್ಲಾದ ನಿವೃತ್ತ ಶಿಕ್ಷಕರೊಬ್ಬರು ಪ್ರಶ್ನಿಸುತ್ತಾರೆ.

‘ತಾತ್ಕಾಲಿಕ ಕದನ ವಿರಾಮದಿಂದ ನಾವು ರೋಸಿ ಹೋಗಿದ್ದೇವೆ. ನಮಗೆ ಶಾಶ್ವತವಾದ ಕದನ ವಿರಾಮ ಬೇಕು’ ಎಂದೂ ಹೇಳಿದ್ದಾರೆ.

ಕಣಿವೆಯ ಪಟ್ಟಣಗಳು ಹಾಗೂ ಶ್ರೀನಗರದ ಐತಿಹಾಸಿಕ ಮಾರುಕಟ್ಟೆಗಳಲ್ಲಿ ಜನರು ಖರೀದಿಗೆ ಮುಂದಾಗಿರುವುದು ಕಂಡುಬಂತು.

‘ಕಳೆದ ಒಂದು ವಾರದಿಂದ ವ್ಯಾಪಾರ ಇಲ್ಲದೇ ಸಂಕಷ್ಟ ಎದುರಿಸಿದ್ದೆವು. ಜನರು ಮನೆಯಿಂದ ಹೊರಗೆ ಬರುವುದಕ್ಕೂ ಹೆದರುತ್ತಿದ್ದರು. ಇಂದು (ಭಾನುವಾರ) ಜನರು ಮಾರುಕಟ್ಟೆಗೆ ದಾಂಗುಡಿ ಇಟ್ಟಿದ್ದಾರೆ. ಇದು ಭಾನುವಾರದ ಶ್ರೀನಗರ ಮಾರುಕಟ್ಟೆ ಎಂಬ ಭಾವನೆ ಮೂಡುತ್ತಿದೆ’ ಎಂದು ಹಳೆ ಬಟ್ಟೆಗಳನ್ನು ಮಾರಾಟ ಮಾಡುವ ಫಯಾಜ್ ದಾರ್ ಹೇಳುತ್ತಾರೆ.

ಈ ಮಾತಿಗೆ ದನಿಗೂಡಿಸುವ ಮತ್ತೊಬ್ಬ ವರ್ತಕ ರಫೀಕ್ ಮೀರ್,‘ಕಳೆದ ಕೆಲ ದಿನಗಳಂದು ಬಾನಂಗಳದಲ್ಲಿ ಯುದ್ಧವಿಮಾನಗಳು ಅಬ್ಬರಿಸುತ್ತಾ ಹಾರಾಟ ನಡೆಸಿದ್ದರಿಂದ ಭಯಭೀತರಾಗಿದ್ದೆವು. ಯುದ್ಧ ಶುರುವಾಗಿಯೇ ಬಿಡುತ್ತದೆ ಎಂಬ ಭಾವನೆ ಮೂಡಿತ್ತು. ಇಂದು ನಾವು ನಿರಾಳರಾಗಿದ್ದೇವೆ. ನನ್ನ ಮಕ್ಕಳೊಂದಿಗೆ ಅಂಗಡಿಗೆ ಬಂದು, ವ್ಯಾಪಾರ ಶುರು ಮಾಡಿದ್ದೇನೆ’ ಎಂದು ಹೇಳಿದರು.

ಪಂಜಾಬ್‌ನ ಅಮೃತಸರ, ಪಠಾಣ್‌ಕೋಟ್ ಹಾಗೂ ಫಿರೋಜ್‌ಪುರ ಸೇರಿದಂತೆ ಗಡಿಗೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲಿ ಜನಜೀವನ ಸಹಜಸ್ಥಿತಿಗೆ ಬಂದಿದೆ. ಬೆಳಗಿನ ವಾಯುವಿಹಾರಕ್ಕೆ ಜನರು ತೆರಳುತ್ತಿರುವುದು ಇದಕ್ಕೆ ಪುಷ್ಟಿ ನೀಡುವಂತಿದೆ.

ಅಮೃತಸರ ಜಿಲ್ಲಾಡಳಿತ ಕೂಡ, ನಿತ್ಯದ ಕೆಲಸ–ಕಾರ್ಯಗಳಲ್ಲಿ ತೊಡಗುವಂತೆ ಜನರಿಗೆ ತಿಳಿಸಿದೆ. ಜಿಲ್ಲಾಧಿಕಾರಿ ಸಾಕ್ಷಿ ಸಾಹ್ನಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುರುಪ್ರೀತ್ ಸಿಂಗ್ ಭುಲ್ಲರ್ ಅವರು ನಗರದಾದ್ಯಂತ ಸಂಚರಿಸಿ, ಜನರಲ್ಲಿನ ಆತಂಕ ನಿವಾರಿಸುವ ಪ್ರಯತ್ನ ಮಾಡಿದ್ದಾರೆ.

‘ಅಮೃತಸರದ ಜನರು ಧೈರ್ಯಶಾಲಿಗಳು. ಜಿಲ್ಲಾಡಳಿತದ ಮನವಿಗೆ ಧೃತಿಗೆಡದೇ ತಾಳ್ಮೆಯಿಂದ ಸ್ಪಂದಿಸಿದ್ದಕ್ಕೆ ಎಲ್ಲರಿಗೂ ಧನ್ಯವಾದ’ ಎಂದು ಸಾಕ್ಷಿ ಸಾಹ್ನಿ ಹೇಳಿದ್ದಾರೆ.

‘ಆತಂಕಪಡುವ ಅಗತ್ಯವಿಲ್ಲ. ಭದ್ರತಾ ಪಡೆಗಳು ನಿರಂತರವಾಗಿ ನಿಗಾ ವಹಿಸಿದ್ದು, ಜನರು ತಮ್ಮ ಉದ್ಯೋಗ, ದಿನನಿತ್ಯದ ಕಾರ್ಯಗಳಲ್ಲಿ ತೊಡಗಬಹುದು’ ಎಂದು ಜಲಂಧರ ಜಿಲ್ಲಾಧಿಕಾರಿ ಹಿಮಾಂಶು ಅಗರವಾಲ್ ಹೇಳಿರುವುದು ಜನರಲ್ಲಿ ನೆಮ್ಮದಿ ಮೂಡಿಸಿದೆ.

ಪಟಾಕಿಗಳನ್ನು ಸಿಡಿಸಬಾರದು ಹಾಗೂ ಡ್ರೋನ್‌ಗಳ ಹಾರಾಟ ನಡೆಸದಂತೆ ಜಿಲ್ಲಾಡಳಿತವು ಜನರಿಗೆ ಮನವಿ ಮಾಡಿದೆ. ಪಂಜಾಬ್, ಪಾಕಿಸ್ತಾನದೊಂದಿಗೆ 553 ಕಿ.ಮೀ. ಉದ್ದದಷ್ಟು ಗಡಿ ಹಂಚಿಕೊಂಡಿದೆ.

‘ಕಳೆದ ಕೆಲ ದಿನಗಳಿಂದ ಇಲ್ಲಿನ ಜನರಲ್ಲಿ ಆತಂಕ ಇತ್ತು. ನಮ್ಮ ಭದ್ರತಾ ಪಡೆಗಳು ಪಾಕಿಸ್ತಾನ ನಡೆಸುವ ದುಸ್ಸಾಹಸಗಳಿಂದ ನಮ್ಮನ್ನು ರಕ್ಷಿಸುತ್ತವೆ ಎಂಬ ವಿಶ್ವಾಸ ಇತ್ತು’ ಎಂದು ಪಠಾಣ್‌ಕೋಟ್ ನಿವಾಸಿ ಸಿಮ್ರನ್ ಹೇಳುತ್ತಾರೆ.

ಮಕ್ಕಳು ಮತ್ತೆ ಉದ್ಯಾನದತ್ತ ಹೆಜ್ಜೆ ಹಾಕಿದ್ದು, ಆಟೋಟಗಳಲ್ಲಿ ಖುಷಿ ಕಾಣುತ್ತಿದ್ದಾರೆ. ರಸ್ತೆಗಳು ಮತ್ತೆ ಜನರು–ವಾಹನಗಳಿಂದ ತುಂಬಿವೆ. ಇಷ್ಟಾದರೂ ಜನರ ಮನದಲ್ಲಿ ಸುಪ್ತವಾಗಿ ಆತಂಕ ಇದ್ದೇ ಇದೆ. ಸಹಜಸ್ಥಿತಿ ಮರಳಿದ್ದರೂ ಸರ್ಕಾರದ ಆಶ್ವಾಸನೆ ಇದ್ದಾಗ್ಯೂ ಜನರು ಎಚ್ಚರಿಕೆಯಿಂದಲೇ ಇದ್ದಾರೆ.


ಜಮ್ಮು–ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಗೆ ಹೊಂದಿಕೊಂಡಿರುವ ನಿಯಂತ್ರಣ ರೇಖೆ ಉದ್ದಕ್ಕೂ ಪಾಕಿಸ್ತಾನ ನಡೆಸಿದ ದಾಳಿಯಿಂದಾಗಿ ಬಿದ್ದಿರುವ ಶೆಲ್‌ಗಳಲ್ಲಿ ಹಲವು ಸ್ಫೋಟಗೊಂಡಿರದ ಕಾರಣ ಜನರನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗಿದೆ —ಪಿಟಿಐ ಚಿತ್ರ

ಗುಜರಾತ್ ಗಡಿ ಜಿಲ್ಲೆಗಳು ಸಹಜ ಸ್ಥಿತಿಗೆ

ಅಹಮದಾಬಾದ್: ಭಾರತ–ಪಾಕಿಸ್ತಾನದ ನಡುವೆ ಕದನ ವಿರಾಮ ಘೋಷಣೆಯಾದ ಬಳಿಕ ಗುಜರಾತ್‌ನ ಕಛ್, ಬನಾಸ್‌ಕಾಂತ ಹಾಗೂ ಪಠಾಣ್ ಜಿಲ್ಲೆಗಳಲ್ಲಿ ಸಹಜಸ್ಥಿತಿ ಮರಳಿದೆ.

ಯಾವುದೇ ಡ್ರೋನ್‌ಗಳ ಅನುಮಾನಾಸ್ಪದ ಹಾರಾಟ ವರದಿಯಾಗದ ಹಿನ್ನೆಲೆಯಲ್ಲಿ ವಾರಾಂತ್ಯದ ಚಟುವಟಿಕೆಗಳಲ್ಲಿ ಜನರು ಎಂದಿನಂತೆ ಭಾಗಿಯಾಗಲು ಸಾಧ್ಯವಾಗಿದೆ.

ಕಳೆದ ಒಂದು ವಾರದಲ್ಲಿ ಗುಜರಾತ್‌ನ ವಿವಿಧ ಭಾಗಗಳನ್ನು ಗುರಿಯಾಗಿಸಿ ಡ್ರೋನ್‌ಗಳ ಮೂಲಕ ದಾಳಿಗೆ ಪಾಕಿಸ್ತಾನ ಯತ್ನಿಸಿತ್ತು. ಆದರೆ, ರಕ್ಷಣಾ ಪಡೆಗಳು ಈ ಯತ್ನವನ್ನು ವಿಫಲಗೊಳಿಸಿದ್ದವು.
ಅಲ್ಲದೇ, ಈ ಜಿಲ್ಲೆಗಳಲ್ಲಿ ಮುಂಜಾಗ್ರತಾ ಕ್ರಮವಾಗಿ ಬ್ಲ್ಯಾಕ್‌ಔಟ್ (ದೀಪಗಳನ್ನು ಆರಿಸುವುದು) ಘೋಷಿಸಲಾಗಿತ್ತು.

ಇದೀಗ ಪರಿಸ್ಥಿತಿ ತಿಳಿಗೊಂಡಿರುವ ಕಾರಣ ಪಟ್ಟಣಗಳು ಸಹಜ ಸ್ಥಿತಿಗೆ ಮರಳಿವೆ. ಆದಾಗ್ಯೂ, ಯಾವುದೇ ಅಹಿತಕರ ಘಟನೆಗಳ ಸದಾ ಎಚ್ಚರಿಕೆ ವಹಿಸುವಂತೆಯೂ ಅಧಿಕಾರಿಗಳು ಜನರಿಗೆ ನಿರ್ದೇಶಿಸಿದ್ದಾರೆ ಎನ್ನಲಾಗಿದೆ.

ಮಾರುಕಟ್ಟೆಗಳಲ್ಲಿ ಜನರು ಮತ್ತೆ ನೆರೆದಿದ್ದಾರೆ. ಕರಾವಳಿ ಪಟ್ಟಣಗಳಾದ ಜಾಮ್‌ನಗರ, ದೇವಭೂಮಿ ದ್ವಾರಕೆಯಲ್ಲಿ ಎಂದಿನಂತೆ ವಾಣಿಜ್ಯ ಚಟುವಟಿಕೆಗಳು ಪುನಾರಂಭಗೊಂಡಿವೆ.

ಅತ್ಯಾಚಾರ; ಆರೋಪಿ ಬಂಧನ

ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ ನಾಲ್ಕು ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆದಿದ್ದು, ಆರೋಪಿ ಅಜಮೀರ್‌ಸಾಬ್ ಎಂಬಾತನನ್ನು ಬಳಗಾನೂರು ಪೊಲೀಸರು ಭಾನುವಾರ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ ಮನೆ ಮುಂದೆ ಬಾಲಕಿ ಆಟವಾಡುತ್ತಿದ್ದಳು. ಈ ವೇಳೆ ಅಜಮೀರ್‌ಸಾಬ್ ಬಾಲಕಿಗೆ ಹಣ ನೀಡಿ ಪುಸಲಾಯಿಸಿ ಅತ್ಯಾಚಾರ ಎಸಗಿ ಪರಾರಿಯಾಗಿದ್ದ.

ದೇಗುಲ ಪ್ರವೇಶಿಸಿದ್ದ ದಲಿತ ಯುವಕ ಹೊರಕ್ಕೆ

ಒಂದನೇ ಪುಟದಿಂದ...

ಈ ಕುರಿತು ಯುವಕ ಭಾನುವಾರ ಬಡವನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ನಂತರ ಗ್ರಾಮಸ್ಥರ ಒತ್ತಾಯದ ಮೇರೆಗೆ ದೂರು ವಾಪಸ್ ಪಡೆದಿದ್ದಾರೆ.

ಈ ಬೆಳವಣಿಗೆ ನಂತರ ಹೆಚ್ಚುವರಿ ಪೊಲೀಸ್‌ವರಿಷ್ಠಾಧಿಕಾರಿ ಸಿ.ಗೋಪಾಲ್, ಡಿವೈಎಸ್‌ಪಿ ಮಂಜುನಾಥ್, ತಹಶೀಲ್ದಾರ್ ಶಿರೀನ್ ತಾಜ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ದಿನೇಶ್ ಅವರು ಗ್ರಾಮಕ್ಕೆ ಭೇಟಿ ನೀಡಿ ಶಾಂತಿಸಭೆ ನಡೆಸಿದರು.

ಶಾಂತಿಸಭೆಯಲ್ಲಿ ಪರಿಶಿಷ್ಟ ಯುವಕ, ಒಕ್ಕಲಿಗ ಸಮುದಾಯದವರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು. ಮುಂದಿನ ದಿನಗಳಲ್ಲಿ ದೇವಸ್ಥಾನ ಪ್ರವೇಶಿಸಲು ಯಾರಿಗೂ ಅಡ್ಡಿಪಡಿಸಬಾರದು ಎಂದು ಅಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದರು.

‘ಸಮಸ್ಯೆ ಇತ್ಯರ್ಥಕ್ಕೆ ಶಾಂತಿಯುತ ಮಾತುಕತೆ ಮಾರ್ಗ’

ಇಸ್ಲಾಮಾಬಾದ್ (ಪಿಟಿಐ): ಜಲ ಸಂಪನ್ಮೂಲ ಹಂಚಿಕೆ ಮತ್ತು ಕಾಶ್ಮೀರ ಸಮಸ್ಯೆ ಸೇರಿದಂತೆ ಉಭಯ ದೇಶಗಳ ನಡುವಿನ ದೀರ್ಘಕಾಲದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಶಾಂತಿಯುತ ಮಾತುಕತೆಯ ಮಾರ್ಗವನ್ನು ಅಳವಡಿಸಿಕೊಳ್ಳಬೇಕು ಎಂದು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಪ್ರತಿಪಾದಿಸಿದ್ದಾರೆ.

ಕದನ ವಿರಾಮ ಘೋಷಣೆಯಾದ ಬೆನ್ನಲ್ಲೇ ಶನಿವಾರ ರಾತ್ರಿ ದೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಾದೇಶಿಕ ಶಾಂತಿಯ ಹಿತದೃಷ್ಟಿಯಿಂದ ಭಾರತದೊಂದಿಗಿನ ಒಪ್ಪಂದಕ್ಕೆ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾಗಿ ಹೇಳಿದರು.

ಕದನವಿರಾಮ ಜಾರಿಗೆ ಬದ್ಧ: ಪಾಕಿಸ್ತಾನ

‘ಭಾರತದ ಜತೆಗೆ ಮಾಡಿಕೊಂಡಿರುವ ಕದನವಿರಾಮ ಒಪ್ಪಂದವನ್ನು ಜಾರಿಗೊಳಿಸಲು ಬದ್ಧರಾಗಿದ್ದೇವೆ’ ಎಂದು ಪಾಕಿಸ್ತಾನ ಭಾನುವಾರ ಹೇಳಿದೆ. ಅಲ್ಲದೇ, ಪ್ರಸಕ್ತ ಪರಿಸ್ಥಿತಿಯನ್ನು ತಮ್ಮ ರಕ್ಷಣಾ ಪಡೆಗಳು ಜವಾಬ್ದಾರಿಯುತವಾಗಿ, ಸಂಯಮದಿಂದ ನಿರ್ವಹಿಸುತ್ತಿವೆ ಎಂಬುದಾಗಿಯೂ ಪ್ರತಿಪಾದಿಸಿದೆ.

ಅಣ್ವಸ್ತ್ರಗಳನ್ನು ಹೊಂದಿರುವ ಎರಡು ದೇಶಗಳ ನಡುವಿನ ಉದ್ವಿಗ್ನತೆ ಶಮನಗೊಳಿಸಲು ಅಮೆರಿಕ, ಬ್ರಿಟನ್, ಟರ್ಕಿ, ಸೌದಿ ಅರೇಬಿಯಾ, ಕತಾರ್, ಯುಎಇ ನಾಯಕರು ಮತ್ತು ವಿಶ್ವಸಂಸ್ಥೆಯ ಮುಖ್ಯಸ್ಥರು ರಾಜತಾಂತ್ರಿಕ ಪ್ರಯತ್ನಗಳನ್ನು ಸಕಾರಾತ್ಮಕವಾಗಿ ನಡೆಸಿದ್ದಾರೆ. ಇದಕ್ಕಾಗಿ ಅವರೆಲ್ಲರಿಗೂ ಕೃತಜ್ಞತೆ ಅರ್ಪಿಸುವುದಾಗಿ ಪ್ರಧಾನಿ ಹೇಳಿದರು.

ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ತನ್ನ ಮಿತ್ರರಾಷ್ಟ್ರವಾದ ಚೀನಾ ಅಗತ್ಯ ಬೆಂಬಲ ಮತ್ತು ಸಹಕಾರ ನೀಡಿದೆ ಎಂದು ಅವರು ವಿವರಿಸಿದರು.

ಕೋಲ್ಕತ್ತದಿಂದ ಫೈನಲ್ ಸ್ಥಳಾಂತರ?

ಇದೇ 16 ಅಥವಾ 17ರಿಂದ ಐಪಿಎಲ್ ಪುನರಾರಂಭ • ವೇಳಾಪಟ್ಟಿ ಇಂದು

ನವದೆಹಲಿ (ಪಿಟಿಐ): ಭಾರತ-ಪಾಕಿಸ್ತಾನ ಸೇನಾ ಸಂಘರ್ಷದ ಕಾರಣ ಸ್ಥಗಿತಗೊಂಡಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಬಾಕಿ ಪಂದ್ಯಗಳು ನಾಲ್ಕು ನಗರಗಳಲ್ಲಿ ಆಯೋಜನೆಗೊಳ್ಳುವ ಸಾಧ್ಯತೆ ಇದೆ. ಫೈನಲ್ ಪಂದ್ಯವನ್ನು ಕೋಲ್ಕತ್ತದಿಂದ ಸ್ಥಳಾಂತರಿಸುವ ಸಂಭವವಿದೆ.

ಮೇ 9ರಂದು ಒಂದು ವಾರದ ಮಟ್ಟಿಗೆ ಲೀಗ್ ಸ್ಥಗಿತಗೊಳಿಸಲಾಗಿತ್ತು. ಆದರೆ ಶನಿವಾರ ಯುದ್ಧ ಸ್ವರೂಪದ ಸಂಘರ್ಷ ಕೊನೆಗೊಳಿಸಲು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಇದರಿಂದ ಲೀಗ್ ಮುಂದುವರಿಯಲು ಅವಕಾಶವಾಗಿದೆ. ಐಪಿಎಲ್ ಆಡಳಿತ ಮಂಡಳಿ ಮತ್ತು ಬಿಸಿಸಿಐ ಅಧಿಕಾರಿಗಳು ಲೀಗ್ ಪುನರಾರಂಭಕ್ಕೆ ಸಂಬಂಧಿಸಿ ಯೋಜನೆ ರೂಪಿಸಲು ಭಾನುವಾರ ಸಭೆ ಸೇರಿದ್ದರು.

'ಲಖನೌ ಸೂಪರ್ ಜೈಂಟ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಣ ಪಂದ್ಯದೊಡನೆ ಲೀಗ್ ಪುನರಾರಂಭಗೊಳ್ಳಲಿದೆ' ಎಂದು ಐಪಿಎಲ್ ಮೂಲವೊಂದು ತಿಳಿಸಿದೆ. ಈ ಪಂದ್ಯ ಮೇ 9ರಂದು ನಿಗದಿಯಾಗಿತ್ತು.

'ಎಲ್ಲ ತಂಡಗಳಿಗೆ ಆಟಗಾರರನ್ನು ಕರೆಸಿಕೊಳ್ಳುವಂತೆ ತಿಳಿಸಲಾಗಿದೆ. ಟೂರ್ನಿಯ ಮೇ 16 ಅಥವಾ 17ರಂದು ಲಖನೌ ಪಂದ್ಯದೊಡನೆ ಮುಂದುವರಿಯಲಿದೆ. ಅಂತಿಮ ವೇಳಾಪಟ್ಟಿ ಸೋಮವಾರ ಹಂಚಿಕೊಳ್ಳಲಾಗುವುದು' ಎಂದು ಈ ಮೂಲ ಸುದ್ದಿಸಂಸ್ಥೆಗೆ ತಿಳಿಸಿದೆ.

'ಉಳಿದ ಎಲ್ಲ ಪಂದ್ಯಗಳು ನಾಲ್ಕು ಕ್ರೀಡಾಂಗಣಗಳಲ್ಲಿ ನಡೆಯಲಿವೆ. ದೆಹಲಿ ಮತ್ತು ಧರ್ಮಶಾಲಾಕ್ಕೆ ಉಳಿದ ಪಂದ್ಯಗಳ ಆತಿಥ್ಯ ಲಭ್ಯವಾಗುವುದಿಲ್ಲ. ಈ ಕ್ರೀಡಾಂಗಣದಿಂದ ಎಲ್ಲ ಸಲಕರಣೆಗಳನ್ನು ತೆಗೆದುಹಾಕಲಾಗಿದೆ' ಎಂದೂ ತಿಳಿಸಿದೆ.

ಕ್ವಾಲಿಫೈಯರ್ 1 ಮತ್ತು ಎಲಿಮಿನೇಟರ್ ಪಂದ್ಯಗಳ ಸ್ಥಳದಲ್ಲಿ ಬದಲಾವಣೆಯಾಗುವುದಿಲ್ಲ. ಈ ಪಂದ್ಯಗಳು ನಿಗದಿಯಂತೆ ಹೈದರಾಬಾದಿನಲ್ಲೇ ನಡೆಯಲಿವೆ. ಆದರೆ ಫೈನಲ್ ಪಂದ್ಯದ ಆತಿಥ್ಯ ಕೋಲ್ಕತ್ತದ ಬದಲು ಬೇರೆ ಕಡೆ ನಡೆಯುವ ಸಾಧ್ಯತೆಯಿದೆ. ಅಂದು ಕೋಲ್ಕತ್ತದಲ್ಲಿ ಮಳೆಯಾಗುವ ಮುನ್ಸೂಚನೆಯಿದೆ. ಒಂದು ವೇಳೆ ಫೈನಲ್ ಸ್ಥಳ ಬದಲಾದರೆ ಅದು ಅಹಮದಾಬಾದಿನಲ್ಲಿ ನಿಗದಿಯಾಗಲಿದೆ ಎಂದೂ ಮೂಲ ತಿಳಿಸಿದೆ.

'ಉಳಿದ ಪಂದ್ಯಗಳ ಪುನರಾರಂಭಕ್ಕೆ ಸಂಬಂಧಿಸಿ ಅಂತಿಮ ನಿರ್ಧಾರಕ್ಕೆ ಬರಲು ಇನ್ನು ಕೆಲ ದಿನಗಳಲ್ಲೇ ಮಂಡಳಿಯು ಫ್ರಾಂಚೈಸಿಗಳು, ಪ್ರಸಾರಕ ಸಂಸ್ಥೆ, ಪ್ರಾಯೋಜಕರು ಮತ್ತು ಆತಿಥ್ಯ ವಹಿಸುವ ರಾಜ್ಯ ಸಂಸ್ಥೆಗಳ ಜೊತೆ ಸಮಾಲೋಚನೆ ಆರಂಭಿಸಲಿದೆ.

ತಲಾ ಒಂದೊಂದು ಅಂಕ?: ಗಡಿಯಲ್ಲಿ ಉದ್ವಿಗ್ನತೆಯ ಕಾರಣ, ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಣ ಪಂದ್ಯ ಧರ್ಮಶಾಲಾದಲ್ಲಿ ಅರ್ಧದಲ್ಲೇ ಸ್ಥಗಿತಗೊಂಡಿತ್ತು. ಈ ಎರಡೂ ತಂಡಗಳಿಗೆ ತಲಾ ಒಂದೊಂದು ಪಾಯಿಂಟ್ ನೀಡುವ ಸಾಧ್ಯತೆಯಿದೆ. ತಂಡಗಳು ಅಂದು ಜಲಂಧರ್‌ಗೆ ಬಸ್‌ನಲ್ಲಿ ತೆರಳಿ ಅಲ್ಲಿಂದ ರೈಲಿನ ಮೂಲಕ ದೆಹಲಿಗೆ ತಲುಪಿದ್ದವು.

ಕೇವಲ ನಾಲ್ಕು ಕ್ರೀಡಾಂಗಣಗಳಿಗೆ ಮಾತ್ರ ಉಳಿದ 16 ಪಂದ್ಯಗಳ ಆತಿಥ್ಯ ವಹಿಸಿದರೆ, ಡೆಲ್ಲಿ ಕ್ಯಾಪಿಟಲ್ಸ್, ರಾಜಸ್ಥಾನ ರಾಯಲ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ತವರು ಪಂದ್ಯಗಳನ್ನು ಕಳೆದುಕೊಳ್ಳಲಿವೆ. ಲೀಗ್ ಪಂದ್ಯಗಳು ಹೈದರಾಬಾದ್, ಚೆನ್ನೈ, ಕೋಲ್ಕತ್ತ ಮತ್ತು ಬೆಂಗಳೂರಿನಲ್ಲಿ ನಡೆಯಲಿವೆ.

ಚೆನ್ನೈ, ರಾಜಸ್ಥಾನ ರಾಯಲ್ಸ್ ಮತ್ತು ಸನ್‌ರೈಸರ್ಸ್ ತಂಡಗಳು ಈಗಾಗಲೇ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿವೆ. ಏಳು ತಂಡಗಳು ನಾಲ್ಕು ಪ್ಲೇ ಆಫ್ ಸ್ಥಾನಗಳಿಗೆ ಪೈಪೋಟಿಯಲ್ಲಿವೆ.

ಸದ್ಯ ಗುಜರಾತ್ ಟೈಟನ್ಸ್ (16 ಅಂಕ, ನೆಟ್ ರನ್ ರೇಟ್ 0.793) ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು (16 ಪಾಯಿಂಟ್ಸ್, 0.482), ಪಂಜಾಬ್ ಕಿಂಗ್ಸ್ (15), ಮುಂಬೈ ಇಂಡಿಯನ್ಸ್ (14), ಡೆಲ್ಲಿ ಕ್ಯಾಪಿಟಲ್ಸ್ (13), ಕೋಲ್ಕತ್ತ ನೈಟ್ ರೈಡರ್ಸ್ (11) ಮತ್ತು ಲಖನೌ ಸೂಪರ್ ಜೈಂಟ್ಸ್ (10) ನಂತರದ ಸ್ಥಾನಗಳಲ್ಲಿವೆ.



ಸಾಂದರ್ಭಿಕ ಚಿತ್ರ

ಮುಖ್ಯಾಂಶಗಳು

- ದೆಹಲಿ ಮತ್ತು ಧರ್ಮಶಾಲಾಕ್ಕೆ ಪಂದ್ಯಗಳ ಆತಿಥ್ಯವಿಲ್ಲ
- 16 ಪಂದ್ಯಗಳ ಪರಿಷ್ಕೃತ ವೇಳಾಪಟ್ಟಿಗೆ ಸಿದ್ಧತೆ
- ಅಂಕಪಟ್ಟಿಯ ಅಗ್ರಸ್ಥಾನದಲ್ಲಿ ಗುಜರಾತ್ ಟೈಟನ್ಸ್

ಸ್ಮೃತಿ ಮಂದಾನ ಶತಕ • ಸ್ನೇಹ ರಾಣಾ, ಅಮನ್ಜೋತ್ ಕೌರ್ ಮಿಂಚಿನ ದಾಳಿ

ತ್ರಿಕೋನ ಸರಣಿ: ಭಾರತದ ಮುಡಿಗೆ ಕಿರೀಟ

ಕೊಲಂಬೊ (ಪಿಟಿಐ): ಎಡಗೈ ಬ್ಯಾಟರ್ ಸ್ಮೃತಿ ಮಂದಾನ ಅವರ ಚೆಂದದ ಶತಕದ ಬಲದಿಂದ ಭಾರತ ಮಹಿಳಾ ತಂಡವು ತ್ರಿಕೋನ ಏಕದಿನ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಜಯಿಸಿತು.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ 97 ರನ್‌ಗಳಿಂದ ಆತಿಥೇಯ ಶ್ರೀಲಂಕಾ ತಂಡವನ್ನು ಸೋಲಿಸಿದ ಭಾರತದ ವನಿತೆಯರು ಸರಣಿ ಕಿರೀಟವನ್ನು ತಮ್ಮ ಮುಡಿಗೇರಿಸಿಕೊಂಡರು. ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಸ್ಮೃತಿ (116; 101ಎಸೆತ, 4X15, 6X2) ಅವರ ಶತಕದ ಬಲದಿಂದ ಭಾರತ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 342 ರನ್ ಗಳಿಸಿತು. ಅದಕ್ಕುತ್ತರವಾಗಿ ಶ್ರೀಲಂಕಾ ತಂಡವು 48.2 ಓವರ್‌ಗಳಲ್ಲಿ 245 ರನ್ ಗಳಿಸಿ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು.

ಭಾರತ ತಂಡದ ವೇಗಿ ಅಮನ್ಜೋತ್ ಕೌರ್ (54ಕ್ಕೆ3) ಮತ್ತು ಸ್ಪಿನ್ನರ್ ಸ್ನೇಹ ರಾಣಾ (38ಕ್ಕೆ4) ಅವರು ಎದುರಾಳಿ ತಂಡವನ್ನು ಕಟ್ಟಿಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಶ್ರೀಲಂಕಾ ತಂಡದ ನಾಯಕಿ ಚಾಮರಿ ಅಟಪಟ್ಟು (51; 66ಎಸೆತ) ಅವರು ಅರ್ಧಶತಕ ಗಳಿಸಿದರು. ನೀಲಾಕ್ಷಿಕಾ ಸಿಲ್ವಾ (48; 58ಎ) ಉಪಯುಕ್ತ ಕಾಣಿಕೆ ನೀಡಿದರು.

ಈ ಸರಣಿಯ ಆರಂಭದಲ್ಲಿ ಸ್ಮೃತಿ ಉತ್ತಮ ಲಯದಲ್ಲಿ ಇರಲಿಲ್ಲ. ಫೈನಲ್‌ಗೂ ಮುನ್ನದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ಅವರು ಅರ್ಧಶತಕ ಗಳಿಸಿದ್ದರು. ಅದರಿಂದ ಅವರ ಆತ್ಮವಿಶ್ವಾಸ ಹೆಚ್ಚಿತ್ತು. ಅದು ಅಂತಿಮ ಪಂದ್ಯದಲ್ಲಿ ರಂಗೇರಿತು. ಏಕದಿನ ಕ್ರಿಕೆಟ್‌ನಲ್ಲಿ ಇದು ಅವರ 11ನೇ ಶತಕವಾಗಿದೆ.

ಸ್ಮೃತಿ ಮತ್ತು ಪ್ರತೀಕಾ ರಾವಲ್ ಮೊದಲ ವಿಕೆಟ್ ಜೊತೆಯಾಟದಲ್ಲಿ 70 ರನ್ ಸೇರಿಸಿದರು. ಸ್ಮೃತಿ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ ಹರ್ಲೀನ್ ಡಿಯೊಲ್ (47; 56ಎ, 4X4) ಅವರೊಂದಿಗೆ 120 ರನ್ ಸೇರಿಸಿದರು. 33ನೇ ಓವರ್‌ನಲ್ಲಿ ಸ್ಮೃತಿ ಅವರ ವಿಕೆಟ್ ಪಡೆದ ಹರ್ಷಿತಾ ಮಾಧವಿ ಸಂಭ್ರಮಿಸಿದರು. ಅದರೊಂದಿಗೆ ಸೊಗಸಾದ ಇನಿಂಗ್ಸ್ ತೆರೆಬಿತ್ತು. ಆಗ ತಂಡದ ಮೊತ್ತ ದ್ವಿಶತಕದಾಚೆ ದಾಟಿತ್ತು.

ಎಲ್ಲ ಪಂದ್ಯಗಳಲ್ಲಿಯೂ ಸೇರಿ ಅತಿ ಹೆಚ್ಚು ವಿಕೆಟ್ ಗಳಿಸಿದ ಸ್ನೇಹ ರಾಣಾ (15) ಅವರು ಸರಣಿಯ ಆಟಗಾರ್ತಿ ಗೌರವಕ್ಕೆ ಪಾತ್ರರಾದರು.

ನಾಯಕಿ ಹರ್ಮನ್‌ಪ್ರೀತ್ ಕೌರ್ (41; 30ಎ, 4X4, 6X1), ಜೆಮಿಮಾ ರಾಡ್ರಿಗಸ್ (44; 29ಎ, 4X4), ಅಮನ್ಜೋತ್ ಕೌರ್ (18; 12ಎ) ಮತ್ತು ದೀಪ್ತಿ ಶರ್ಮಾ (ಔಟಾಗದೆ 20; 14ಎ) ಅವರ ಮಿಂಚಿನ ಬ್ಯಾಟಿಂಗ್‌ನಿಂದಾಗಿ ತಂಡದ ಮೊತ್ತ ಹೆಚ್ಚಿತು. ಕೊನೆಯ 17 ಓವರ್‌ಗಳಲ್ಲಿ 152 ರನ್‌ಗಳು ಹರಿದುಬಂದವು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 7ಕ್ಕೆ342 (ಪ್ರತೀಕಾ ರಾವಲ್ 30, ಸ್ಮೃತಿ ಮಂದಾನ 116, ಹರ್ಲೀನ್ ಡಿಯೊಲ್ 47, ಹರ್ಮನ್‌ಪ್ರೀತ್ ಕೌರ್ 41, ಜೆಮಿಮಾ ರಾಡ್ರಿಗಸ್ 44, ದೀಪ್ತಿ ಶರ್ಮಾ ಔಟಾಗದೆ 20, ಮಾಲ್ಕಿ ಮದಾರಾ 74ಕ್ಕೆ2, ದೇವ್ಮಿ ವಿಹಂಗಾ 69ಕ್ಕೆ2, ಸುಗಂಧಿಕಾ ಕುಮಾರಿ 59ಕ್ಕೆ2) ಶ್ರೀಲಂಕಾ: 48.2 ಓವರ್‌ಗಳಲ್ಲಿ 245 (ವಿಶ್ಮೀ ಗುಣರತ್ನೆ 36, ಚಾಮರಿ ಅಟಪಟ್ಟು 51, ನೀಲಾಕ್ಷಿ ಡಿಸಿಲ್ವಾ 48, ಹರ್ಷಿತಾ ಸಮರವಿಕ್ರಮ 26, ಅನುಷ್ಕಾ ಸಂಜೀವನಿ 28, ಸುಗಂಧಿಕಾ ಕುಮಾರಿ 27, ಅಮನ್ಜೋತ್ ಕೌರ್ 54ಕ್ಕೆ3, ಸ್ನೇಹ ರಾಣಾ 38ಕ್ಕೆ4) **ಫಲಿತಾಂಶ:** ಭಾರತ ತಂಡಕ್ಕೆ 97 ರನ್‌ಗಳ ಜಯ. **ಪಂದ್ಯದ ಆಟಗಾರ್ತಿ:** ಸ್ಮೃತಿ ಮಂದಾನ. **ಸರಣಿ ಆಟಗಾರ್ತಿ:** ಸ್ನೇಹ ರಾಣಾ.



ಭಾರತ ಮಹಿಳಾ ಕ್ರಿಕೆಟ್ ತಂಡದವರ ಸಂಭ್ರಮ —ಬಿಸಿಸಿಐ ಎಕ್ಸ್ ಚಿತ್ರ

ಮುಖ್ಯಾಂಶಗಳು

- ಏಕದಿನ ಪಂದ್ಯಗಳಲ್ಲಿ 11ನೇ ಶತಕ ಬಾರಿಸಿದ ಸ್ಮೃತಿ ಮಂದಾನ
- ಭಾರತ ಮಹಿಳಾ ತಂಡಕ್ಕೆ 97 ರನ್ ಗೆಲುವು
- ಎಲ್ಲ ಪಂದ್ಯಗಳಲ್ಲಿಯೂ ಸೇರಿ ಅತಿ ಹೆಚ್ಚು ವಿಕೆಟ್ ಗಳಿಸಿದ ಸ್ನೇಹ ರಾಣಾ (5) ಸರಣಿ ಆಟಗಾರ್ತಿ

ಸಂಕ್ಷಿಪ್ತ ಸುದ್ದಿ

ಸ್ಟೇಡಿಯಂ ಎಫ್‌ಸಿಗೆ ಜಯ

ಬೆಂಗಳೂರು: ಸ್ಟೇಡಿಯಂ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಅನ್‌ಡಿಸ್ಪುಟೆಡ್ ತಂಡದ ವಿರುದ್ಧ 4–0 ಗೋಲುಗಳಿಂದ ಭರ್ಜರಿ ಗೆಲುವು ಸಾಧಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸ್ಟೇಡಿಯಂ ಎಫ್‌ಸಿ ಪರ ಆಕರ್ಷ್ ಕಾರುತುರಿ (8ನೇ, 18ನೇ ನಿ.), ಜಿಯಾಮ್ ಅಹಮದ್ (32ನೇ ನಿ.) ಮತ್ತು ವಿವೇಕ್ ಕುಮಾರ್ (42ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಲಾ ಎಸ್ಪೆರ್‌ನ್ಜಾ ತಂಡ 2–2 ಗೋಲುಗಳಿಂದ ಬಿಎನ್‌ಎಫ್‌ಸಿ ತಂಡದ ಜೊತೆ ಡ್ರಾ ಮಾಡಿಕೊಂಡಿತು.

ಕ್ರಿಕ್‌ಲೈಫ್‌ಗೆ ರೋಚಕ ಜಯ

ಬೆಂಗಳೂರು: ಕ್ರಿಕ್‌ಲೈಫ್ ಅಕಾಡೆಮಿ ತಂಡವು ಟೈಗರ್ ಕಪ್ 12 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ಬೂಟ್ ಕ್ಯಾಂಪ್ ತಂಡದ ವಿರುದ್ಧ 3 ರನ್‌ಗಳ ರೋಚಕ ಗೆಲುವು ಸಾಧಿಸಿತು.

ಸತ್ವಾ ಗ್ಲೋಬಲ್ ಸಿಟಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕ್ರಿಕ್‌ಲೈಫ್ ಅಕಾಡೆಮಿ 25 ಓವರ್‌ಗಳಲ್ಲಿ 156 ರನ್‌ಗಳಿಗೆ ಎಲ್ಲ ವಿಕೆಟ್‌ಗಳನ್ನೂ ಕಳೆದುಕೊಂಡಿತು. ಕ್ರಿಕ್‌ಲೈಫ್ ತಂಡದ ದಿಯಾ 46 ಹಾಗೂ ಶ್ರವಣ್ 41 ರನ್ ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ದಿ ಸ್ಕೂಲ್ ಆಫ್ ಕ್ರಿಕೆಟ್ ತಂಡವು ಸದರ್ನ್ ಕ್ರಿಕೆಟರ್ಸ್ ತಂಡವನ್ನು 39 ರನ್‌ಗಳಿಂದ ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಕ್ರಿಕ್‌ಲೈಫ್ ಅಕಾಡೆಮಿ: 25 ಓವರ್‌ಗಳಲ್ಲಿ 156 (ದಿಯಾ 46, ಶ್ರವಣ್ 41, ಆಯುಷ್ಮಾನ್ ತ್ರಿಪಾಠಿ 26ಕ್ಕೆ 4, ಧಿಯಾನ್ ಎ. ಕಾಂಚನ್ 25ಕ್ಕೆ 2) ಬೂಟ್‌ಕ್ಯಾಂಪ್ 25 ಓವರ್‌ಗಳಲ್ಲಿ 3ಕ್ಕೆ 153 (ಲಗನ್ ಗಂಗಯ್ಯ ಗೌಡ 40, ಜಿಷ್ಣುವೀರ್ 40, ಆಯುಷ್ಮಾನ್ ತ್ರಿಪಾಠಿ 31); ದಿ ಸ್ಕೂಲ್ ಆಫ್ ಕ್ರಿಕೆಟ್: 17.4 ಓವರ್‌ಗಳಲ್ಲಿ 89 (ಕುಶಲ್ ವಿ.ಕೆ. 18, ಚಿರಾಯುಷ್ ಪಿ. 12ಕ್ಕೆ 4, ಅಮೋಘವರ್ಷ 32ಕ್ಕೆ 3); ಸದರ್ನ್ ಕ್ರಿಕೆಟರ್ಸ್ 15.3 ಓವರ್‌ಗಳಲ್ಲಿ 50 (ನಿಕ್ಷಿತ್ ಜೈನ್ 13ಕ್ಕೆ 4, ಕುಶಾಲ್ ವಿ.ಕೆ. 6ಕ್ಕೆ 2)

ಗಾಯದ ಸಮಸ್ಯೆ ಬಗೆಹರಿಸಿ: ಹರ್ಮನ್‌ಪ್ರೀತ್

ಕೊಲಂಬೊ (ಪಿಟಿಐ): ತಂಡದ ವೇಗಿಗಳು ಪದೇ ಪದೇ ಗಾಯದ ಸಮಸ್ಯೆಗೆ ಗುರಿಯಾಗುತ್ತಿರುವ ಕುರಿತು ನಾಯಕಿ ಹರ್ಮನ್‌ಪ್ರೀತ್ ಕೌರ್ ಕಳವಳ ವ್ಯಕ್ತಪಡಿಸಿದ್ದಾರೆ. ವಿಶ್ವಕಪ್ ಟೂರ್ನಿಗೂ ಮುನ್ನ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸಹಾಯ ಸಿಬ್ಬಂದಿಗಳಿಗೆ ಸೂಚಿಸಿದ್ದಾರೆ.

ಭಾನುವಾರ ನಡೆದ ತ್ರಿಕೋನ ಸರಣಿಯ ಫೈನಲ್ ಗೆದ್ದ ನಂತರ ಮಾತನಾಡಿದ ಅವರು, 'ನಮ್ಮ ವೇಗಿಗಳು ಗಾಯದ ಸಮಸ್ಯೆ ಗುರಿಯಾಗುತ್ತಿದ್ದಾರೆ. ಇದರ ಬಗ್ಗೆ ಹೆಚ್ಚಿನ ಗಮನ ನೀಡಬೇಕಿದ್ದು ಕೋಚ್‌ಗಳು ಇದರ ಬಗ್ಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ತವರಿಗೆ ತೆರಳದ ರಿಕಿ ಪಾಂಟಿಂಗ್

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ಸಂಘರ್ಷದ ಕಾರಣಕ್ಕೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದಾಗ ಕೆಲವು ತಂಡಗಳ ವಿದೇಶಿ ಆಟಗಾರರು ತಮ್ಮ ತವರಿಗೆ ತೆರಳಿದರು.

ಆದರೆ ಪಂಜಾಬ್ ಕಿಂಗ್ಸ್ ತಂಡದ ಮುಖ್ಯ ಕೋಚ್ ಮತ್ತು ಆಸ್ಟ್ರೇಲಿಯಾದ ದಿಗ್ಗಜ ರಿಕಿ ಪಾಂಟಿಂಗ್ ಅವರು ಮಾತ್ರ ತವರಿಗೆ ಮರಳುವ ತಮ್ಮ ನಿರ್ಧಾರ ಬದಲಿಸಿ ಇಲ್ಲಿಯೇ ಉಳಿದುಕೊಂಡರು. ಅಲ್ಲದೇ ತಮ್ಮ ತಂಡದಲ್ಲಿರುವ ವಿದೇಶಿ ಆಟಗಾರರೂ ಇಲ್ಲಿಯೇ ಉಳಿಯುವಂತೆ ಮನವೊಲಿಸಿದರು. ಶನಿವಾರ ಅವರು ಆಸ್ಟ್ರೇಲಿಯಾದ ವಿಮಾನ ಏರಬೇಕಿತ್ತು. ಆದರೆ ಕೊನೆಯ ಕ್ಷಣದಲ್ಲಿ ಅವರು ತಮ್ಮ ನಿರ್ಣಯ ಬದಲಿಸಿದರು.

'ಇದು ಪಾಂಟಿಂಗ್ ಅವರ ಸ್ವಭಾವ. ಉಳಿದೆಲ್ಲ ಆಟಗಾರರಲ್ಲಿ ಧೈರ್ಯ ತುಂಬಿ ಮನಪರಿವರ್ತನೆ ಮಾಡಲು ಅವರಿಂದ ಮಾತ್ರ ಸಾಧ್ಯವಾಗಿತ್ತು' ಎಂದು ಪಂಜಾಬ್ ಕಿಂಗ್ಸ್ ಫ್ರಾಂಚೈಸಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸತೀಶ್ ಮೆನನ್ ಹೇಳಿದರು. ತಂಡದ ಆಟಗಾರರೊಂದಿಗೆ ಪಾಂಟಿಂಗ್ ನಡೆಸಿದ 'ಪೆಪ್ ಟಾಕ್' ಸಂದರ್ಭದಲ್ಲಿ ಮೆನನ್ ಕೂಡ ಹಾಜರಿದ್ದರಂತೆ.

ಮೇ 8ರಂದು ಧರ್ಮಶಾಲಾದಲ್ಲಿ ನಡೆದಿದ್ದ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಣ ಪಂದ್ಯವನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಗಿತ್ತು. ಆ ಸಂದರ್ಭದಲ್ಲಿ ತಂಡದ ಆಟಗಾರರು, ಸಿಬ್ಬಂದಿಗಳನ್ನು ರಸ್ತೆ ಮತ್ತು ರೈಲು ಪ್ರಯಾಣದ ಮೂಲಕ ದೇಶದ ರಾಜಧಾನಿಗೆ ಸುರಕ್ಷಿತವಾಗಿ ಕರೆತರಲಾಗಿತ್ತು. ಅದರಲ್ಲಿ ಪಂಜಾಬ್ ತಂಡದಲ್ಲಿ ಆಡುವ ಆಸ್ಟ್ರೇಲಿಯಾದ ಮಾರ್ಕಸ್ ಸ್ಟೊಯಿನಿಸ್, ಆ್ಯರನ್ ಹಾರ್ಡಿ, ಜೋಶ್ ಇಂಗ್ಲಿಸ್ ಮತ್ತು ಝೇವಿಯರ್ ಬಾರ್ಟಲೆಟ್ ಅವರೂ ಇದ್ದರು.

'ವಿದೇಶಗಳಿಂದ ಬಂದ ಆಟಗಾರರಿಗೆ ಇಂತಹ ತುರ್ತು ಪರಿಸ್ಥಿತಿಯ ಅರಿವು ಇರುವುದಿಲ್ಲ. ಆದ್ದರಿಂದ ಅವರು ಗಾಬರಿಗೊಳಗಾಗುವುದು ಸಹಜ. ಸ್ಟೊಯಿನಿಸ್ ಸೇರಿದಂತೆ ಎಲ್ಲ ವಿದೇಶಿ ಆಟಗಾರರೂ ತಮ್ಮ ತವರು ದೇಶಗಳಿಗೆ ಮರಳಲು ಸಿದ್ಧರಾಗಿದ್ದರು. ಆದರೆ ಪಾಂಟಿಂಗ್ ಅವರೇ ಎಲ್ಲರ ಮನವೊಲಿಸಿದರು. ಇಲ್ಲಿಯೇ ಉಳಿದುಕೊಳ್ಳುವಂತೆ ಮಾಡಿದರು' ಎಂದು ತಂಡದ ಮೂಲಗಳು ತಿಳಿಸಿವೆ.



ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಮತ್ತು ಮುಖ್ಯ ಕೋಚ್ ರಿಕಿ ಪಾಂಟಿಂಗ್ –ಪಿಟಿಐ ಚಿತ್ರ

ತಂಡದ ಎಡಗೈ ವೇಗಿ, ದಕ್ಷಿಣ ಆಫ್ರಿಕಾದ ಮಾರ್ಕೊ ಯಾನ್ಸೆನ್ ಅವರೊಬ್ಬರು ಮಾತ್ರ ತಮ್ಮ ತವರಿಗೆ ಮರಳಿದ್ದಾರೆ. ದುಬೈಗೆ ಇದ್ದ ಏಕೈಕ ವಿಮಾನದ ಮೂಲಕ ಪ್ರಯಾಣಿಸಿದರು ಎಂದೂ ಮೂಲಗಳು ತಿಳಿಸಿವೆ.

ಪಾಂಟಿಂಗ್ ಅವರ ಪ್ರಯತ್ನದಿಂದ ತಂಡದ ಬಹುತೇಕ ಎಲ್ಲ ಆಟಗಾರರೂ ಭಾರತದಲ್ಲಿಯೇ ಇದ್ದಾರೆ. ಇದೀಗ ಟೂರ್ನಿಯು ಮರು ಆರಂಭಗೊಳ್ಳುತ್ತಿರುವುದರಿಂದ ತಂಡ ಸಂಯೋಜನೆಯು ಸುಲಭವಾಗಲಿದೆ. ಮುಂಬರುವ ಹಂತದಲ್ಲಿ ತಂಡಕ್ಕೆ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗಬಹುದು ಎಂದೂ ಫ್ರಾಂಚೈಸಿಯ ಮೂಲಗಳು ವಿಶ್ವಾಸ ವ್ಯಕ್ತಪಡಿಸಿವೆ.

ಭಾರತದಿಂದ ಒಟ್ಟು ನಾಲ್ವರು ಅಥ್ಲೀಟ್‌ಗಳು ಸ್ಪರ್ಧೆ


ಡೈಮಂಡ್ ಲೀಗ್: ನೀರಜ್, ಜೇನಾ ಕಣಕ್ಕೆ

ದೋಹಾ (ಪಿಟಿಐ): ಜಾವೆಲಿನ್ ಥ್ರೋ ತಾರೆ, ಒಲಿಂಪಿಯನ್ ನೀರಜ್ ಚೋಪ್ರಾ ಸೇರಿದಂತೆ ಭಾರತದ ನಾಲ್ವರು ಅಥ್ಲೀಟ್‌ಗಳು ಇದೇ 16ರಂದು ನಡೆಯಲಿರುವ ಪ್ರತಿಷ್ಠಿತ ಡೈಮಂಡ್ ಲೀಗ್ ಅಥ್ಲೆಟಿಕ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಚೋಪ್ರಾ 2023 ರಲ್ಲಿ (88.67. ಮೀ) ಪ್ರಶಸ್ತಿ ಗೆದ್ದಿದ್ದರು. 2024ರಲ್ಲಿ ಎರಡನೇ ಸ್ಥಾನ (88.36ಮೀ) ಪಡೆದಿದ್ದರು. ಹರಿಯಾಣದ ಚೋಪ್ರಾ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದರು. ಅವರೊಂದಿಗೆ ಕಿಶೋರ್ ಕುಮಾರ್ ಜೇನಾ ಕೂಡ ಇಲ್ಲಿ ಕಣಕ್ಕಿಳಿಯುತ್ತಿದ್ದಾರೆ. ಜೇನಾ ಅವರು ಹೋದ ವರ್ಷ 9ನೇ ಸ್ಥಾನ ಪಡೆದಿದ್ದರು.

ಖ್ಯಾತನಾಮ ಅಥ್ಲೀಟ್‌ಗಳಿರುವ ಪುರುಷರ ಜಾವೆಲಿನ್ ಥ್ರೋ ವಿಭಾಗದಲ್ಲಿ ತುರುಸಿನ ಪೈಪೋಟಿ ಇದೆ. ಎರಡು ಬಾರಿ ವಿಶ್ವ ಚಾಂಪಿಯನ್ ಮತ್ತು ಪ್ಯಾರಿಸ್ ಒಲಿಂಪಿಕ್ ಕೂಟದ ಕಂಚಿನ ಪದಕ ವಿಜೇತ, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್, ಜೆಕ್ ಗಣರಾಜ್ಯದ ಜೇಕಬ್ ವಾಡ್ಲೆಚ್, ಜರ್ಮನಿಯ ಜೂಲಿಯನ್ ವೆಬರ್ ಮತ್ತು ಮ್ಯಾಕ್ ದೆಹನಿಂಗ್, ಜಪಾನ್ ದೇಶದ ರಾಡೆರಿಕ್ ಗೆಂಕಿ ಡೀನ್ ಮತ್ತು ಕೆನ್ಯಾದ ಜೂಲಿಯಸ್ ಯೆಗೊ ಪೈಪೋಟಿಯಲ್ಲಿದ್ದಾರೆ.

ಈ ಲೀಗ್‌ನಲ್ಲಿ ಭಾರತದ ಗುಲ್ವೀರ್ ಸಿಂಗ್ ಅವರು ಪುರುಷರ 5000 ಮೀ ಓಟ ಮತ್ತು ಪಾರುಲ್ ಚೌಧರಿ ಅವರು ಮಹಿಳೆಯರ 3000 ಮೀ ಸ್ಟೀಪಲ್ ಚೇಸ್‌ನಲ್ಲಿ ಸ್ಪರ್ಧಿಸಲಿದ್ದಾರೆ. ಇವರಿಬ್ಬರೂ ತಮ್ಮ ವಿಭಾಗಗಳಲ್ಲಿ ರಾಷ್ಟ್ರೀಯ ದಾಖಲೆಗಳನ್ನು ಹೊಂದಿದ್ದಾರೆ.



ಕಿಶೋರ್ ಕುಮಾರ್ ಜೇನಾ ಮತ್ತು ನೀರಜ್ ಚೋಪ್ರಾ

ವಿಶ್ವಕಪ್ ಆರ್ಚರಿ ಸ್ಟೇಜ್ 2: ಭಾರತಕ್ಕೆ ಒಟ್ಟು 7 ಪದಕ

ಕಂಚು ಗೆದ್ದ ದೀಪಿಕಾ, ಸಾಲುಂಖೆ

ಕನ್ನಡ (ಪಿಟಿಐ): ಸೆಮಿಫೈನಲ್ ಆಘಾತದಿಂದ ಚೇತರಿಸಿದ ಭಾರತದ ಅನುಭವಿ ಬಿಲ್ಗಾರ್ತಿ ದೀಪಿಕಾ ಕುಮಾರಿ ಮಹಿಳೆಯರ ರಿಕರ್ವ್ ವೈಯಕ್ತಿಕ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಪಾರ್ಥ್ ಸಾಲುಂಖೆ ಅವರೂ ಮೊದಲ ಬಾರಿ ವಿಶ್ವಕಪ್ ರಿಕರ್ವ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗಳಿಸಿದರು. ಇದರೊಂದಿಗೆ ಭಾರತದ ಸ್ಪರ್ಧಿಗಳು ಭಾನುವಾರ ಮುಕ್ತಾಯಗೊಂಡ ಆರ್ಚರಿ ವಿಶ್ವಕಪ್ ಸ್ಟೇಜ್ 2 ಕೂಟದಲ್ಲಿ ಒಟ್ಟು ಏಳು ಪದಕಗಳನ್ನು ಗೆದ್ದು ಅಭಿಯಾನ ಮುಗಿಸಿದರು.

ಶನಿವಾರ ಭಾರತದ ಕಾಂಪೌಂಡ್ ವಿಭಾಗದ ಬಿಲ್ಗಾರರು ಒಟ್ಟು ಐದು ಪದಕಗಳನ್ನು ಗೆದ್ದು ಪ್ರಾಬಲ್ಯ ಮೆರೆದಿದ್ದರು. ಕೊನೆಯ ದಿನ ರಿಕರ್ವ್ ವೈಯಕ್ತಿಕ ವಿಭಾಗದಲ್ಲಿ ಎರಡು ಕಂಚಿನ ಪದಕಗಳು ಭಾರತದ ಪಾಲಾದವು.

ಹಾಲಿ ಒಲಿಂಪಿಕ್ ಚಾಂಪಿಯನ್, 21 ವರ್ಷ ವಯಸ್ಸಿನ ಲಿಮ್ ಸಿಹಿಯೋನ್ ಅವರು ಸರಿಯಾಗಿ ಒಂದು ವರ್ಷ ಹಿಂದೆ ಯಚಿಯೊನ್ ವಿಶ್ವಕಪ್‌ನ ಸೆಮಿಫೈನಲ್ ಹಂತದಲ್ಲಿ ದೀಪಿಕಾ ಅವರನ್ನು ಮಣಿಸಿದ್ದರು. ಭಾನುವಾರವೂ ದಕ್ಷಿಣ ಕೊರಿಯಾದ ಸ್ಪರ್ಧಿ, 12ನೇ ಶ್ರೇಯಾಂಕದ ದೀಪಿಕಾ ಪಾಲಿಗೆ ಒಗಟಾದರು. ಏಕಪಕ್ಷೀಯ ಪಂದ್ಯದಲ್ಲಿ ಸಿಹಿಯೋನ್ 7–1 ರಿಂದ ಗೆದ್ದರು.


ಆದರೆ ಈ ಆಘಾತದಿಂದ ಸುಧಾರಿಸಿಕೊಂಡ 30 ವರ್ಷ ವಯಸ್ಸಿನ ದೀಪಿಕಾ ಕಂಚಿನ ಪದಕದ ಪ್ಲೇ ಆಫ್ ಸುತ್ತಿನಲ್ಲಿ ದಕ್ಷಿಣ ಕೊರಿಯಾ ಮತ್ತೋರ್ವ ಬಿಲ್ಗಾರ್ತಿ ಕಾಂಗ್ ಚೇ ಅವರನ್ನು 7–3 ರಿಂದ ಮಣಿಸಿದರು.

ಇದು ಆರ್ಚರಿ ವಿಶ್ವಕಪ್‌ಗಳಲ್ಲಿ ಭಾರತದ ಬಿಲ್ಗಾರ್ತಿಗೆ 37ನೇ ಪದಕವಾಗಿದೆ. ಭಾರತದ ಅತ್ಯಂತ ಯಶಸ್ವಿ ಬಿಲ್ಗಾರ್ತಿ ಎಂಬ ಅವರ ಹಿರಿಮೆ ಇನ್ನಷ್ಟು ಗಟ್ಟಿಯಾಯಿತು.

ಪುರುಷರ ವಿಭಾಗದಲ್ಲಿ 21 ವರ್ಷ ವಯಸ್ಸಿನ ಪಾರ್ಥ್ ಸಾಲುಂಖೆ ಅವರು ಸೆಮಿಫೈನಲ್‌ನಲ್ಲಿ 1–7ರಲ್ಲಿ ಅಗ್ರ ಶ್ರೇಯಾಂಕದ ಕೊರಿಯನ್ ದಂತಕಥೆ ಕಿಮ್ ವೂಜಿನ್ ಅವರಿಗೆ ಮಣಿದಿದ್ದರು. ಒಲಿಂಪಿಕ್ಸ್‌ನಲ್ಲಿ ಹಲವು ಪದಕ ಗೆದ್ದಿರುವ ವೂಜಿನ್ ಎದುರು ಸಾಲುಂಖೆ ಕೇವಲ ಒಂದು ಪಾಯಿಂಟ್ ಗಳಿಸಲಷ್ಟೇ ಶಕ್ತರಾಗಿದ್ದರು.

ಆದರೆ ಎದೆಗುಂದದ ಭಾರತದ ಬಿಲ್ಗಾರ ಕಂಚಿನ ಪದಕಕ್ಕೆ ನಡೆದ ಪಂದ್ಯದಲ್ಲಿ ಪರಿಣಾಮಕಾರಿಯಾಗಿ ಬಾಣಪ್ರಯೋಗ ಮಾಡಿ ತಮಗಿಂತ ಮೇಲಿನ ಕ್ರಮಾಂಕದ ಫ್ರಾನ್ಸ್‌ನ ಆರ್ಚರ್ ಬ್ಯಾಪ್ಟಿಸ್ಟ್ ಆಡಿಸ್ ಅವರನ್ನು 6–4 ರಿಂದ ಸೋಲಿಸಿದರು. ಇದು ಅವರಿಗೆ ವಿಶ್ವಕ್‌ಪನಲ್ಲಿ ಚೊಚ್ಚಲ ಪದಕ.

ವಿಶ್ವಕಪ್ ಸ್ಟೇಜ್ 3 ಕೂಟ ಜೂನ್ 3 ರಿಂದ 8ರವರೆಗೆ ಟರ್ಕಿಯ ಅಂತಾಲ್ಯದಲ್ಲಿ ನಡೆಯಲಿದೆ.



ದೀಪಿಕಾ ಕುಮಾರಿ



ಪಾರ್ಥ್ ಸಾಲುಂಖೆ

ಕಿನಾನ್– ಸಬೀರಾ ಜೋಡಿಗೆ ಕಂಚು

ನಿಕೋಸಿಯಾ (ಪಿಟಿಐ): ಒಲಿಂಪಿಯನ್ ಕಿನಾನ್ ಡೇರಿಯಸ್ ಚೆನೈ ಮತ್ತು ಸಬೀರಾ ಹ್ಯಾರಿಸ್ ಅವರು ಐಎಸ್‌ಎಸ್‌ಎಫ್ ಶಾಟ್ ಗನ್ ವಿಶ್ವಕಪ್‌ನ ಅಂತಿಮ ದಿನವಾದ ಭಾನುವಾರ ಟ್ರ್ಯಾಪ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ಭಾರತದ ಜೋಡಿ ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಟರ್ಕಿಯ ತೊಲ್ಗಾ ತುನ್ಸರ್– ಪೆಲಿನ್ ಕಾಯಾ ಜೋಡಿಯನ್ನು 34–33 ರಿಂದ ಸೋಲಿಸಿತು. ಇದರೊಡನೆ ಭಾರತ ಈ ವಿಶ್ವಕಪ್ ಅನ್ನು ಒಂದು ಕಂಚಿನ ಪದಕದೊಡನೆ ಪೂರೈಸಿತು. ಈ ಸ್ಪರ್ಧೆಯಲ್ಲಿ ಚೀನಾ ಚಿನ್ನ ಗೆದ್ದರೆ, ಪೋಲೆಂಡ್ ಕಂಚಿನ ಪದಕ ತನ್ನದಾಗಿಸಿಕೊಂಡಿತು.

ಕ್ವಾಲಿಫಿಕೇಷನ್ ಸುತ್ತಿನಲ್ಲಿ 34 ತಂಡಗಳಿದ್ದು ಭಾರತದ ಜೋಡಿ ನಾಲ್ಕನೇ ಸ್ಥಾನದೊಡನೆ ಫೈನಲ್‌ಗೆ ಅರ್ಹತೆ ಪಡೆದಿತ್ತು

ವೈಯಕ್ತಿಕ ಸ್ಪರ್ಧೆಯಲ್ಲಿ ಹಿನ್ನಡೆ: ಇದಕ್ಕೆ ಮೊದಲು, ಶನಿವಾರ ನಡೆದ ಟ್ರ್ಯಾಪ್ ವೈಯಕ್ತಿಕ ವಿಭಾಗದಲ್ಲಿ ಕಿನಾನ್ ಅವರು ಅರ್ಹತಾ ಸುತ್ತಿನ ಅಂತಿಮ ರ್‍ಯಾಂಕಿಂಗ್‌ನಲ್ಲಿ 17ನೇ ಸ್ಥಾನ ಪಡೆದಿದ್ದರು. ಶಾರ್ದೂಲ್ ವಿಹಾನ್ ಮತ್ತು ಭೌನೀಶ್ ಮೆಂಡಿರಟ್ಟಾ ಅವರು ಕ್ರಮವಾಗಿ 62 ಮತ್ತು 65ನೇ ಸ್ಥಾನ ಗಳಿಸಿದರು.

ಏಷ್ಯನ್ ಬ್ಲಿಟ್ಜ್ ಚೆಸ್ ಚಾಂಪಿಯನ್‌ಷಿಪ್‌ನ ಓಪನ್

ಕಾರ್ತಿಕೇಯನ್, ಪದ್ಮಿನಿಗೆ ನಾಲ್ಕನೇ ಸ್ಥಾನ

ಅಲ್ ಐನ್ (ಯುಎಇ), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಮುರಳಿ ಕಾರ್ತಿಕೇಯನ್ ಅವರು ಏಷ್ಯನ್ ಬ್ಲಿಟ್ಜ್ ಚಾಂಪಿಯನ್‌ಷಿಪ್‌ನ ಓಪನ್ ವಿಭಾಗದಲ್ಲಿ ನಾಲ್ಕನೇ ಸ್ಥಾನ ಪಡೆದರು. ಮಹಿಳೆಯರ ವಿಭಾಗದಲ್ಲಿ ಪದ್ಮಿನಿ ರಾವುತ್ ಅವರೂ ನಾಲ್ಕನೇ ಸ್ಥಾನ ಗಳಿಸಿ ಭಾರತದ ಪರ ಉತ್ತಮ ಸಾಧನೆ ತೋರಿದ ಆಟಗಾರ್ತಿ ಎನಿಸಿದರು.

ರಷ್ಯಾವನ್ನು ಪ್ರತಿನಿಧಿಸುತ್ತಿರುವ, ಆದರೆ ಫಿಡೆ ಧ್ವಜದಡಿ ಆಡಿದ 15 ವರ್ಷ ವಯಸ್ಸಿನ ಗ್ರ್ಯಾಂಡ್‌ಮಾಸ್ಟರ್ ಇವಾನ್ ಝುಮ್ಲಿಯಾನ್‌ಸ್ಕಿಯಾ ಅವರು ಓಪನ್ ವಿಭಾಗದಲ್ಲಿ ಚಾಂಪಿಯನ್ ಕಿರೀಟ ಧರಿಸಿದರು. ಈ ಪ್ರತಿಭಾನ್ವಿತ ಆಟಗಾರ 9 ಸುತ್ತುಗಳಿಂದ 8 ಪಾಯಿಂಟ್ಸ್ ಕಲೆಹಾಕಿ ಅಜೇಯರಾಗುಳಿದರು. ಇರಾನ್‌ನ 15 ವರ್ಷ ವಯಸ್ಸಿನ ಸಿನಾ ಮೊಹವೆದ್ (7.5) ಮತ್ತು ರಷ್ಯಾದ ರುಡಿಕ್ ಮಕಾರಿನ್ (7) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು. ಮುರಳಿ ಸಹ ಏಳು ಪಾಯಿಂಟ್ ಪಡೆದರೂ ಕಡಿಮೆ ಟೈಬ್ರೇಕ್ ಸ್ಕೋರ್ ಕಾರಣ ನಾಲ್ಕನೇ ಸ್ಥಾನ ಪಡೆದರು. ಇಷ್ಟೇ ಪಾಯಿಂಟ್ ಪಡೆದ ಭಾರತದ ನೀಲಾಶ್ ಸಹ (7) ಐದನೇ ಸ್ಥಾನ ಪಡೆದರು.

ಮಾಜಿ ವಿಶ್ವ ಬ್ಲಿಟ್ಜ್ ಚಾಂಪಿಯನ್ ಅಲೆಕ್ಸಾಂಡರ್ ಗ್ರಿಷ್ಚುಕ್ ಅವರು ಅಗ್ರ ಆರರೊಳಗೆ ಸ್ಥಾನ ಪಡೆಯಲಿಲ್ಲ. ಗ್ರಿಷ್ಚುಕ್ ಅವರು ಈ ಚಾಂಪಿಯನ್‌ಷಿಪ್‌ಗೆ ಪತ್ನಿ ಗ್ರ್ಯಾಂಡ್‌ಮಾಸ್ಟರ್ ಕ್ಯಾತರಿನಾ ಲಾಗ್ನೊ ಅವರೊಡನೆ ಆಡಲು ಬಂದಿದ್ದರು.

ಭಾರತದ ಗ್ರ್ಯಾಂಡ್‌ಮಾಸ್ಟರ್, ನಿಹಾಲ್ ಸರಿನ್ ವೇಗದ ಆಟಕ್ಕೆ ಹೆಸರು ಮಾಡಿದ್ದರೂ, ಈ ವಿಭಾಗದಲ್ಲಿ ಆಡದಿರಲು ನಿರ್ಧರಿಸಿದರು.

ಮಹಿಳೆಯರ ವಿಭಾಗದಲ್ಲಿ, ಕಜಕಸ್ತಾನದ ಅಲುವಾ ನುರ್ಮಾನ್ ಮತ್ತು ರಷ್ಯಾದ ವೆಲೆಂಟಿನಾ ಗುನಿನಾ ಅವರು ತಲಾ 7.5 ಪಾಯಿಂಟ್ಸ್ ಕಲೆಹಾಕಿದರೂ, ಟೈಬ್ರೇಕ್ ಆಧಾರತದಲ್ಲಿ ನುರ್ಮಾನ್ ಅಗ್ರಸ್ಥಾನ ಪಡೆದರು. ಚೀನಾದ ಯುಕ್ಸಿನ್ ಸಾಂಗ್ ಮತ್ತು ಭಾರತದ ಪದ್ಮಿನಿ ರಾವುತ್ ತಲಾ ಏಳು ಪಾಯಿಂಟ್ಸ್ ಸಂಗ್ರಹಿಸಿದರೂ, ಉತ್ತಮ ಪ್ರೊಗ್ರೆಸಿವ್ ಸ್ಕೋರ್‌ನಿಂದಾಗಿ ಚೀನಾದ ಸ್ಪರ್ಧಿ ಮೂರನೇ ಸ್ಥಾನ ಗಳಿಸಿದರು.

ನಿರುಪಮಾ ದೇವಿಗೆ ಕೈತಪ್ಪಿದ ಕಂಚು

ಜಿಯಾಂಗ್‌ಶಾನ್ (ಚೀನಾ): ಭಾರತದ ವೇಟ್ ಲಿಫ್ಟರ್ ನಿರುಪಮಾ ದೇವಿ ಏಷ್ಯನ್ ವೇಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಮಹಿಳೆಯರ 64ಕೆ.ಜಿ ವಿಭಾಗದಲ್ಲಿ ನಾಲ್ಕನೇ ಸ್ಥಾನ ಪಡೆದರು. ಅವರು ಕ್ಲೀನ್ ಅಂಡ್ ಜರ್ಕ್ ವಿಭಾಗದಲ್ಲಿ ಎರಡು ಸಲ ವಿಫಲರಾದರು.

24 ವರ್ಷದ ಏಷ್ಯನ್ ಯೂತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್ ಪದಕವಿಜೇತೆ, ನಾನ್ ಒಲಿಂಪಿಕ್ ವಿಭಾಗದಲ್ಲಿ ಕ್ಲೀನ್ ಅಂಡ್ ಜರ್ಕ್ ವಿಭಾಗದಲ್ಲಿ 115 ಕೆ.ಜಿ ಭಾರ ಎತ್ತುವಲ್ಲಿ ಮಾತ್ರ ಸಫಲರಾದರು. 125 ಕೆ.ಜಿ. ಭಾರ ಎತ್ತುವಲ್ಲಿ ವಿಫಲರಾದರು. ಸ್ನ್ಯಾಚ್ ವಿಭಾಗದಲ್ಲಿ 91ಕೆ.ಜಿ. ಭಾರ ಎತ್ತಿ ಒಟ್ಟು 206 ಕೆ.ಜಿ. ಭಾರ ಎತ್ತಿದ್ದರು.

ಒಂದು ವೇಳೆ 125 ಕೆ.ಜಿ. ಭಾರ ಎತ್ತಿದ್ದರೆ ನಿರುಪಮಾ ದೇವಿ ಅವರು ದಕ್ಷಿಣ ಕೊರಿಯಾದ ಮುನ್ ಮಿನ್–ಹೀ 214 ಕೆ.ಜಿ (94.ಕೆ.ಜಿ + 120 ಕೆ.ಜಿ) ಅವರನ್ನು ಹಿಂದಿಕ್ಕಬಹುದಿತ್ತು. ಮಿನ್ ಹೀ ಕಂಚು ಪಡೆದರು.

ಚೀನಾದ ಲೀ ಶುಹಾಂಗ್ 239 ಕೆ.ಜಿ. (105 + 134ಕೆ.ಜಿ) ಚಿನ್ನ ಗೆದ್ದರು. ಫಿಲಿಪಿನಾದ ಲಿಫ್ಟರ್ ಎಲ್‌ರೀನ್ ಆನ್ ಆ್ಯಂಡೊ 232ಕೆ.ಜಿ (102 + 130ಕೆಜಿ) ಬೆಳ್ಳಿ ಗೆದ್ದರು. ಭಾರತದ ದಿಲ್ಬರ್ ಸಿಂಗ್ ಮಂಗಳವಾರ ನಡೆಯಲಿರುವ ಪುರುಷರ 96 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.



ಚೀನಾದ ಗುವಾಂಗ್ಜುನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ರಿಲೆಯಲ್ಲಿ ಮಹಿಳೆಯರ 4X100 ಮೀ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದ ಬ್ರಿಟನ್ ತಂಡ (ಎಡದಿಂದ); ಸಕ್ಸಸ್ ಎಡುವಾನ್, ಎಮಿ ಹಂಟ್, ಬಿಯಾಂಕಾ ವಿಲಿಯಮ್ಸ್ ಹಾಗೂ ವೆಡ್ಡರ್‌ಬರ್ಸ್ ಗೂಡಿಸನ್ ಸಂಭ್ರಮಿಸಿದರು ಎಎಫ್‌ಪಿ ಚಿತ್ರ

ಭಾರತ ರಿಲೆ ತಂಡಗಳಿಗೆ ಸಿಗದ ವಿಶ್ವ ಅಥ್ಲೆಟಿಕ್ಸ್ ಟಿಕೆಟ್

ಗುವಾಂಗ್ಜು(ಪಿಟಿಐ): ಭಾರತದ ಅಥ್ಲೀಟ್‌ಗಳು ವಿಶ್ವ ಅಥ್ಲೆಟಿಕ್ಸ್ ರಿಲೆ ಚಾಂಪಿಯನ್‌ಷಿಪ್‌ನಲ್ಲಿ ಬರಿಗೈಯಲ್ಲಿ ಹೊರಬಿದ್ದರು.

4X400 ಮೀ ರಿಲೆಯ ಪುರುಷ ಮತ್ತು ಮಿಶ್ರ ವಿಭಾಗಗಳ ರಿಲೆಯಲ್ಲಿ ಭಾರತ ತಂಡಗಳು ವಿಶ್ವ ಚಾಂಪಿಯನ್‌ಷಿಪ್ ಪ್ರವೇಶದ ಅರ್ಹತಾ ಮಟ್ಟವನ್ನು ತಲುಪುವಲ್ಲಿ ವಿಫಲವಾದವು.

ಮಿಶ್ರ ವಿಭಾಗದ ಎರಡನೇ ಹೀಟ್ಸ್‌ನಲ್ಲಿ ಸಂತೋಷ್ ಕುಮಾರ್ ತಮಿಳರಸನ್, ರೂಪಲ್ ಚೌಧರಿ, ತೆನ್ನರಸು ಕಾವಾಲ್‌ವಿಝಿ ವಿಶಾಲ್ ಮತ್ತು ಶುಭಾ ವೆಂಕಟೇಶನ್ ಅವರಿದ್ದ ತಂಡವು 3 ನಿಮಿಷ, 14.81ಸೆಕೆಂಡುಗಳಲ್ಲಿ ಗುರಿ ಮುಟ್ಟಿತು. ನಾಲ್ಕನೇ ಸ್ಥಾನ ಪಡೆಯಿತು. ಎರಡು ಹೀಟ್ಸ್‌ನಲ್ಲಿ ಕ್ರಮವಾಗಿ ಅಗ್ರ ಮೂರು ತಂಡಗಳು ವಿಶ್ವ ಅಥ್ಲೆಟಿಕ್ಸ್‌ಗೆ ಅರ್ಹತೆ ಗಿಟ್ಟಿಸುತ್ತವೆ. ಸೆಪ್ಟೆಂಬರ್ 13 ರಿಂದ 21ರವರೆಗೆ ಟೋಕಿಯೊದಲ್ಲಿ ವಿಶ್ವ ಅಥ್ಲೆಟಿಕ್ಸ್ ನಡೆಯಲಿದೆ. ಪುರುಷರ ವಿಭಾಗದಲ್ಲಿ ಜಯಕುಮಾರ್, ಧರಮ್‌ವೀರ್ ಚೌಧರಿ, ತೆಕ್ಕಿನಲಿಲ್ ಸಾಜಿ ಮನು ಮತ್ತು ರಿನ್ಸ್ ಜೋಸೆಫ್ ಅವರಿದ್ದ ಭಾರತ ರಿಲೆ ತಂಡವು 3 ನಿಮಿಷ, 4.49 ಸೆಕೆಂಡುಗಳಲ್ಲಿ ಗುರಿ ತಲುಪಿತು.

ಕಾಂಗರೂ ನೆಲದಲ್ಲಿ ತ್ರಿಶತಕ ಗಳಿಸಿದ್ದ ಮೊದಲ ಬ್ಯಾಟರ್

ಆಸ್ಟ್ರೇಲಿಯಾ ಕ್ರಿಕೆಟಿಗ ಬಾಬ್ ಕೌಪರ್ ನಿಧನ

ಮೆಲ್ಬರ್ನ್ (ಎಪಿ): ಆಸ್ಟ್ರೇಲಿಯಾದ ನೆಲದಲ್ಲಿ ಮೊದಲ ಟೆಸ್ಟ್ ತ್ರಿಶತಕ ಬಾರಿಸಿದ್ದ ಎಡಗೈ ಬ್ಯಾಟರ್ ಬಾಬ್ ಕೌಪರ್ (84) ಅವರು ಅನಾರೋಗ್ಯದಿಂದ ನಿಧನರಾಗಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ.

ಕೌಪರ್ ಅವರು 1964 ರಿಂದ 1968ರ ಅವಧಿಯಲ್ಲಿ 27 ಟೆಸ್ಟ್ ಪಂದ್ಯಗಳನ್ನು ಆಡಿದ್ದು 46.84ರ ಉತ್ತಮ ಸರಾಸರಿಯಲ್ಲಿ 2,061 ರನ್ ಗಳಿಸಿದ್ದರು. ಇದರಲ್ಲಿ ಐದು ಶತಕಗಳಿದ್ದವು. ಸಾಂದರ್ಭಿಕ ಆಫ್ ಸ್ಪಿನ್ನರ್ ಆಗಿ ಅವರು 36 ವಿಕೆಟ್‌ಗಳನ್ನು ಪಡೆದಿದ್ದರು.

ಸ್ಟ್ರೋಕ್ ಪ್ಲೇ ಜೊತೆಗೆ ಎಚ್ಚರಿಕೆ – ಎರಡೂ ಶೈಲಿಯ ಆಟಕ್ಕೆ ಕೌಪರ್ ಹೆಸರಾಗಿದ್ದರು. ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ 1966ರ ಫೆಬ್ರುವರಿಯಲ್ಲಿ ಅವರು ಇಂಗ್ಲೆಂಡ್ ವಿರುದ್ಧ ಟೆಸ್ಟ್ ಪಂದ್ಯವೊಂದರಲ್ಲಿ 12 ಗಂಟೆ ಆಡಿ 307 ರನ್ (589 ಎಸೆತ) ಗಳಿಸಿದ್ದು ಪ್ರಸಿದ್ಧಿ ಪಡೆದಿತ್ತು.

ಆ ಶತಕ ಎಂಸಿಜಿಯಲ್ಲಿ 20ನೇ ಶತಮಾನದಲ್ಲಿ ದಾಖಲಾದ ಏಕೈಕ ಟೆಸ್ಟ್ ತ್ರಿಶತಕ. ಆ ಕಾಲದಲ್ಲಿ ಟೆಸ್ಟ್ ಇತಿಹಾಸದ ಹತ್ತನೇ ತ್ರಿಶತಕ ಎನಿಸಿತ್ತು. ಆ ಟೆಸ್ಟ್‌ಗೆ ಮೊದಲು ಆಡಿಲೇಡ್‌ನಲ್ಲಿ ಅವರು 12ನೇ ಆಟಗಾರನಾಗಿದ್ದರು.

ಮೆಲ್ಬರ್ನ್ ಅವರ ತವರು ಮೈದಾನವಾಗಿದ್ದು ಅಚ್ಚುಮೆಚ್ಚಿನದ್ದಾಗಿತ್ತು. ಇಲ್ಲಿ 75.78ರ ಸರಾಸರಿಯಲ್ಲಿ ರನ್ ಗಳಿಸಿದ್ದಾರೆ. ಇದು ಡಾನ್ ಬ್ರಾಡ್ಮನ್ ಅವರ ನಂತರ ಅತ್ಯಧಿಕ ಸರಾಸರಿ ಎನಿಸಿದೆ. 1968ರಲ್ಲಿ ನಿವೃತ್ತರಾದ ನಂತರ ಅವರು ಸ್ಟಾಕ್‌ಬ್ರೋಕರ್ (ಷೇರು ವ್ಯವಹಾರ) ಆದರು. ಮುಂದೆ ಅವರು ಮ್ಯಾಚ್ ರೆಫರಿ ಸಹ ಆದರು.

ಕ್ರಿಕೆಟ್‌ನಲ್ಲಿ ಸಲ್ಲಿಸಿದ ಸೇವೆಗಾಗಿ 2023ರಲ್ಲಿ ಅವರಿಗೆ ಮೆಡಲ್ ಆಫ್ ದಿ ಆರ್ಡರ್ ಆಫ್ ಆಸ್ಟ್ರೇಲಿಯಾ ಗೌರವ ಸಂದಿತ್ತು.

ಕೌಪರ್ ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರಿಯರು ಇದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ.



ಬಾಬ್ ಕೌಪರ್ – ಎಕ್ಸ್ ಚಿತ್ರ